ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 13 ಭಾನುವಾರ 2022

ಸಂಪುಟ: 43 | ಸಂಚಿಕೆ: 206 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ವಂದೇ ಭಾರತ್ ಎಕ್ಸ್‌ಪ್ರೆಸ್‌ನಲ್ಲಿ ಮೊದಲ ದಿನ

ಮೈಸೂರಿಂದ 220 ಮಂದಿ ಸಂತಸದಾಯಕ ಪಯಣ

ಚೆನ್ನೈನಿಂದ ಮೈಸೂರಿಗೆ ಬಂದದ್ದೇ ಗೊತ್ತಾಗಲಿಲ್ಲ... ಅತ್ಯಂತ ಸುಖದಾಯಕ ಪಯಣ... ಪ್ರತಿ ಪ್ರಯಾಣಿಕರದ್ದು ಮಸ್ತ್ ಮೆಚ್ಚುಗೆ



ಮೈಸೂರು, ನ.12(ಆರ್‌ಕೆ)– ಮೈಸೂರು–ಚೆನ್ನೈ ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಅಧಿಕೃತವಾಗಿ ಇಂದಿನಿಂದ ಸಂಚಾರ ಆರಂಭಿಸಿತು. ನಿಗದಿತ ಸಮಯ ಮಧ್ಯಾಹ್ನ 12.20ಕ್ಕೆ ಮೈಸೂರು ತಲುಪಿದ ಈ ರೈಲಿನಲ್ಲಿ 350ಕ್ಕೂ ಹೆಚ್ಚು ಮಂದಿ ಚೆನ್ನೈ ಮತ್ತು ಬೆಂಗಳೂರಿಂದ ಆಗಮಿಸಿದರು.


ಮೈಸೂರಿಂದ ಚೆನ್ನೈಗೆ ಮಧ್ಯಾಹ್ನ 1.05 ಗಂಟೆಗೆ ಪ್ರಯಾಣ ಬೆಳೆಸಿದ ಸದರಿ ರೈಲಿನಲ್ಲಿ 250ಕ್ಕೂ ಹೆಚ್ಚು ಮಂದಿ ತೆರಳಿದರು. ಚೆನ್ನೈನಿಂದ ಬಂದ ವಿಜಯನಗರ 2ನೇ ಹಂತದ ನಿವಾಸಿ ಎಸ್.ಜೆ.ದಿವಾಕರ ಅತೀವ ಸಂತಸ ವ್ಯಕ್ತಪಡಿಸಿದರು. ಇಂದು ಮುಂಜಾನೆ 5.35 ಗಂಟೆಗೆ ಚೆನ್ನೈ ರೈಲು ನಿಲ್ದಾಣದಿಂದ ಹೊರಟ ವಂದೇ ಭಾರತ್ ಎಕ್ಸ್‌ಪ್ರೆಸ್, ಬೆಳಗ್ಗೆ 10.35 ಗಂಟೆಗೆ ಬೆಂಗಳೂರು ತಲುಪಿತು. ನಾವು ಬಂದದ್ದೇ ಗೊತ್ತಾಗಲಿಲ್ಲ. ಬೆಂಗಳೂರಲ್ಲಿ ಕೇವಲ ಐದು ನಿಮಿಷ ನಿಲುಗಡೆ ನಂತರ ಮೈಸೂರಿನತ್ತ ಪ್ರಯಾಣ ಮುಂದುವರೆಸಿತು. ಮಧ್ಯಾಹ್ನ ಸರಿಯಾಗಿ 12.20ಕ್ಕೆ ಮೈಸೂರು ತಲುಪಿದೆವು. ಹವಾ ನಿಯಂತ್ರಿತ ನಿರಾಯಾಸ ಪ್ರಯಾಣ. ಅಗಲವಾದ ಗಾಜಿನ ಕಿಟಕಿಗಳಿರುವುದರಿಂದ ಒಳಗೆ ಸಾಕಷ್ಟು ಬೆಳಕು ಹಾಗೂ ಹೊರಗಡೆಯ ದೃಶ್ಯ ಸವಿಯುವುದರಿಂದ ವಿಶೇಷ ಅನುಭವವಾಯಿತು ಎಂದರು. ನಾನು ಹಲವು ಬಾರಿ ಹೆಲಿಕಾಪ್ಟರ್, ಏರೋಪ್ಲೇನ್‌ನಲ್ಲಿ ಸಂಚರಿಸಿದ್ದೇನೆ ಆದರೆ, ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಆದ ಅನುಭವವೇ ಬೇರೆ. ಅದನ್ನು ಮಾತುಗಳಲ್ಲಿ ಹೇಳುವುದಕ್ಕಿಂತ ಸ್ವತಃ ಪ್ರಯಾಣಿಸಿ ಅನುಭವ ಪಡೆದಾಗಲೇ ಈ ರೈಲುಗಾಡಿ ಎಷ್ಟು ಐಷಾರಾಮಿಯಾಗಿದೆ ಎಂಬುದು ತಿಳಿಯುತ್ತದೆ ಎಂದು ಜೆ.ಪಿ.ನಗರದ ಯುವತಿ ವೈ.ಬಿ.ರೂಪಶ್ರೀ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದರ ಸ್ವಲ್ಪ ದುಬಾರಿ ಎನಿಸಿದರೂ, ಅದರಲ್ಲಿ ಪ್ರಯಾಣಿಸಿದ ನಂತರ ನಾವು ಕೊಡುವ ಹಣಕ್ಕೆ ಸೂಕ್ತ ಸೌಲಭ್ಯವಿದೆ ಎಂದೆನಿಸುತ್ತದೆ ಎಂದು ವಿದ್ಯಾರಣ್ಯಪುರಂ ನಿವಾಸಿ ಶಿವಶಂಕರ ಪ್ರತಿಕ್ರಿಯಿಸಿದರು. ಈ ರೈಲಿನಲ್ಲಿ ಪ್ರಯಾಣಿಸುತ್ತಿದ್ದರೆ ಭಾರೀ ನಿಶ್ಶಬ್ಧ. ಪ್ರಯಾಣ ಸುಖಕರವಾಗಿತ್ತು ಎಂದು ಅಭಿಪ್ರಾಯಪಟ್ಟರು. ನಾವು ಹತ್ತಿರ ಹೋಗುತ್ತಿದ್ದಂತೆಯೇ ಬೋಗಿಗಳ ಬಾಗಿಲು ಸ್ವಯಂ ತೆರೆದುಕೊಳ್ಳುತ್ತವೆ. ಅವಾಗಿಯೇ ಬಂದ್ ಆಗುತ್ತವೆ. ಸ್ವಚ್ಛ ಹೈಟೆಕ್ ಶೌಚಾಲಯ, ಆರಾಮದಾಯಕ ಆಸನಗಳು, ಯಾವ ನೂಕು–ನುಗ್ಗಲಿಲ್ಲ. ಬೆಂಗಳೂರಿನಿಂದ ಮೈಸೂರಿಗೆ ಸುಖಕರ ಪ್ರಯಾಣ ನೆಮ್ಮದಿ ತಂದಿತು ಎಂದು ಹೆಬ್ಬಾಳಿನ ಎಸ್. ಮಹದೇವು ಮತ್ತು ಕುಂಬಾರಕೊಪ್ಪಲಿನ ಚಂದ್ರಶೇಖರ್, ವಂದೇ ಭಾರತ್ ಎಕ್ಸ್‌ಪ್ರೆಸ್ ಪ್ರಯಾಣದ ಸುಖಾನುಭವವನ್ನು ಹಂಚಿಕೊಂಡರು.

ಮೊದಲ ದಿನದ ವಂದೇ ಭಾರತ್ ರೈಲಿನ ಪ್ರಯಾಣದ ಬಗ್ಗೆ ಭಾರೀ ಮೆಚ್ಚುಗೆ ವ್ಯಕ್ತವಾಗಿದ್ದು, ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ತೋರಿದ ಆತಿಥ್ಯ ಅದ್ಭುತವಾಗಿತ್ತು. ಈ ಹೈಸ್ಪೀಡ್ ರೈಲಿನಲ್ಲಿ ಮತ್ತೊಮ್ಮೆ ಸಂಚರಿಸಬೇಕೆಂದೆನಿಸಿತೆಂದು ಹನುಮಂತನಗರದ ಮೊಹಮದ್ ತೌಶಿಫ್ ನುಡಿದರು. ಈ ರೈಲಿನಲ್ಲಿ ಚೆನ್ನೈನಿಂದ ಬಂದವರು, ಇಲ್ಲಿ ನೀಡಿದ ಉಪಾಹಾರದ ಬಗ್ಗೆ ಅತೀವ ಮೆಚ್ಚುಗೆ ವ್ಯಕ್ತಪಡಿಸಿದರು. ರುಚಿಕರ ಹಾಗೂ ಗುಣಮಟ್ಟದಿಂದ ಕೂಡಿತ್ತು ಎಂದು ತೃಪ್ತಿ ವ್ಯಕ್ತಪಡಿಸಿದರು.

ಉರುಳಿಗೆ ಹೆಣ್ಣುಲಿ ಬಲಿ

- ಎರಡು ತಿಂಗಳ ಹಿಂದಷ್ಟೇ ಮೂರು ಪುಟ್ಟ ಮರಿಗಳೊಂದಿಗೆ ಪ್ರತ್ಯಕ್ಷವಾಗಿದ್ದ 'ನಾಯಂಜಿ ಕಟ್ಟೆ ಫೀಮೇಲ್'
- ಬೇಟೆಗೆ ಸಮರ್ಥವಿಲ್ಲದ ತಬ್ಬಲಿ ಮರಿಗಳ ರಕ್ಷಣೆಗೆ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ
- ಕಾಡು ಹಂದಿಗೆ ಹಾಕಿದ ಉರುಳಿಗೆ ಹೆಣ್ಣುಲಿ ಬಲಿಯಾಗಿರುವ ಶಂಕೆ; ಅರಣ್ಯ ಕಾಯ್ದೆಯಂತೆ ಹುಲಿ ಅಂತಿಮ ಕ್ರಿಯೆ





ಎಂ.ಟಿ.ಯೋಗೇಶ್ ಕುಮಾರ್

ಹೆಚ್.ಡಿ.ಕೋಟೆ, ನ.12–ಕಳೆದ ಎರಡು ತಿಂಗಳ ಹಿಂದೆಯಷ್ಟೇ ಮೂರು ಪುಟ್ಟ ಮರಿಗಳೊಂದಿಗೆ ಕಬಿನಿ ಸಫಾರಿ ವಲಯದಲ್ಲಿ ಪ್ರವಾಸಿಗರಿಗೆ ದರ್ಶನ ನೀಡಿದ್ದ 'ನಾಯಂಜಿ ಕಟ್ಟೆ ಫೀಮೇಲ್' ಎಂದೇ ಕರೆಯಲ್ಪಡುತ್ತಿದ್ದ ಹುಲಿ ಬೇಟೆಗಾರರ ಉರುಳಿಗೆ ಬಲಿಯಾಗಿದೆ.

ಈ ಹೆಣ್ಣು ಹುಲಿಯ, ಕೇವಲ ಎಂಟು ತಿಂಗಳ ಮೂರು ಪುಟ್ಟ ಮರಿಗಳು ಈಗ ತಬ್ಬಲಿಗಳಾಗಿವೆ. ಬೇಟೆಯಾಡಲು ಇನ್ನೂ ಸಮರ್ಥವಲ್ಲದ ಈ ಮರಿಗಳ ರಕ್ಷಣೆಗೆ ಅರಣ್ಯ ಇಲಾಖೆ ಸಿಬ್ಬಂದಿ ಮುಂದಾಗಿದೆ. ಸಾಮಾನ್ಯವಾಗಿ ತಾಯಿ ಹುಲಿ, ಮರಿಗಳಿಗೆ ಮೂರು ತಿಂಗಳಿಂದಲೇ ಸಣ್ಣಪುಟ್ಟ ಪ್ರಾಣಿಗಳ ಬೇಟೆ ಜಾಡು ಕಲಿಸಲು ಆರಂಭಿಸುತ್ತದೆ. ಜೊತೆಗೆ ತಾನೇ ಸಣ್ಣ ಪ್ರಾಣಿಗಳನ್ನು ಬೇಟೆಯಾಡಿ ಮರಿಗಳಿಗೆ ಆಹಾರ ಒದಗಿಸುತ್ತದೆ. ಹೀಗೆ ಎರಡು ವರ್ಷಗಳವರೆಗೂ ತಾಯಿಯ ಆರೈಕೆಯಲ್ಲಿರುವ ಮರಿಗಳು ನಂತರ ಬೇರ್ಪಡುತ್ತವೆ. ಹೀಗಿರುವಾಗ ಇದೀಗ ತಾಯಿ ಇಲ್ಲದೇ ತಬ್ಬಲಿಯಾಗಿರುವ ಈ ಮರಿಗಳ ಸ್ಥಿತಿಗತಿ ಬಗ್ಗೆ ಅರಣ್ಯಾಧಿಕಾರಿಗಳಿಗೆ ತಲೆ ಬಿಸಿಯಾಗಿದೆ. ಮರಿಗಳಿಗಾಗಿ ಅರಣ್ಯ ಸಿಬ್ಬಂದಿ ಹುಡುಕಾಟ ಆರಂಭಿಸಿದ್ದಾರೆ. ತಾಯಿ ಹುಲಿ ಉರುಳಿಗೆ ಬಲಿಯಾದ ಪ್ರದೇಶದ ಸುತ್ತಮುತ್ತ 30 ಕ್ಯಾಮರಾ ಟ್ರಾಪ್‌ಗಳನ್ನು ಅಳವಡಿಸಿ, ಮರಿಗಳ ಪತ್ತೆಗೆ ಅರಣ್ಯ ಇಲಾಖೆ ಮುಂದಾಗಿದೆ. ಜೊತೆಗೆ ನಾಳೆಯಿಂದಲೇ ಹುಲಿ ಮರಿಗಳಿಗಾಗಿ ಶೋಧ ಕಾರ್ಯವನ್ನೂ ಆರಂಭಿಸಲಿದ್ದಾರೆ. ▶ 8ನೇ ಪುಟಕ್ಕೆ

> 10 ವರ್ಷಕ್ಕಿಂತಲೂ ಹೆಚ್ಚು ಕಾಲ ದಸರಾ ಆನೆಗಳ ಆರೋಗ್ಯದ ಉಸ್ತುವಾರಿ ಹೊಣೆ ಹೊತ್ತಿದ್ದ ಪಶುವೈದ್ಯ ಡಾ.ನಾಗರಾಜ್ 'ಮೈಸೂರು ಮಿತ್ರ'ನ ಜೊತೆ ಮಾತನಾಡುತ್ತಾ, ಹುಲಿ ಮರಿಗಳ ಕಂಡರೆ ಬೇರೆ ಹುಲಿಗಳು ದಾಳಿ ಮಾಡುತ್ತವೆ. ಈ ಕಾರಣದಿಂದಾಗಿ ತನ್ನ ಮರಿಗಳನ್ನು ರಕ್ಷಿಸಿಕೊಳ್ಳಲು ತಾಯಿ ಹುಲಿ ಸುರಕ್ಷಿತ ಪ್ರದೇಶಕ್ಕೆ ವಲಸೆ ಹೋಗುತ್ತದೆ. ಅದೇ ರೀತಿ ಈ ಹುಲಿಯೂ ಕೂಡ ತನ್ನ ಮರಿಗಳೊಂದಿಗೆ ಅರಣ್ಯದಂಚಿಗೆ ಸ್ಥಳಾಂತರಗೊಂಡಿರಬಹುದು. ಮರಿಗಳು ಆರಂಭದಲ್ಲಿ ತಾಯಿಯ ಹಾಲನ್ನು ಕುಡಿಯುತ್ತವೆ. ಮೂರು ತಿಂಗಳ ನಂತರ ಅವುಗಳಿಗೆ ಬೇಟೆಯಾಡುವುದು, ಆಹಾರ ಸೇವನೆಗೆ ತಾಯಿ ಅನುಸರಿಸುತ್ತವೆ. ತಾಯಿ ಹುಲಿಯೇ ಸಣ್ಣಪುಟ್ಟ ಪ್ರಾಣಿಗಳನ್ನು ಬೇಟೆಯಾಡಿ ಮರಿಗಳಿಗೆ ನೀಡುತ್ತದೆ. ತಾಯಿ ಬೇಟೆಯಾಡುವ ವೈಖರಿಯನ್ನು ಅನುಕರಿಸಿ ಮರಿಗಳೂ ಬೇಟೆಯಾಡುವುದನ್ನು ಕಲಿಯುತ್ತವೆ. ಸುಮಾರು ಒಂದೂವರೆ ವರ್ಷವಾಗುತ್ತಿದ್ದಂತೆಯೇ ಮರಿಗಳು ದೊಡ್ಡ ಪ್ರಾಣಿಗಳನ್ನೂ ಬೇಟೆಯಾಡುವ ಸಾಮರ್ಥ್ಯ ಹೊಂದುತ್ತವೆ. ಕ್ರಮೇಣ ಎರಡು ವರ್ಷವಾದ ನಂತರ ತಾಯಿಯಿಂದ ಬೇರ್ಪಡುತ್ತವೆ. ಆದರೆ ಈಗ ಈ ಮರಿಗಳಿಗೆ ಒಂದೆಡೆ ತಾಯಿಯ ಹಾಲು ಇಲ್ಲದಂತಾಗಿದೆ. ಸಣ್ಣಪುಟ್ಟ ಪ್ರಾಣಿಗಳನ್ನು ಬೇಟೆಯಾಡುವ ಸಾಮರ್ಥ್ಯವಿದ್ದರೂ ಅಂತಹ ಪ್ರಾಣಿಗಳು ಮರಿಗಳಿಗೆ ದೊರೆಯಬೇಕಿದೆ. ಜೊತೆಗೆ ಬೇರೆ ಹುಲಿಗಳಿಗೆ ಈ ಮರಿಗಳು ಸಿಕ್ಕರೆ ಇವುಗಳ ಜೀವಕ್ಕೆ ಅಪಾಯ ತಪ್ಪಿದ್ದಲ್ಲ. ಈ ವಯಸ್ಸಿನ ಮರಿ ಹುಲಿಗಳು 12 ರಿಂದ 15 ದಿನ ಸಮರ್ಪಕ ಆಹಾರ ದೊರೆಯದಿದ್ದರೂ ಬದುಕಿರುತ್ತವೆ. ನಂತರ ತೀರಾ ನಿತ್ರಾಣವಾಗಿಬಿಡುತ್ತವೆ.



ಕೋಲಾರದಲ್ಲಿ ಸೆಣಸಾಡಲು ಸಿದ್ದರಾಮಯ್ಯ ನಿರ್ಧಾರ

- ಸ್ಥಳೀಯ ಹಿರಿಯ ನಾಯಕರೊಂದಿಗೆ ನಿರಂತರ ಸಭೆ–ಸಮಾಲೋಚನೆ
- ಇಂದು ಧಾರ್ಮಿಕ ಕೇಂದ್ರಗಳಿಗೆ ಭೇಟಿ; ಸಂಘ–ಸಂಸ್ಥೆಗಳೊಂದಿಗೆ ವಿಚಾರ ವಿನಿಮಯ



ಬೆಂಗಳೂರು, ನ.12(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿಯಾಗಲು ಮುಂಚೂಣಿಯಲ್ಲಿರುವ ಸಿದ್ದರಾಮಯ್ಯ ಅವರಿಗೆ ಸ್ಪರ್ಧಿಸಲು ಕ್ಷೇತ್ರದ ಸಮಸ್ಯೆ ಎದುರಾಗಿದೆ.

ವರುಣಾ, ಬಾದಾಮಿ, ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರಗಳನ್ನು ಬಿಟ್ಟು ಇದೀಗ ಕೋಲಾರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆಗಿಳಿಯಲು ಅಣಿ ಮಾಡಿಕೊಂಡಿದ್ದಾರೆ.

ಮುಂಬರುವ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿಯಾಗಲು ಸಿದ್ದರಾಮಯ್ಯ ಅವರ ಜೊತೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಉಪಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್ ಹಾಗೂ ಕಾರ್ಯಾಧ್ಯಕ್ಷ ಎಂ.ಬಿ.ಪಾಟೀಲ್ ಪೈಪೋಟಿಗಿಳಿದಿದ್ದಾರೆ. ಆದರೆ ಇವರ್‍ಯಾರಿಗೂ ಕ್ಷೇತ್ರದ ಸಮಸ್ಯೆ ಇಲ್ಲ. ರಾಜ್ಯದಲ್ಲಿ ಪ್ರಭಾವಿ ನಾಯಕರಾಗಿದ್ದರೂ, ಸಿದ್ದರಾಮಯ್ಯಗೆ ಸುರಕ್ಷಿತ ಕ್ಷೇತ್ರದ ಸಮಸ್ಯೆ ಇದೆ. ಕಳೆದ ಚುನಾವಣೆಯಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಹೀನಾಯವಾಗಿ ಸೋಲುಂಡು, ಬಾದಾಮಿ ಕ್ಷೇತ್ರದಲ್ಲಿ ಅಲ್ಪ ಮತದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. ▶ 8ನೇ ಪುಟಕ್ಕೆ

ಹಿಂದೂ ಮಹಿಳೆಯ ಶವಸಂಸ್ಕಾರಕ್ಕೆ ಹೆಗಲುಕೊಟ್ಟ ಮುಸ್ಲಿಂ ಬಾಂಧವರು...!

ಈ ಸ್ತುತ್ಯಾರ್ಹ ಕಾರ್ಯವನ್ನು ಹೃದಯತುಂಬಿ ಕೊಂಡಾಡಿದ ಸಾಮಾಜಿಕ ಕಾಳಜಿಯುಳ್ಳ ಜನತೆ



ಶಿವಮ್ಮ



ಮೈಸೂರು, ನ.12– ತಮ್ಮ ಮೊಹಲ್ಲಾದಲ್ಲಿ ವಾಸವಿದ್ದ ಹಿಂದೂ ಮಹಿಳೆಯೊಬ್ಬರ ಅಂತ್ಯಸಂಸ್ಕಾರದ ಸಂಪೂರ್ಣ ಜವಾಬ್ದಾರಿ ಹೊರುವ ಮೂಲಕ ಮುಸ್ಲಿಂ ಬಾಂಧವರು ಮಹಾ ಮಾನವೀಯತೆ ಮೆರೆಯುವುದರ ಜೊತೆಗೆ ಸೌಹಾರ್ದತೆ ಸಾರಿದ್ದಾರೆ.

ಅಂತ್ಯಸಂಸ್ಕಾರದಲ್ಲಿ ಮೃತ ಮಹಿಳೆಯ ಮಗ, ಮಗಳು, ಸೊಸೆ ಹಾಗೂ ಮೊಮ್ಮಕ್ಕಳನ್ನು ಬಿಟ್ಟರೇ ಉಳಿದಂತೆ 60ಕ್ಕೂ ಹೆಚ್ಚು ಮುಸ್ಲಿಂ ಬಾಂಧವರೇ ಭಾಗವಹಿಸಿ ಎಲ್ಲಾ ವಿಧಿವಿಧಾನಗಳನ್ನು ಹಿಂದೂ ಸಂಪ್ರದಾಯದಂತೆ ನೆರವೇರಿಸಿದ್ದು ವಿಶೇಷ. ಇದು ನಡೆದಿದ್ದು, ಮೈಸೂರಿನ ಮಂಡಿ ಮೊಹಲ್ಲಾದಲ್ಲಿರುವ ಸುನ್ನಿ ಚೌಕ್ ಪ್ರದೇಶದಲ್ಲಿ. ಮುಸ್ಲಿಂ ಬಾಂಧವರೇ ಹೆಚ್ಚಾಗಿ ವಾಸಿಸುತ್ತಿರುವ ಇಲ್ಲಿ ಶಿವಮ್ಮ ಅಲಿಯಾಸ್ ಕುಳ್ಳಿ ಎಂಬ ಮಹಿಳೆ ಕಳೆದ ಸುಮಾರು 30 ವರ್ಷದಿಂದಲೂ ಗುಡಿಸಲೊಂದರಲ್ಲಿ ವಾಸಿಸುತ್ತಿದ್ದರು. ಆಕೆಗೆ ಮಗ, ಮಗಳು ಇದ್ದರೂ ಕೂಡ ಅವರಲ್ಲಿಗೆ ಹೋಗದೇ ಇಲ್ಲಿನ ಗುಡಿಸಲಿನಲ್ಲಿಯೇ ವಾಸಿಸುತ್ತಿದ್ದರು. ಮಗ ಮಾತ್ರ ಕೆಲವೊಮ್ಮೆ ಬಂದು ತಾಯಿಯನ್ನು ಮಾತನಾಡಿಸಿಕೊಂಡು ಹೋಗುತ್ತಿದ್ದ ಎಂದು ಸ್ಥಳೀಯರು ಹೇಳುತ್ತಾರೆ. ಶಿವಮ್ಮ ಅವರು ನಿನ್ನೆ (ಶುಕ್ರವಾರ) ಸಂಜೆ 7.30ರ ▶ 8ನೇ ಪುಟಕ್ಕೆ


ಇಂದು ಟಿ20 ವಿಶ್ವಕಪ್ ಫೈನಲ್


ಪಾಕ್–ಇಂಗ್ಲೆಂಡ್ ಪೈಪೋಟಿ ಪುಟ–2



ಬಿಟ್ಟುಬಿಡದ ತುಂತುರು ಮಳೆ, ದಟ್ಟಮಂಜು ಕವಿದಂತಹ ವಾತಾವರಣ, ಚುಮು ಚುಮು ಚಳಿ

ಮಳೆಗಾಲದ ಮಲೆನಾಡಾಯ್ತು ಮೈಸೂರು!





ಮೈಸೂರು, ನ.12(ಎಸ್‌ಬಿಡಿ)– ತುಂತುರು ಮಳೆಯಲ್ಲಿ ಮಿಂದೆದ್ದ ಮೈಸೂರಿನಲ್ಲಿ ಶನಿವಾರ ಮಲೆನಾಡಿನ ವಾತಾವರಣ ನಿರ್ಮಾಣವಾಗಿತ್ತು.

ಮೈಸೂರಿನಲ್ಲಿ ನಿನ್ನೆಯಿಂದ ಮತ್ತೆ ಮಳೆ ಆರಂಭವಾಗಿದ್ದು, ದಟ್ಟ ಮೋಡವಿರುವ ಕಾರಣ ಎರಡು ದಿನದಿಂದ ಸೂರ್ಯನ ದರ್ಶನವೇ ಆಗಿಲ್ಲ. ಇಂದು ಮುಂಜಾನೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಆಗಾಗ್ಗೆ ಕೆಲಹೊತ್ತು ಬಿರುಸಾಗಿ ಸುರಿದ ಮಳೆ ನಂತರ ಗಂಟೆಗಳ ಕಾಲ ತುಂತುರು ಹಾಕುತ್ತಿತ್ತು. ಅತೀ ಸಣ್ಣ ಚದುರಿದ ಹನಿಗಳಿಂದಾಗಿ ದಟ್ಟ ಮಂಜು ಕವಿದಂತಹ ವಾತಾವರಣ ಸೃಷ್ಟಿಯಾಗಿತ್ತು. ಶಾಲಾ–ಕಾಲೇಜು ವಿದ್ಯಾರ್ಥಿಗಳು, ಉದ್ಯೋಗಿಗಳು, ವ್ಯಾಪಾರಿಗಳು ಛತ್ರಿ, ಜರ್ಕಿನ್ ಆಸರೆಯೊಂದಿಗೆ ನಿತ್ಯ ಚಟುವಟಿಕೆ ಆರಂಭಿಸಬೇಕಾಯ್ತು. ಕೆಲವರು ಮಳೆಯಲ್ಲೇ ತೊಯ್ದು ಸಂಚರಿಸಿದ್ದೂ ಕಂಡು ಬಂದಿತು.

ಮಂಜು ಮುಸುಕು: ಅರಮನೆ ನಗರಿ ಮೈಸೂರು ಇಂದು ಮಂಜಿನ ನಗರಿಯಾಗಿ ಬದಲಾಗಿತ್ತು. ತುಂತುರು ಮಳೆಯಿಂದ ಮಂಜು ಮುಸುಕಿದ ವಾತಾವರಣ ನಿರ್ಮಾಣವಾಗಿತ್ತು. ▶ 8ನೇ ಪುಟಕ್ಕೆ

ನಾಳೆ ಮಧುಮೇಹ ಜಾಗೃತಿ ಜಾಥಾ



ಮೈಸೂರು,ನ.12(ಪಿಎಂ)–ವಿಶ್ವ ಮಧುಮೇಹ ದಿನದ ಅಂಗವಾಗಿ ಭಾನವಿ ಆಸ್ಪತ್ರೆ ವತಿಯಿಂದ ನ.14ರಂದು ಬೆಳಗ್ಗೆ 7ಕ್ಕೆ ಆಸ್ಪತ್ರೆ ಆವರಣದಿಂದ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಎನ್.ವಿಜಯ್ ಚೆಲುವರಾಜ್ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಗೃತಿ ಜಾಥಾಕ್ಕೆ ಶಾಸಕ ಎಸ್.ಎ.ರಾಮದಾಸ್ ಚಾಲನೆ ನೀಡಲಿದ್ದಾರೆ. ಆಸ್ಪತ್ರೆಯ ಸುತ್ತಮುತ್ತಲ ರಸ್ತೆಯಲ್ಲಿ ಜಾಥಾ ನಡೆಯಲಿದೆ. ಆಸ್ಪತ್ರೆಯಲ್ಲಿ ಅತ್ಯಾಧುನಿಕ ಉಪಕರಣಗಳೊಂದಿಗೆ ಕೈಗೆಟಕುವ ದರದಲ್ಲಿ ಶಸ್ತ್ರಚಿಕಿತ್ಸೆ ಲಭ್ಯವಿದ್ದು, ಇತ್ತೀಚೆಗೆ ಎರಡು ಕ್ಲಿಷ್ಟ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ಮಾಡಲಾಗಿದೆ ಎಂದರು. ಆಸ್ಪತ್ರೆ ಪ್ರಧಾನ ವ್ಯವಸ್ಥಾಪಕ ಆರ್.ಪ್ರಶಾಂತ್‌ಗೌಡ, ವೈದ್ಯರಾದ ಡಾ.ಹೆಚ್.ಎನ್.ಚಂದನ್ ಕುಮಾರ್, ಡಾ.ದೀಪಕ್ ಬಿ.ಗೌಡ, ನರ್ಸಿಂಗ್ ವಿಭಾಗದ ಅಧೀಕ್ಷಕ ಕೆ.ಎಸ್.ನಿರಂಜನ್‌ಸ್ವಾಮಿ ಗೋಷ್ಠಿಯಲ್ಲಿದ್ದರು.

ಇಂದು ವಾಕಥಾನ್: ವಿವಿ ಮೊಹಲ್ಲಾದಲ್ಲಿರುವ ನ್ಯೂ ಡಯಾಕೇರ್ ಸೆಂಟರ್ ಹಾಗೂ ನವಾಯು ಕೇರ್ ವತಿಯಿಂದ ವಿಶ್ವ ಮಧುಮೇಹ ದಿನಾಚರಣೆಯ ಅಂಗವಾಗಿ ನ.13ರ ಭಾನುವಾರರಂದು ಬೆಳಗ್ಗೆ 7 ಗಂಟೆಗೆ ಸಾರ್ವಜನಿಕರಿಗೆ 'ಮಧುಮೇಹದ ತಡೆಗೆ ನಮ್ಮ ನಡಿಗೆ –ಡಯಾಬಿಟಿಸ್' ವಾಕಥಾನ್ ಆಯೋಜಿಸಲಾಗಿದೆ.


ಚೆಲುವಾಂಬ ಪಾರ್ಕಿನಿಂದ ಆರಂಭಗೊಳ್ಳುವ ವಾಕಥಾನ್‌ಗೆ ಮೈಸೂರು ಮೇಯರ್ ಶಿವಕುಮಾರ್, ಲಯನ್ ಕೆ.ದೇವೇಗೌಡ, ಹೃದ್ರೋಗ ತಜ್ಞರಾದ ಡಾ.ಎ.ರಾಜ್‌ಗೋಪಾಲ್, ರಾಘವೇಂದ್ರ ಪ್ರಸಾದ್, ಎಸ್‌ಬಿಎಂ ಮಂಜು ಇತರ ಗಣ್ಯರು ಚಾಲನೆ ನೀಡುವರು. ಪಂಚವಟಿ ವೃತ್ತದ ಬಳಿ ಮಾನವ ಸರಪಳಿ ನಿರ್ಮಿಸಿ, ನಂತರ ವಾಕಥಾನ್ ನ್ಯೂ ಡಯಾಕೇರ್ ಸೆಂಟರ್‌ನ ಹತ್ತಿರ ಕೊನೆಗೊಳ್ಳುವುದು. ನಂತರ ಸಂಸ್ಥೆಯಲ್ಲಿ ಉಚಿತ ಮಧುಮೇಹ ತಪಾಸಣಾ ಶಿಬಿರವನ್ನು ಏರ್ಪಡಿಸಿದ್ದು, ಎಂದಿನಂತೆ ಸಂಸ್ಥೆಯು ಮಧುಮೇಹದ ರಾಯಭಾರಿಗಳನ್ನು ಗುರುತಿಸಿ ಪ್ರಶಸ್ತಿ ಪತ್ರಗಳನ್ನು ಹಾಗೂ ಉಡುಗೊರೆಗಳನ್ನು ನೀಡಿ ಪ್ರೋತ್ಸಾಹಿಸಲಾಗುವುದೆಂದು ಸಂಸ್ಥೆಯ ಮುಖ್ಯಸ್ಥರಾದ ಡಾ.ರೇಣುಕಾಪ್ರಸಾದ್ ಹಾಗೂ ಡಾ.ನವ್ಯ ತಿಳಿಸಿದ್ದಾರೆ. ವಾಕಥಾನ್‌ನಲ್ಲಿ ಭಾಗವಹಿಸುವ ಎಲ್ಲರಿಗೂ ಉಚಿತವಾಗಿ ಟಿ–ಶರ್ಟ್ ವಿತರಣೆ ಮಾಡಲಾಗುವುದು. ನೋಂದಣಿಗಾಗಿ ಸಂಪರ್ಕಿಸಿ–0821 4252800/63628 43070/9663838800.



ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ವಸತಿ ಶಾಲೆ ಮತ್ತು ಕಾಲೇಜಿನ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಗಣಪತಿ ಜಕಾತಿ, ದ್ವಿತೀಯ ಸ್ಥಾನ ಪಡೆದ ಯೋಗನರಸಿಂಹಸ್ವಾಮಿ, ತೃತೀಯ ಸ್ಥಾನ ಪಡೆದ ಕಾಳಸ್ವಾಮಿ ಅವರನ್ನು ಅಂತಾರಾಷ್ಟ್ರೀಯ ಕ್ರೀಡಾಪಟು ವಿಜಯರಮೇಶ್, ಜಿಲ್ಲಾ ಸಮನ್ವಯಾಧಿಕಾರಿ ಹೇಮ್‌ಕುಮಾರ್ ಅಭಿನಂದಿಸಿದರು.

ನ.15, 16ರಂದು ನೀರು ವ್ಯತ್ಯಯ

ಮೈಸೂರು,ನ.12–ಬೆಳಗೊಳ ಸಬ್ ಸ್ಟೇಷನ್‌ನಲ್ಲಿ ತುರ್ತು ನಿರ್ವಹಣೆ ಹಮ್ಮಿಕೊಂಡಿರುವುದರಿಂದ ನ.15 ಮತ್ತು 16ರಂದು ಸಿಎಸ್‌ಆರ್ ಮತ್ತು ಹೆಚ್‌ಎಲ್‌ಆರ್ ಪ್ರಾಂತ್ಯಗಳಿಗೆ, ವಾರ್ಡ್ ನಂ.1ರಿಂದ 7, ವಾರ್ಡ್ ನಂ.20, 23, 38, ವಾರ್ಡ್ ನಂ.42ರಿಂದ 45, ವಾರ್ಡ್ ನಂ.47, ಇದಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳು, ಕುಂಬಾರಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿ ನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ, ಎಬಿಸಿ ಲೇಔಟ್, ಈರನಗೆರೆ, ಸಿದ್ಧಿಕಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ, ಭಾಗಶಃ ಎನ್.ಆರ್.ಮೊಹಲ್ಲಾ, ಭಾಗಶಃ ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ವಿವಿ ವಾಟರ್ ವರ್ಕ್ಸ್ ಪ್ರಕಟಣೆ ತಿಳಿಸಿದೆ.



ತೋಟಗಾರಿಕೆ ಇಲಾಖೆಯಿಂದ
ಜೈವಿಕ ಪರಿಕರಗಳ ಪೂರೈಕೆ

ಮೈಸೂರು, ನ.12– ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯ ವತಿಯಿಂದ ಸಮಗ್ರ ಜೈವಿಕ ಕೇಂದ್ರವನ್ನು ಮೈಸೂರು–ಬನ್ನೂರು ಹೆದ್ದಾರಿಯಲ್ಲಿರುವ ರಂಗಸಮುದ್ರ ತೋಟಗಾರಿಕೆ ಕ್ಷೇತ್ರದಲ್ಲಿ ಪ್ರಾರಂಭಿಸಲಾಗಿದ್ದು, ರೈತರಿಗೆ ಲಭ್ಯವಿರುವ ಸವಲತ್ತುಗಳನ್ನು ರೈತರಿಗೆ ಪರಿಚಯಿಸಲು ಹಾಗೂ ಈ ಸಂಸ್ಥೆಯಲ್ಲಿ ಲಭ್ಯವಿರುವ ಜೈವಿಕ ಪರಿಕರಗಳ ಕುರಿತು ರೈತರಿಗೆ ನವನವೀನ ತಂತ್ರಜ್ಞಾನವನ್ನು ಪರಿಚಯಸಲೆಂದು ಸ್ಥಾಪನೆಯಾಗಿದೆ.

ಅಂಗಾಂಶ ಬಾಳೆ ಸಸಿಗಳನ್ನು ಉತ್ಪಾದಿಸಲು ಅತ್ಯುನ್ನತ ಮಟ್ಟದ ಹಾಗೂ ಸುಸಜ್ಜಿತವಾದ ವೈಜ್ಞಾನಿಕ ಪ್ರಯೋಗಾಲಯ ಮತ್ತು ಬಾಳೆ ಸಸಿಗಳ ನರ್ಸರಿ, ಮಣ್ಣು ಮತ್ತು ನೀರು ವಿಶ್ಲೇಷಣಾ ಪ್ರಯೋಗಾಲಯ, ಸೂಕ್ಷ್ಮ ಜೀವಶಾಸ್ತ್ರ ಪ್ರಯೋಗಾಲಯ, ಅಣಬೆ ಪ್ರಯೋಗಾಲಯ, ತರಬೇತಿ ಕೇಂದ್ರ. **ರೈತರಿಗೆ ಲಭ್ಯವಿರುವ ಸವಲತ್ತುಗಳು ಮತ್ತು ಪರಿಕರಗಳ ವಿವರ ಮತ್ತು ದರಗಳು:** ಮಣ್ಣು ಮತ್ತು ನೀರು ವಿಶ್ಲೇಷಣಾ ಪ್ರಯೋಗಾಲಯ, ಮಣ್ಣಿನ ಮಾದರಿ ವಿಶ್ಲೇಷಣೆ (ಒಂದು ಮಾದರಿಗೆ) (ಪ್ರಧಾನ, ಲಘು ಸೂಕ್ಷ್ಮ ಪೋಷಕಾಂಶಗಳು ಮತ್ತು ಭಾರಿ ಲೋಹಗಳ ವಿಶ್ಲೇಷಣೆ) 200 ರೂ., ನೀರಿನ ಮಾದರಿ ವಿಶ್ಲೇಷಣೆ (ಒಂದು ಮಾದರಿಗೆ 70 ರೂ.

ಉತ್ಕೃಷ್ಟ ಗುಣಮಟ್ಟದ ಅಂಗಾಂಶ ಬಾಳೆ ಸಸಿಗಳು: ಪಚ್ಚ ಬಾಳೆ (ಜಿ–9 ತಳಿ) 1 ಸಸಿಗೆ: ರೂ.11, ಏಲಕ್ಕಿ ಬಾಳೆಯ ಸಸಿಗಳು 1 ಸಸಿಗೆ: ರೂ.22, ಅಣಬೆ ಬೀಜ (ಅಣಬೆ ಸ್ಪಾನ್) ಪ್ರತಿ ಕೆ.ಜಿಗೆ 60 ರೂ. ಬಾಳೆಹಣ್ಣು ವಿಶೇಷ, ತರಕಾರಿ ವಿಶೇಷ, ಶುಂಠಿ ವಿಶೇಷ, ಅರಿಶಿನ ವಿಶೇಷ ಇತ್ಯಾದಿ ದೊರೆಯುತ್ತವೆ ಎಂದು ಸಮಗ್ರ ಜೈವಿಕ ಕೇಂದ್ರ ರಂಗಸಮುದ್ರದ ತೋಟಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಟಿ20 ವಿಶ್ವಕಪ್ ಫೈನಲ್
ಪ್ರಶಸ್ತಿಗಾಗಿ ಪಾಕ್–ಇಂಗ್ಲೆಂಡ್ ಪೈಪೋಟಿ

ಮೆಲ್ಬರ್ನ್, ನ.12– ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಪಂದ್ಯಾವಳಿಯ ಫೈನಲ್ ಪಂದ್ಯ ನಾಳೆ(ನ.13) ನಡೆಯಲಿದ್ದು, ಪ್ರಶಸ್ತಿಗಾಗಿ ಇಂಗ್ಲೆಂಡ್ ಮತ್ತು ಪಾಕಿಸ್ತಾನ ತಂಡಗಳು ಐತಿಹಾಸಿಕ ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಭಾನುವಾರ ಪೈಪೋಟಿ ನಡೆಸಲಿದ್ದು, ಭಾರತೀಯ ಕಾಲಮಾನ ಮಧ್ಯಾಹ್ನ 1.30ಕ್ಕೆ ಪಂದ್ಯ ಆರಂಭವಾಗಲಿದೆ.

ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಮೆಲ್ಬರ್ನ್‌ನಲ್ಲಿ ಭಾನುವಾರ ಹಾಗೂ ಫೈನಲ್ ಪಂದ್ಯದ ಮೀಸಲು ದಿನವಾದ ಸೋಮವಾರ ಭಾರೀ ಮಳೆಯಾಗುವ ಸಾಧ್ಯತೆಯಿದೆ. ಎರಡೂ ದಿನಗಳಲ್ಲಿ ಆಟ ನಡೆಯದಿದ್ದರೆ, ಉಭಯ ತಂಡಗಳನ್ನು ಜಂಟಿ ಚಾಂಪಿಯನ್ ಎಂದು ಘೋಷಿಸಲಾಗುತ್ತದೆ.

ಉಭಯ ತಂಡಗಳಿಗೆ ಈ ಟೂರ್ನಿ ಆರಂಭದಲ್ಲಿ ಹಿನ್ನಡೆ ಎದುರಾಗಿದ್ದರೂ, ಅಲ್ಪ ಅದೃಷ್ಟದ ನೆರವಿನೊಂದಿಗೆ ಪುಟಿದೆದ್ದು ನಿಂತು ಫೈನಲ್ ಪ್ರವೇಶಿಸಿವೆ. ಪಾಕಿಸ್ತಾನ ತಂಡ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿದ್ದರೆ, ಇಂಗ್ಲೆಂಡ್ ಭಾರತದ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿತ್ತು.

ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನ

ಮೈಸೂರು, ನ.12– ತೋಟಗಾರಿಕಾ ಇಲಾಖೆ ವತಿಯಿಂದ ಹುಣಸೂರು ತಾಲೂಕಿನ ಧರ್ಮಾಪುರ ತೋಟಗಾರಿಕೆ ಕ್ಷೇತ್ರದಲ್ಲಿ ತಾಳೆ ಬೆಳೆ ಬೀಜೋತ್ಪಾದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಕಾರ್ಯಕ್ರಮದಡಿ ತಾಳೆ ಬೆಳೆ ಬೆಳೆಯಲು ಅನುವಾಗುವಂತೆ ಧರ್ಮಾಪುರ ಕ್ಷೇತ್ರದಲ್ಲಿರುವ 500 ಸಂಖ್ಯೆಯ ಕಾಡು ಜಾತಿಯ ಮರಗಳನ್ನು ಅರಣ್ಯ ಇಲಾಖೆ ಹುಣಸೂರು ವಿಭಾಗ ಇವರ ನೇತೃತ್ವದಲ್ಲಿ ತೆರವುಗೊಳಿಸಲಿದ್ದು, ಆಕ್ಷೇಪಣೆಯನ್ನು ಸಲ್ಲಿಸಬಯಸುವ ಸಾರ್ವಜನಿಕರು ನವೆಂಬರ್ 19ರ ಒಳಗೆ ಲಿಖಿತ ರೂಪದಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ರಾಜ್ಯವಲಯ, ಮೈಸೂರು ಇವರ ಕಚೇರಿಗೆ ಸಲ್ಲಿಸಬೇಕು ಎಂದು ರಾಜ್ಯವಲಯದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿಂದೂ ಪದ ಕುರಿತ ಹೇಳಿಕೆ ವಿಚಾರ

ಸತೀಶ್ ಜಾರಕಿಹೊಳಿ ತೇಜೋವಧೆ ಮುಂದುವರೆಸಿದರೆ ಸಹಿಸುವುದಿಲ್ಲ

● ಹಿಂದುಳಿದ ವರ್ಗಗಳ ಮುಖಂಡರ ಎಚ್ಚರಿಕೆ ● ವಿಷಾದ ವ್ಯಕ್ತಪಡಿಸಿ, ಹೇಳಿಕೆ ಹಿಂಪಡೆದ ಮೇಲೆ ಅದು ಮುಗಿದ ಅಧ್ಯಾಯ



ಮೈಸೂರು,ನ.12(ಪಿಎಂ)–ಶಾಸಕರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿಯವರು ಹಿಂದೂ ಧರ್ಮಕ್ಕೆ ಅಪಮಾನ ಮಾಡಿಲ್ಲ. ಆದಾಗ್ಯೂ ತಮ್ಮ ಪಕ್ಷದ ಹಿತದೃಷ್ಟಿಯಿಂದ ವಿಷಾದ ವ್ಯಕ್ತಪಡಿಸಿ, ಹೇಳಿಕೆ ಹಿಂಪಡೆದಿದ್ದಾರೆ. ಅಲ್ಲಿಗೆ ಇದು ಮುಗಿದ ಅಧ್ಯಾಯ. ಆದಾಗ್ಯೂ ಈ ವಿಚಾರದಲ್ಲಿ ಸತೀಶ್ ಜಾರಕಿಹೊಳಿ ಅವರ ತೇಜೋವಧೆ ಮುಂದುವರೆಸಿದರೆ ಸಹಿಸುವುದಿಲ್ಲ ಎಂದು ಹಿಂದುಳಿದ ವರ್ಗಗಳ ಮುಖಂಡರು ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ದಲಿತ, ಹಿಂದುಳಿದ ಸಮುದಾಯಗಳ ಪರ ಕಾಳಜಿ ಹೊಂದಿರುವ ಸತೀಶ್ ಜಾರಕಿಹೊಳಿ ಬದ್ಧತೆ ಹೊಂದಿರುವ ರಾಜಕಾರಣಿ. ಅವರು ಹಿಂದೂ ಧರ್ಮಕ್ಕೆ ಅಪಮಾನ ಮಾಡಿಲ್ಲ. ಹಿಂದೂ ಪದಕ್ಕೆ ಪರ್ಷಿಯನ್ ಭಾಷೆಯಲ್ಲಿ ಈ ರೀತಿಯಲ್ಲಿ ಅರ್ಥವಿದೆ. ಅದು ಚರ್ಚೆಯಾಗಲಿ ಎಂದಷ್ಟೇ ಹೇಳಿದ್ದಾರೆ. ಅದರಲ್ಲಿ ತಪ್ಪೇನಿದೆ? ಎಂದು ಪ್ರಶ್ನಿಸಿದರು.

ತಳ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಅವರು ಶ್ರಮಿಸುತ್ತಿದ್ದಾರೆ. ಬಹುತ್ವದ ಭಾರತ ಕಟ್ಟಬೇಕು ಎಂಬುದು ಅವರ ಪರಿಕಲ್ಪನೆ. ಹಿಂದೆ 'ಹಿಂದೂ ಧರ್ಮ' ಎಂದಿರಲಿಲ್ಲ. ಇತ್ತೀಚೆಗೆ 'ಹಿಂದೂ' ಧರ್ಮವಾಗಿ ಪರಿವರ್ತನೆಯಾಗಿದೆ. ಸನಾತನ ಧರ್ಮ ಎಂದಷ್ಟೇ ಇತ್ತು. ರಾಜಕಾರಣ, ಮತಕ್ಕಾಗಿ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು 'ಹಿಂದೂ' ಎನ್ನುವುದನ್ನು ಧರ್ಮವಾಗಿ ಮಾಡಿದ್ದು, ಅದೊಂದು ಧರ್ಮವಲ್ಲ ಎಂದು ಹೇಳಿದರು.

ಸತೀಶ್ ಜಾರಕಿಹೊಳಿಯವರ ಹೇಳಿಕೆಯನ್ನೇ ನೆಪವಾಗಿಸಿಕೊಂಡು ಅವರನ್ನು ರಾಜಕೀಯವಾಗಿ ಮುಗಿಸಲು ಪ್ರಯತ್ನಿಸಲಾಗುತ್ತಿದೆ. ದಲಿತರು, ಹಿಂದುಳಿದವರು ಅವರ ಪರವಾಗಿದ್ದೇವೆ. ಅವರನ್ನು ಮಣಿಸಲು ನಾವು ಬಿಡುವುದಿಲ್ಲ. ಇಂದಿಗೂ ಅಸ್ಪೃಶ್ಯತಾ ಆಚರಣೆ ನಮ್ಮ ದೇಶದಲ್ಲಿ ಜೀವಂತವಾಗಿದೆ. ಅಸ್ಪೃಶ್ಯತೆ ಆಚರಣೆಯಾದಾಗ ಹಿಂದೂ ಧರ್ಮದ ಶ್ರೇಷ್ಠತೆಗೆ ಧಕ್ಕೆ ಬರುವುದಿಲ್ಲವೇ? ಶೇ.3ರಷ್ಟಿರುವ ಪುರೋಹಿತಶಾಹಿಗಳು ಬಹುಸಂಖ್ಯಾತರಾದ ದಲಿತರು, ಹಿಂದುಳಿದ ವರ್ಗದವರನ್ನು ಇಂದಿಗೂ ಶೋಷಣೆ ಮಾಡುತ್ತಿದ್ದಾರೆ. ಹಿಂದೂ ಧರ್ಮ ಅಸಮಾನತೆಯ ಗೂಡಾಗಿದೆ. ಅದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ನಾವೆಲ್ಲಾ ಹೋರಾಟ ಮಾಡುತ್ತಿದ್ದೇವೆ. ಆದರೆ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ಹಿಂದೂ ಧರ್ಮದ ಹೆಸರಿನಲ್ಲಿ ಹೊಲಸು ರಾಜಕಾರಣ ಮಾಡುತ್ತಿದ್ದಾರೆ ಎಂದು ದೂರಿದರು.

ಮುಖಂಡ ಮಹೇಶ್ ಸೋಸಲೆ ಮಾತನಾಡಿ, ಸತೀಶ್ ಜಾರಕಿಹೊಳಿಯವರು ಮೌಢ್ಯದ ವಿರುದ್ಧ ಹೋರಾಟ ಮಾಡುತ್ತಿದ್ದು, ಸಾಮಾಜಿಕ ಪರಿವರ್ತನೆಗೆ ಮುನ್ನುಡಿ ಬರೆದಿದ್ದಾರೆ. ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ತತ್ವ–ಸಿದ್ಧಾಂತ ಪಸರಿಸುತ್ತಿದ್ದಾರೆ. ಡಾ.ಅಂಬೇಡ್ಕರ್ ಅವರು ನಾನು ಹಿಂದೂ ಆಗಿ ಸಾಯಲಾರೆ ಎಂದಿದ್ದರು. ರಾಷ್ಟ್ರಕವಿ ಕುವೆಂಪು ಹಿಂದೂ ಎಂದು ಹೇಳಿಕೊಳ್ಳುವ ಯಾವುದೇ ಲಕ್ಷಣಗಳೂ ನನ್ನಲ್ಲಿ ಇಲ್ಲ ಎಂದು ಹೇಳಿದ್ದರು. ಕಾಲಕಾಲಕ್ಕೆ ಹಿಂದೂ ಧರ್ಮದ ಬಗ್ಗೆ ಪ್ರಶ್ನೆ ಮಾಡಿದ್ದರಿಂದಲೇ ಹಿಂದೂ ಧರ್ಮದಲ್ಲಿ ಸುಧಾರಣೆಯಾಗಿದೆ ಎಂದು ಪ್ರತಿಪಾದಿಸಿದರು. ಕರ್ನಾಟಕ ರಾಜ್ಯ ಸತೀಶ್ ಜಾರಕಿಹೊಳಿ ಅಭಿಮಾನಿಗಳ ಬಳಗದ ರಾಜ್ಯ ಸಂಚಾಲಕ ಎಸ್.ಆರ್.ರವಿಕುಮಾರ್, ಅತೀ ಹಿಂದುಳಿದ ವರ್ಗಗಳ ಅಧ್ಯಕ್ಷ ಡಿ.ನಾಗಭೂಷಣ್, ಹಿಂದುಳಿದ ವರ್ಗಗಳ ಮುಖಂಡರಾದ ಶಿವಮಲ್ಲು, ಯೋಗಿಶ್ ಉಪ್ಪಾರ್, ನಾಗೇಶ್ ಗೋಷ್ಠಿಯಲ್ಲಿದ್ದರು.

ಮುಕ್ತ ವಿವಿಗೆ ಪ್ರೊ. ಶರಣಪ್ಪ ವೈಜನಾಥ್ ಹಲಸೆ ನೂತನ ಕುಲಪತಿ



ಮೈಸೂರು, ನ.12(ಎಸ್‌ಬಿಡಿ)– ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ನೂತನ ಕುಲಪತಿಯಾಗಿ ಪ್ರೊ.ಶರಣಪ್ಪ ವೈಜನಾಥ್ ಹಲಸೆ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ವಿಜಯಪುರದ ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಎಲೆಕ್ಟ್ರಾನಿಕ್ ವಿಭಾಗದ ಮುಖ್ಯಸ್ಥರಾಗಿದ್ದ ಪ್ರೊ. ಶರಣಪ್ಪ ವೈಜನಾಥ್ ಹಲಸೆ ಅವರನ್ನು ಕರ್ನಾಟಕ ಮುಕ್ತ ವಿವಿಯ ನೂತನ ಕುಲಪತಿಯಾಗಿ ಇಂದು ನೇಮಕ ಮಾಡಿದ್ದು, ಇವರಿಗೆ ಪ್ರಭಾರ ಕುಲಪತಿಯಾಗಿದ್ದ ಖಾದರ್ ಪಾಷಾ ಅವರು ಗುರುವಾರ ಅಧಿಕಾರ ಹಸ್ತಾಂತರಿಸಿದರು.

ಈ ಹಿಂದೆ ಮುಕ್ತ ವಿವಿ ಕುಲಪತಿಯಾಗಿದ್ದ ಡಾ.ಎಸ್.ವಿದ್ಯಾಶಂಕರ್ ಅವರನ್ನು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಯಾಗಿ ನಿಯೋಜಿಸಿದ್ದರಿಂದ ಅವರು ಹಿಂದಿನ ಹುದ್ದೆಗೆ ರಾಜೀನಾಮೆ ನೀಡಿದ್ದರು. ನಂತರ ಮುಕ್ತ ವಿವಿ ಹಣಕಾಸು ವಿಭಾಗದ ಡಾ.ಎ.ಖಾದರ್ ಪಾಷಾ ಅವರಿಗೆ ಆ ಸ್ಥಾನವನ್ನು ಹೆಚ್ಚುವರಿಯಾಗಿ ವಹಿಸಲಾಗಿತ್ತು.

ನೂತನ ಕುಲಪತಿ ಪ್ರೊ.ಶರಣಪ್ಪ ವೈಜನಾಥ್ ಹಲಸೆ ಅವರು ಮೂಲತಃ ಕಲಬುರ್ಗಿಯವರಾಗಿದ್ದು, ಬಾಂಬೆ ಭಾರತೀಯ ವಿದ್ಯಾಭವನದಲ್ಲಿ ಇಡಿಪಿ ಅಂಡ್ ಕಂಪನಿ ಮ್ಯಾನೇಜ್‌ಮೆಂಟ್ ಕೋರ್ಸ್, ಗುಲ್ಬರ್ಗಾ ವಿವಿಯಲ್ಲಿ ಬಿ.ಎಸ್ಸಿ, ಎಂ.ಎಸ್ಸಿ, ಎಂ.ಫಿಲ್ ಹಾಗೂ ಪಿಹೆಚ್.ಡಿ ಪದವಿ ಪಡೆದಿದ್ದಾರೆ. ಕಲಬುರ್ಗಿಯ ಶರಣ ಬಸವೇಶ್ವರ ಕಾಲೇಜ್ ಆಫ್ ಸೈನ್ಸ್‌ನಲ್ಲಿ ಉಪನ್ಯಾಸಕರಾಗಿ ಸುದೀರ್ಘ ಸೇವೆ ಸಲ್ಲಿಸಿದ್ದು, ವಿಜಯಪುರದ ಕರ್ನಾಟಕ ಮಹಿಳಾ ವಿವಿಯ ಡೀನ್, ಗುಲ್ಬರ್ಗಾ ವಿವಿಯಲ್ಲಿ ಮೌಲ್ಯಮಾಪನ ಹಾಗೂ ಆಡಳಿತ ಕುಲಸಚಿವರಾಗಿ(ಎರಡು ಬಾರಿ), ದಾವಣಗೆರೆ ವಿವಿ ಕುಲಪತಿ(ಆಡಳಿತ)ಯಾಗಿ ಸೇವೆ ಸಲ್ಲಿಸಿದ್ದಾರೆ. ಉಪನ್ಯಾಸ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಸುದೀರ್ಘ ಕಾಲ ಸೇವೆ ಸಲ್ಲಿಸಿರುವ ಇವರು ವಿವಿಧ ಸಂಸ್ಥೆಗಳಲ್ಲೂ ಕಾರ್ಯನಿರ್ವಹಿಸಿದ್ದಾರೆ.

ನಾಳೆ 'ಅಮ್ಮ' ಏಕವ್ಯಕ್ತಿ ರೂಪಕ ಪ್ರದರ್ಶನ



ಮೈಸೂರು,ನ.12–ಖ್ಯಾತ ಭರತನಾಟ್ಯ ಕಲಾವಿದೆ ಡಾ.ವಸುಂಧರ ದೊರೆಸ್ವಾಮಿಯವರು ಶ್ರೀಕೃಷ್ಣ ಪರಮಾತ್ಮನ ತಾಯಂದಿರ ಒಂದು ವಿಶಿಷ್ಟ ಕಥೆ 'ಅಮ್ಮ' ಏಕವ್ಯಕ್ತಿ ರೂಪಕ ಪ್ರದರ್ಶನವನ್ನು ರಮಾಗೋವಿಂದ ಸಭಾಂಗಣದಲ್ಲಿ ನ.14ರಂದು ಸಂಜೆ 6ರಿಂದ 7.30ರವರೆಗೆ ಪ್ರದರ್ಶಿಸಲಿದ್ದಾರೆ. ಈ ಕಥೆ ಮತ್ತು ಪರಿಕಲ್ಪನೆ ಡಾ॥ ಜ್ಯೋತಿ ಶಂಕರ್ ಅವರದ್ದು, ಹಾಡುಗಾರಿಕೆ ವಿದ್ವಾನ್ ಬಾಲಸುಬ್ರಹ್ಮಣ್ಯ ಶರ್ಮ ಅವರದ್ದಾಗಿದೆ.

ಉಚಿತ ಕ್ರಿಯಾಯೋಗ ತರಗತಿ

ಮೈಸೂರು, ನ.12– ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತ್ಯುತ್ಸವದ ಅಂಗವಾಗಿ ನ.14ರಿಂದ ಪ್ರತಿದಿನ ಬೆಳಗ್ಗೆ 6ರಿಂದ 7 ಮತ್ತು ಸಂಜೆ 5ರಿಂದ 6ರವರೆಗೆ ಉಚಿತ ಕ್ರಿಯಾಯೋಗ ತರಗತಿ ನಡೆಯಲಿದೆ. ವಿವರಗಳಿಗೆ ಮೊ.84959 89444, 87622–99094 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.11.2022 ಭಾನುವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ : ಆರಿದ್ರಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಶ್ವವಾಯು ಪೀಡಿತರಿಗೆ ಚಿಕಿತ್ಸೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಲಲಿತ ಮಹಲ್ ಹೆಲಿಪ್ಯಾಡ್ ಬಳಿ, ಆಲನಹಳ್ಳಿ, ಬೆಳಗ್ಗೆಯಿಂದ.

■ **ರೋಟರಿ ಕ್ಲಬ್ ಮೈಸೂರು ಪಶ್ಚಿಮ :** ರಿಫ್ಲೆಕ್ಸೊಲೊಜಿ, ಸುಜೋಕ್ ಮ್ಯಾಗ್ನೆಟ್ ಮತ್ತು ವೈಬ್ರೇಶನ್ ತೆರಪಿ ಚಿಕಿತ್ಸಾ ಶಿಬಿರ, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 9 ರಿಂದ.

■ **ಸಪ್ತಗಿರಿ ಕ್ಷೇಮಾಭಿವೃದ್ಧಿ ಸಂಘ :** ಎಸ್‌ಎಸ್‌ಎಲ್‌ಸಿ, ಪಿಯುಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನಿವೃತ್ತಿ ಮತ್ತು ಬಡ್ತಿ ಹೊಂದಿರುವವರಿಗೆ ಸನ್ಮಾನ ಸಮಾರಂಭ, ಅಧ್ಯಕ್ಷತೆ : ಕಾರ್ಪೋರೇಷನ್ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಸಿ. ಗಿರಿಯಪ್ಪ, ಉದ್ಘಾಟನೆ: ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ನಿವೃತ್ತ ಉಪನಿರ್ದೇಶಕ ಡಾ.ಬಿ.ಆನಂದ್, ಪ್ರಾಸ್ತಾವಿಕ ನುಡಿ : ಪ್ರಭಾರ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಎಸ್.ಸಿದ್ದರಾಜು, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 9.30ಕ್ಕೆ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ತಜ್ಞ ಆಯುರ್ವೇದ ಮನೋವೈದ್ಯರಿಂದ ತಪಾಸಣೆ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 9.30 ರಿಂದ.

■ **ಆಶಾ ಕಿಸಾನ್ ಸ್ವರಾಜ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ :** ಕಿಸಾನ್ ಸ್ವರಾಜ್ ಸಮ್ಮೇಳನ, ಸ್ಥಳ: ಮುಕ್ತ ವಿವಿ ಘಟಿಕೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ಆಲ್ಫಾ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಲ್ಫಾ ಆಸ್ಪತ್ರೆ, ಮೈಸೂರು–ಬೆಂಗಳೂರು ರಸ್ತೆ, ಬೆಳಗ್ಗೆ 10ರಿಂದ.

■ **ಅಂಧ ಮಕ್ಕಳ ಸರ್ಕಾರಿ ಪಾಠಶಾಲೆ ಹಾಗೂ ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು:** ಬೆಳಗ್ಗೆ 10ಕ್ಕೆ ರಾಜ್ಯೋತ್ಸವ ಪ್ರಯುಕ್ತ ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳು, ಮುಖ್ಯ ಅತಿಥಿಗಳು: ಶ್ರೀಮತಿ ಪ್ರಮೋದಾದೇವಿ ಒಡೆಯರ್, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಅಂಗವಿಕಲರ ಹಕ್ಕುಗಳ ಅಧಿನಿಯಮ ಆಯುಕ್ತರಾದ ಕೆ.ಎಸ್.ಲತಾಕುಮಾರಿ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಿ. ಬಸವರಾಜು, ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ ಆರ್.ಮಾಲಿನಿ, ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಪೊಲೀಸ್ ಇನ್ಸ್‌ಪೆಕ್ಟರ್ ಕೆ.ಆರ್. ರಘು, ಆರ್.ಜೆ. ಸುನಿಲ್, ವೈ. ಗೋವರ್ಧನ್, ಸ್ಥಳ: ಅಂಧ ಮಕ್ಕಳ ಸರ್ಕಾರಿ ಪಾಠಶಾಲೆ ಆವರಣ.

■ **ಮೈಸೂರು ಜಿಲ್ಲಾ ಗಮಕ ಕಲಾ ಪರಿಷತ್ತು :** ಕಾವ್ಯ ವ್ಯಾಸಂಗ ಗೋಷ್ಠಿ–32, ಕಾವ್ಯ : ಪು.ತಿ.ನ. ಅವರ 'ಶ್ರೀಹರಿಚರಿತೆ', ಉಲ್ಲಾಸ–30–ರಾಧಾನಿರ್ವೇದಂ, ಗದ್ಯವಾಚನ : ಸೂರ್ಯಕಿರಣ್, ವ್ಯಾಖ್ಯಾನ: ಅಜಯ್ ಸ್ವರೂಪ್, ಅಧ್ಯಕ್ಷತೆ : ಪ್ರಾಧ್ಯಾಪಕ ಪ್ರೊ. ಎಸ್. ರಾಘವೇಂದ್ರ ಭಟ್ಟರು, ಉಪಸ್ಥಿತರು :ಶ್ರೀಮತಿ ಅಲಮೇಲು ಅಯ್ಯಂಗಾರ್, ತಿರುನಾರಾಯಣ್, ಸ್ಥಳ; ನಮನ ಕಲಾಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಸಿದ್ಧಾರ್ಥ ಕ್ಷೇಮಾಭಿವೃದ್ಧಿ ಸಂಘ :** ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ. ಹಿರಿಯಣ್ಣ, ಸ್ಥಳ: ನೃಪತುಂಗ ಕನ್ನಡ ಪ್ರೌಢಶಾಲೆ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಶ್ರೀ ಸಿದ್ದಪ್ಪಾಜಿ ದೇವಸ್ಥಾನ, ಕೆ.ಜಿ. ಕೊಪ್ಪಲು :** 12ನೇ ವರ್ಷದ ಕುಂಭಾಭಿಷೇಕ ಮಹೋತ್ಸವ, ಬೆಳಗ್ಗೆ 10.30 ಗಂಟೆಯಿಂದ ಪೂರ್ಣಾಹುತಿ, ಕುಂಭಾಭಿಷೇಕ, ಅಲಂಕಾರ, ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ತೀರ್ಥಪ್ರಸಾದ ವಿನಿಯೋಗ, ಅನ್ನಸಂತರ್ಪಣೆ, ಸ್ಥಳ: ಶ್ರೀ ಸಿದ್ದಪ್ಪಾಜಿ ದೇವಸ್ಥಾನ, ಪೈಲ್ವಾನ್ ಬಸವಯ್ಯನವರ ವೃತ್ತ, ಕೆ.ಜಿ.ಕೊಪ್ಪಲು.

■ **ಮೈಸೂರು ಯೋಗ ಒಕ್ಕೂಟ :** ಬೆಳಗ್ಗೆ 10.30ಕ್ಕೆ ಮೈಸೂರು ಯೋಗ ಒಕ್ಕೂಟದ ವಾರ್ಷಿಕೋತ್ಸವ ಅಂಗವಾಗಿ ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ, ಸಾನ್ನಿಧ್ಯ : ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಧರ್ಮಾಧಿಕಾರಿ ಡಾ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಆಯುಷ್ ಅಧಿಕಾರಿ ಡಾ. ಪುಷ್ಪಾ, ಅಧ್ಯಕ್ಷತೆ: ಮೈಸೂರು ಯೋಗ ಒಕ್ಕೂಟದ ಗೌರವ ಅಧ್ಯಕ್ಷ ಡಾ.ಎ.ಎಸ್. ಚಂದ್ರಶೇಖರ್, ಮುಖ್ಯ ಅತಿಥಿಗಳು: ಒಕ್ಕೂಟದ ಕಾರ್ಯಾಧ್ಯಕ್ಷರಾದ ಡಾ. ಬಿ.ಪಿ.ಮೂರ್ತಿ, ಬಿ. ಶಾಂತರಾಮ್, ಉಪಾಧ್ಯಕ್ಷ ಎಂ.ಎಸ್.ಶಿವಪ್ರಕಾಶ್, ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಬಹುಮಾನ ವಿತರಣೆ, ಅಧ್ಯಕ್ಷತೆ : ಒಕ್ಕೂಟದ ಅಧ್ಯಕ್ಷ ಟಿ. ಜಲೇಂದ್ರ ಕುಮಾರ್, ಮುಖ್ಯ ಅತಿಥಿಗಳು : ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ ಶೆಣೈ, ಒಕ್ಕೂಟದ ಉಪಾಧ್ಯಕ್ಷ ಎಂ.ಎಸ್. ರಮೇಶ್‌ಕುಮಾರ್, ಡಾ. ಪಿ.ಎನ್. ಗಣೇಶ್‌ಕುಮಾರ್, ಕೆ.ಜಿ. ದೇವರಾಜು, ಎ. ಲಕ್ಷ್ಮಮ್ಮ, ಎಸ್. ಶಶಿಕುಮಾರ್, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ, ನಂಜುಮಳಿಗೆ ಸರ್ಕಲ್ ಹತ್ತಿರ, ಲಕ್ಷ್ಮೀಪುರಂ.

■ **ಬಸವ ಬಳಗ :** ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಬಳಗದ ಅಧ್ಯಕ್ಷ ಪುಟ್ಟಣ್ಣ, ಸ್ಥಳ: ಬಸವ ಬಳಗ ಆವರಣ, ಬೆಳಗ್ಗೆ 11ಕ್ಕೆ

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಪದವಿ ಕನ್ನಡ ಅಧ್ಯಾಪಕರ ಸಂಘ :** ಡಾ. ಬಿ.ಆರ್. ಜಯಕುಮಾರಿ ಅವರ ಬೇರಿಗಿಳಿದ ನೀರು ಕೃತಿ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ : ಶಾಸಕ ಸಿ.ಎಸ್. ಪುಟ್ಟರಾಜು, ಕೃತಿ ಲೋಕಾರ್ಪಣೆ : ಸಾಹಿತಿ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಕೃತಿ ಕುರಿತು ಮಾತನಾಡುವವರು : ಡಾ. ಬಿ.ವಿ. ವಸಂತಕುಮಾರ್, ಅಭಿಮಾನದ ನುಡಿ : ಜಾನಪದ ವಿದ್ವಾಂಸ ಡಾ. ಹಿ.ಶಿ. ರಾಮಚಂದ್ರೇಗೌಡ, ಮುಖ್ಯ ಅತಿಥಿಗಳು : ಟಿ. ಮುರಳೀಧರ್ ಭಾಗವತ್, ಡಾ. ಎ. ರಂಗಸ್ವಾಮಿ, ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಹೆಚ್.ಆರ್. ಮಂಜೇಗೌಡ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮೈಸೂರು ವಿವಿ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಎಸ್. ಜಯಲಕ್ಷ್ಮಿ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 "ಬದುಕು ಮಣ್ಣಿನೊಂದಿಗೆ" ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ 9.00 ಕನ್ನಡ ಕಜ್ಜಾಯ, 9.40 ನಮ್ಮ ಆರೋಗ್ಯ–ಆಟೋ ಇಮ್ಯೂನ್ ಡಿಸೀಸರ್– ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಸಂಗೀತಾ ಕೆ.ಎನ್. ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳೀಗಳೇ–ಕಥೆ ಕೇಳುಪುಟ್ಟಾ–ಪಂಚತಂತ್ರದ ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ–ಮುಖಾಮುಖಿ ಕಾರ್ಯಕ್ರಮ–ಚಿತ್ರ ಕಲೆಯ ಹವ್ಯಾಸ ಕುರಿತ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ ಚಿತ್ರಕಲಾ ಶಿಕ್ಷಕ ಸತೀಶ್ ಎಸ್.ದಳವಾಯಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.05 ವನಿತಾ ವಿಹಾರ, 12.45 ಜನಪದ ಸಂಗೀತ – ಬನ್ನೂರು ಸಣ್ಣಮ್ಮ ಮತ್ತು ತಂಡ, 1.20 ಭಾವಗೀತೆ–ವೃಂದಗಾನ, 3.45 ಯಕ್ಷಗಾನ ತಾಳ ಮದ್ದಲೆ– ಪ್ರಸಂಗ– ಭೀಷ್ಮ ವಿಜಯ, ಪ್ರಸ್ತುತಿ– ಧರ್ಮಸ್ಥಳದ ಬಿ. ಭುಜಬಲಿ ಮತ್ತು ತಂಡ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಯು.ಪಿ. ರಾಜು ಮತ್ತು ಯು. ನಾಗಮಣಿ–ಮ್ಯಾಂಡೋಲಿನ್ ವಾದನ

■ **ಸಂಸ್ಕೃತಿ ಪ್ರಕಾಶನ, ಮೈಸೂರು :** ಡಾ. ವಿ. ರಂಗನಾಥ್ ಅವರ ಐದು ಪುಸ್ತಕಗಳ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಅಧ್ಯಕ್ಷತೆ : ಪ್ರಾಂತ ಕಾರ್ಯಕಾರಿ ಸದಸ್ಯ ಮಾ. ವೆಂಕಟರಾಮು, ಪುಸ್ತಕಗಳ ಕುರಿತು : ವೈದ್ಯ ಡಾ. ಎ.ಎಸ್. ಚಂದ್ರಶೇಖರ್, ಮುಖ್ಯ ಅತಿಥಿಗಳು : ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಉಪಸ್ಥಿತರು : ಲೇಖಕ ಮತ್ತು ಅಂಕಣಕಾರ ಡಾ. ವಿ. ರಂಗನಾಥ್, ಪ್ರಾಸ್ತಾವಿಕ ನುಡಿ : ಲೇಖಕ ಸಂಸ್ಕೃತಿ ಸುಬ್ರಹ್ಮಣ್ಯ, ಸ್ಥಳ: ಗೋಪಾಲಸ್ವಾಮಿ ಕಾಲೇಜು ಸಭಾಂಗಣ, ಲಕ್ಷ್ಮೀಪುರಂ, ಬೆಳಗ್ಗೆ 11ಕ್ಕೆ.

■ **ಸುರಭಿ ಗಾನಕಲಾ ಮಂದಿರ ಚಾರಿಟಬಲ್ ಟ್ರಸ್ಟ್ :** ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಬಿರ, ಸ್ಥಳ: 510, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4.30 ರಿಂದ.

■ **ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜು :** ವಾರ್ಷಿಕ ವಿಶೇಷ ಶಿಬಿರ, ಉಪನ್ಯಾಸ ಡಾ. ಎಸ್. ನಾಗಾಚಾರಿ ಅವರಿಂದ, ಅಧ್ಯಕ್ಷತೆ : ಪ್ರಾಂಶುಪಾಲ ಡಾ. ಟಿ.ಆರ್. ಸಿದ್ದರಾಜು, ಸ್ಥಳ: ಶ್ರೀ ಗಣೇಶಪುರಿ ನಿತ್ಯಾನಂದ ಆಶ್ರಮ, ಚಾಮುಂಡಿಬೆಟ್ಟದ ಪಾದ, ಮಧ್ಯಾಹ್ನ 4.30ಕ್ಕೆ.

■ **ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿ :** ಶ್ರೀ ಭಕ್ತ ಕನಕದಾಸರ 535ನೇ ಜಯಂತ್ಯೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಕಾಗಿನೆಲೆ ಕನಕ ಗುರುಪೀಠ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಉದ್ಘಾಟನೆ : ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪುಷ್ಪಾರ್ಚನೆ : ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಉಪಮೇಯರ್ ಡಾ. ರೂಪ, ಸ್ಥಳ: ಕನಕ ಭವನ, ಸಿದ್ಧಾರ್ಥನಗರ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಡಾ. ಆರ್. ಗಣೇಶ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಆರ್. ಅಚ್ಯುತರಾವ್–ಪಿಟೀಲು, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಘಟ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ನಟರಾಜ ಪ್ರದರ್ಶಕ ಕಲೆಗಳ ಕೇಂದ್ರ :** ನೃತ್ಯ ಸಂಭ್ರಮ, ಸಂಜೆ 6ಕ್ಕೆ ಸಭಾ ಕಾರ್ಯಕ್ರಮ, ಅಧ್ಯಕ್ಷತೆ : ಕರ್ನಾಟಕ ಕಲಾಶ್ರೀ ವಿದ್ವಾನ್ ಸತ್ಯನಾರಾಯಣ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಗಾನಭಾರತಿ ಪ್ರಾಂಶುಪಾಲರಾದ ಎ.ಆರ್. ತೇಜಸ್ವಿನಿ, ಉಪಸ್ಥಿತರು : ನೃತ್ಯಗಿರಿ ಪ್ರದರ್ಶಕ ಕಲೆಗಳ ಕೇಂದ್ರದ ನಿರ್ದೇಶಕರಾದ ಡಾ. ಕೃಪಾ ಫಡ್ಕೆ, ಶ್ರೀ ನಟರಾಜ ಪ್ರದರ್ಶಕ ಕಲೆಗಳ ಕೇಂದ್ರದ ಅಧ್ಯಕ್ಷ ಎಂ.ಕೆ. ಬಾಲರಾಜು, ಸನ್ಮಾನಿತರು : ವಿದ್ವಾನ್ ಸಿಂಗಾರಮಣಿ ಡಾ. ಅಜಯ್ ಕುಮಾರ್, ಸಂಜೆ 6.45ಕ್ಕೆ ನೃತ್ಯ ಕಾರ್ಯಕ್ರಮ, ವಿದುಷಿ ಸಮೀಕ್ಷ ಮನುಕುಮಾರ್ ಅವರಿಂದ ನಟುವಾಂಗ, ವಿದುಷಿ ಕು. ಪೂಜ ಸುಗಮ್, ವಿದುಷಿ ವಾಸವಿ ಯಶಸ್ವಿ ಅವರಿಂದ ಹಾಡುಗಾರಿಕೆ, ವಿದ್ವಾನ್ ಎ.ಪಿ. ಕೃಷ್ಣಪ್ರಸಾದ್–ಕೊಳಲು, ವಿದ್ವಾನ್ ವಿಕ್ರಂ ಭಾರದ್ವಾಜ್–ಮೃದಂಗ, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ನಟನ ರಂಗಶಾಲೆ :** ಮಕ್ಕಳ ದಿನಾಚರಣೆ ಅಂಗವಾಗಿ ನಟನ ವಾರಾಂತ್ಯ ರಂಗ ಶಾಲೆಯ ಮಕ್ಕಳಿಂದ ಶ್ರೀಮತಿ ವೈದೇಹಿ ಅವರ 'ನಾಯಿ ಮರಿ' ನಾಟಕ ಪ್ರದರ್ಶನ, ನಿರ್ದೇಶನ : ಹರಿಸಿಂಗ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ

■ **ಭೂಷಣ್ಸ್ ಪ್ರದರ್ಶಕ ಕಲೆಗಳು ಮತ್ತು ದೃಶ್ಯ ಪ್ರಸ್ತುತಿ ಕೇಂದ್ರ :** ರಾಷ್ಟ್ರೀಯ ನೃತ್ಯೋತ್ಸವ, ಉದ್ಘಾಟನೆ : ಚಲನಚಿತ್ರ ನಟ ಮಂಡ್ಯ ರಮೇಶ್, ಧಾರ್ಮಿಕ ಚಿಂತಕ ಡಾ.ಶೆಲ್ವಪಿಳ್ಳೈ ಅಯ್ಯಂಗಾರ್, ಸಂಜೆ 5.25ಕ್ಕೆ ಶ್ರೀಮತಿ ರಂಜನಿ ಗಣೇಶನ್ ರಮೇಶ್ ಅವರಿಂದ ದೇವನೃತ್ಯ, ಮಾಲಿಕ ಪಣಿಕ್ಕರ್ ಅವರಿಂದ ಮೋಹಿನಿಯಾಟ್ಟಮ್ ನೃತ್ಯ, ಸಂಜೆ 6.30ಕ್ಕೆ ಬದರಿ ದಿವ್ಯಭೂಷಣ್, ಡಾ. ಅಂಜನ ಭೂಷಣ್ ಅವರಿಂದ ರಾಮಾನುಜ ಧನೂರ್ದಾಸ ವೈಭವ ನೃತ್ಯ ಕಾರ್ಯಕ್ರಮ, ರಾತ್ರಿ 8.05ಕ್ಕೆ ಶ್ರೀಮತಿ ರುಜುತ ಸೋಮನ್, ಶ್ರೀಮತಿ ಸಂಪದ ಪಿಳ್ಳೈ ಮತ್ತು ಶಿಷ್ಯರಿಂದ ಶಿವಶಕ್ತಿ ತತ್ವ, ಕಥಕ್ ನೃತ್ಯ ಪ್ರದರ್ಶನ, ಸ್ಥಳ:ರಮಾಗೋವಿಂದ ಸಭಾಂಗಣ, ರಾಮಕೃಷ್ಣನಗರ.

■ **ನವೋದಯ ಮೈಸೂರು :** ವಾಲ್ಮೀಕಿ ರಾಮಾಯಣ ಆಧಾರಿತ ನಾಟಕ 'ಅಯೋಧ್ಯ ಕಾಂಡ' ನಾಟಕ ಪ್ರದರ್ಶನ, ನಿರ್ದೇಶನ : ಹಿರಿಯ ರಂಗ ನಿರ್ದೇಶಕ ಪ್ರಸನ್ನ, ಸಂಗೀತ : ಅನುಶೆಟ್ಟಿ, ಸ್ಥಳ: ಕಿರುರಂಗಮಂದಿರ, ಸಂಜೆ 7ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗಿನಿಂದ.

ಅಂಚೆ ಕಚೇರಿಯಲ್ಲಿ ಠೇವಣಿ ಹಣ 5.55 ಲಕ್ಷ ದುರುಪಯೋಗ



ಕ್ರೈಂ ಬಾಕ್ಸ್

ತಲಕಾಡು, ನ.12–ಅಂಚೆ ಕಚೇರಿಯಲ್ಲಿ ಸಾರ್ವಜನಿಕರು ಠೇವಣಿ ಇಟ್ಟಿದ್ದ 5.55 ಲಕ್ಷ ರೂ.ಗಳನ್ನು ಕಚೇರಿ ಸಿಬ್ಬಂದಿ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ತಲಕಾಡು ಉಪ ಅಂಚೆ ಕಚೇರಿಯ ವ್ಯಾಪ್ತಿಗೊಳಪಟ್ಟ ಟಿ.ಬೆಟ್ಟಹಳ್ಳಿ ಶಾಖಾ ಅಂಚೆ ಕಚೇರಿಯಲ್ಲಿ 2012ರ ಫೆ.10ರಿಂದ 2022ರ ಜು.1ರವರೆಗೆ ಅಂಚೆ ಪಾಲಕಿಯಾಗಿ ಕಾರ್ಯನಿರ್ವಹಿಸಿದ್ದ ಎಂ.ಎಸ್.ವಾಸುಕಿ(33) ಆರೋಪಕ್ಕೆ ಗುರಿಯಾಗಿರುವವರು. ಈ ಅಂಚೆ ಕಚೇರಿಯಲ್ಲಿ ಸೀನಿಯರ್ ಸಿಟಿಜನ್ ಸೇವಿಂಗ್ ಖಾತೆ ಹೊಂದಿದ್ದ ಮುಡುಕುತೊರೆ ನಿವಾಸಿ ಬಿ.ಎನ್.ಶಾಂತಮಲ್ಲಪ್ಪ ಎಂಬುವರು ತಮ್ಮ ಹಣ ಹಿಂಪಡೆಯಲು ಆ.4ರಂದು ತಲಕಾಡು ಉಪ ಅಂಚೆ ಕಚೇರಿಗೆ ಭೇಟಿ ನೀಡಿದಾಗ ಟಿ.ಬೆಟ್ಟಹಳ್ಳಿ ಶಾಖಾ ಅಂಚೆ ಕಚೇರಿಯ ಅಂಚೆ ಪಾಲಕಿ ವಾಸುಕಿ ಅವರು ಸಾರ್ವಜನಿಕರ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಟಿ.ಬೆಟ್ಟಹಳ್ಳಿ ಗ್ರಾಮದ ಶ್ರೀಮತಿ ಚಿಕ್ಕಮಾದಮ್ಮ ಎಂಬುವರು 2020ರ ಡಿ.9ರಂದು ಟೈಂ ಡೆಪಾಸಿಟ್ (ಟಿಡಿ) ಖಾತೆಯನ್ನು ತೆರೆಯಲು ವಾಸುಕಿ ಅವರಿಗೆ 25 ಸಾವಿರ ರೂ. ನೀಡಿದ್ದು, ವಾಸುಕಿ ಅವರು ಚಿಕ್ಕಮಾದಮ್ಮ ಹೆಸರಿನಲ್ಲಿ ಖಾತೆ ತೆರೆಯದೇ ಅವರಿಗೆ ಬೇರೆ ಆವರ್ತ ಠೇವಣಿಯ ಪಾಸ್ ಪುಸ್ತಕವನ್ನು ನೀಡಿ ಹಣ ದುರುಪಯೋಗಪಡಿಸಿಕೊಂಡಿದ್ದಾರೆ. ಮುಡುಕುತೊರೆಯ ಶಾಂತಮಲ್ಲಪ್ಪ ಅವರು 2021ರ ಜು.1ರಂದು 3 ಲಕ್ಷ ರೂ. ಹಾಗೂ 2022ರ ಮೇ 11ರಂದು 1 ಲಕ್ಷ ರೂ. ಸೀನಿಯರ್ ಸಿಟಿಜನ್ ಸೇವಿಂಗ್ ಖಾತೆ ತೆರೆಯಲು ವಾಸುಕಿ ಅವರಿಗೆ ನೀಡಿದ್ದು, ವಾಸುಕಿ ಅವರು ಶಾಂತಮಲ್ಲಪ್ಪ ಹೆಸರಿನಲ್ಲಿ ಖಾತೆಯನ್ನೇ ತೆರೆಯದೇ ಅವರಿಗೆ ನಕಲಿ ಪಾಸ್ ಪುಸ್ತಕವನ್ನು ನೀಡಿದ್ದಾರೆ.

ಬೆಟ್ಟಹಳ್ಳಿ ಗ್ರಾಮದ ಶ್ರೀಮತಿ ಕೋಮಲ ಎಂಬುವರು 2021ರ ಏ.30ರಂದು ಉಳಿತಾಯ ಖಾತೆ ತೆರೆಯಲು 50 ಸಾವಿರ ರೂ. ನೀಡಿದ್ದರೆ, ಅವರ ಹೆಸರಿನಲ್ಲಿ ಕೇವಲ 500 ರೂ.ಗಳನ್ನು ಕಚೇರಿಯ ಲೆಕ್ಕದಲ್ಲಿ ತೋರಿಸಿ, ಉಳಿದ 49,500 ರೂ. ಮಾತ್ರವಲ್ಲದೆ, 2021ರ ನ.21ರಂದು ಪಾವತಿ ಮಾಡಿದ್ದ 30 ಸಾವಿರ ರೂ. ಹಾಗೂ 2022ರ ಏ.9ರಂದು ಪಾವತಿ ಮಾಡಿದ್ದ 10 ಸಾವಿರ ರೂ. ಸೇರಿ ಕೋಮಲ ಅವರ ಒಟ್ಟು 89,500 ರೂ.ಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಬೆಟ್ಟಹಳ್ಳಿ ಗ್ರಾಮದ ಶ್ರೀಮತಿ ನಾಗಮ್ಮ ಎಂಬುವರು 15,500 ರೂ. ನೀಡಿ, ಆವರ್ತ ಠೇವಣಿ ಖಾತೆ ತೆರೆದಿದ್ದರೆ, ಅವರು ಪಾವತಿಸಿದ್ದ ಹಣವನ್ನು ಕಚೇರಿಗೆ ಜಮೆ ಮಾಡದೆ ಕೇವಲ ಪಾಸ್‌ಬುಕ್‌ನಲ್ಲಿ ಮಾತ್ರ ನಮೂದಿಸಿದ್ದಾರೆ. ಒಟ್ಟಾರೆ ವಾಸುಕಿ 5.55 ಲಕ್ಷ ರೂ.ಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಅಂಚೆ ಇಲಾಖೆಯ ತಿ.ನರಸೀಪುರ ಉಪವಿಭಾಗದ ಇನ್ಸ್‌ಪೆಕ್ಟರ್ ಪೋಸ್ಟ್ ಎಸ್.ಎನ್.ಸುಪ್ರಿಯ ನೀಡಿದ್ದ ದೂರನ್ನು ದಾಖಲಿಸಿಕೊಂಡಿರುವ ತಲಕಾಡು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕೆಲಸ ಕೊಡಿಸುವುದಾಗಿ ನರ್ಸ್‌ಗೆ ವಂಚನೆ

ಮೈಸೂರು, ನ.12–ಮಗನಿಗೆ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಎಫ್‌ಡಿಎ ಕೆಲಸ ಕೊಡಿಸುವುದಾಗಿ ನಂಬಿಸಿ ನರ್ಸ್‌ವೊಬ್ಬರಿಂದ 70 ಸಾವಿರ ನಗದು ಹಾಗೂ 131 ಗ್ರಾಂ ಚಿನ್ನಾಭರಣ ಪಡೆದು ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮಂಡ್ಯದ ಕೆಹೆಚ್‌ಬಿ ಕಾಲೋನಿ ನಿವಾಸಿಯಾಗಿರುವ ನರ್ಸ್ ಚಂದ್ರಕಲಾ (54) ವಂಚನೆಗೊಳಗಾದವರಾಗಿದ್ದು, ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ಯಶಸ್ವಿನಿ ಗೃಹ ನಿರ್ಮಾಣ ಸಹಕಾರ ಸಂಘದ ಪದಾಧಿಕಾರಿಯಾಗಿದ್ದ ಬಿ.ಎಸ್.ಲೋಕೇಶ್ವರ ಆರೋಪಕ್ಕೆ ಗುರಿಯಾಗಿರುವವರು.

ವಿವರ: ಲೋಕೇಶ್ವರ ಅವರು ಈ ಹಿಂದೆ ಯಶಸ್ವಿನಿ ಗೃಹ ನಿರ್ಮಾಣ ಸಹಕಾರ ಸಂಘದ ಪದಾಧಿಕಾರಿಯಾಗಿದ್ದರು. ಪಿಯುಸಿವರೆಗೆ ವ್ಯಾಸಂಗ ಮಾಡಿರುವ ಚಂದ್ರಕಲಾ ಪುತ್ರ ಕೆ.ನಿಶಾಂತ್‌ಗೆ ಅದೇ ಸಂಘದಲ್ಲಿ ಕೆಲಸವನ್ನೂ ಕೊಟ್ಟಿದ್ದರು. 2017ರ ನವೆಂಬರ್‌ನಲ್ಲಿ ಚಂದ್ರಕಲಾ ಅವರನ್ನು ಸಂಪರ್ಕಿಸಿದ ಲೋಕೇಶ್ವರ, 5 ಲಕ್ಷ ರೂ. ನೀಡಿದರೆ ಸಂಘದಲ್ಲಿ ನಿಶಾಂತ್‌ಗೆ ಎಫ್‌ಡಿಎ ಕೆಲಸ ಕೊಡಿಸುವುದಾಗಿ ತಿಳಿಸಿ, ನಿಶಾಂತ್‌ನಿಂದ ಅರ್ಜಿ ಸಲ್ಲಿಸುವಂತೆ ಹೇಳಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಇದನ್ನು ನಂಬಿದ ಚಂದ್ರಕಲಾ ಅವರು, ಲೋಕೇಶ್ವರ ಅವರಿಗೆ 2.20 ಲಕ್ಷ ನಗದು ನೀಡಿ, ತಮ್ಮ ಬಳಿ ಇರುವ 300 ಗ್ರಾಂ ಚಿನ್ನಾಭರಣವನ್ನು ಅಡವಿಟ್ಟು ಉಳಿಕೆ ಹಣ ಕೊಡುವುದಾಗಿ ತಿಳಿಸಿದಾಗ ಲೋಕೇಶ್ವರ ಅವರೇ ಚಿನ್ನಾಭರಣವನ್ನು ಪಡೆದು ಮೇಟಗಳ್ಳಿಯಲ್ಲಿರುವ ವಿಜಯಾ ಬ್ಯಾಂಕ್‌ನಲ್ಲಿ ಅಡವಿಟ್ಟು ಹಣ ಪಡೆದಿದ್ದಾರೆ. 2018ರ ಮೇ ತಿಂಗಳಿನಲ್ಲಿ ಮಗನ ಕೆಲಸದ ಬಗ್ಗೆ ವಿಚಾರಿಸಿದ ಚಂದ್ರಕಲಾ, ಕೆಲಸ ಕೊಡಿಸಲು ಸಾಧ್ಯವಾಗದಿದ್ದರೆ ಹಣ ವಾಪಸ್ ನೀಡಿ ಎಂದು ಕೇಳಲಾಗಿ, ಲೋಕೇಶ್ವರ 1.50 ಲಕ್ಷ ನಗದು ಹಾಗೂ 169 ಗ್ರಾಂ ತೂಕದ ಚಿನ್ನಾಭರಣ ನೀಡಿ, ಉಳಿದ 70 ಸಾವಿರ ನಗದು ಹಾಗೂ 131 ಗ್ರಾಂ ಚಿನ್ನಾಭರಣ ಕೊಡದೆ ವಂಚಿಸಿದ್ದಾರೆ ಎಂದು ಚಂದ್ರಕಲಾ ನ.10ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಆಲನಹಳ್ಳಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು



ಬನ್ನೂರು, ನ.12– ಹಾಡಹಗಲೇ ಮನೆಯ ಬೀಗ ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ತಿ.ನರಸೀಪುರ ತಾಲೂಕು ದೊಡ್ಡ ಮುಲಗೂಡು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಬಿ.ಮಾದಯ್ಯ (62) ಎಂಬುವರು ನ.10ರಂದು ಬೆಳಗ್ಗೆ ಮನೆಯಿಂದ ಹೊರಟು ಸಂಬಂಧಿಕರ ಎರಡು ಸಮಾರಂಭಗಳಲ್ಲಿ ಭಾಗವಹಿಸಿ ಮಧ್ಯಾಹ್ನ 1.45ರ ಸುಮಾರಿಗೆ ಹಿಂತಿರುಗಿದಾಗ ಅವರ ಮನೆಯ ಡೋರ್‌ಲಾಕ್ ಮುರಿದು 87 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂಜಿನಿಯರಿಂಗ್ ಕಾಲೇಜು ಪ್ರಾಧ್ಯಾಪಕಿ ಸರ ಕಳವು

ಮಂಡ್ಯ,ನ.12–ಖಾಸಗಿ ಇಂಜಿನಿಯರಿಂಗ್ ಕಾಲೇಜು ಪ್ರಾಧ್ಯಾಪಕಿಯ ಚಿನ್ನದ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಮಂಡ್ಯ ತಾಲೂಕು ಸಿದ್ದಯ್ಯನ ಕೊಪ್ಪಲು ಗೇಟ್‌ನಲ್ಲಿ ನಡೆದಿದೆ.



ಮಂಡ್ಯದ ಕಾವೇರಿ ಇಂಜಿನಿಯರಿಂಗ್ ಕಾಲೇಜು ಪ್ರಾಧ್ಯಾಪಕಿ ಬಿ.ಹೆಚ್.ರಕ್ಷಿತಾ(25) ಸರ ಕಳೆದುಕೊಂಡವರಾಗಿದ್ದು, ಇವರು ಜುಲೈ 10ರಂದು ಸಂಜೆ 4.30ರ ಸುಮಾರಿನಲ್ಲಿ ಕಾಲೇಜಿನಿಂದ ತಮ್ಮ ಗ್ರಾಮವಾದ ಶ್ರೀರಂಗಪಟ್ಟಣ ತಾಲೂಕು ಬೆಳಗೊಳಕ್ಕೆ ಹೋಗಲು ಸಿದ್ದಯ್ಯನಕೊಪ್ಪಲು ಗೇಟ್ ಬಳಿ ಬಸ್‌ಗಾಗಿ ಕಾಯುತ್ತಾ ನಿಂತಿದ್ದಾಗ ಬೆಂಗಳೂರು ಕಡೆಯಿಂದ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು, ಪಾಂಡವಪುರಕ್ಕೆ ಯಾವ ಕಡೆ ಹೋಗಬೇಕು ಎಂದು ಅವರನ್ನು ಕೇಳಿದ್ದಾರೆ. ರಕ್ಷಿತಾ, ಮಾರ್ಗ ತೋರಿಸುತ್ತಿದ್ದಂತೆಯೇ ಬೈಕ್‌ನ ಹಿಂಬದಿ ಸವಾರ ಅವರ ಕತ್ತಿನಲ್ಲಿದ್ದ 12 ಗ್ರಾಂ ತೂಕದ ಸರವನ್ನು ಕಿತ್ತುಕೊಳ್ಳುತ್ತಿದ್ದಂತೆಯೇ ಸವಾರ ವೇಗವಾಗಿ ಬೈಕ್ ಚಾಲನೆ ಮಾಡಿಕೊಂಡು ಹೋಗಿದ್ದಾನೆ. ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಕೂಟರ್ ಡಿಕ್ಕಿಯಲ್ಲಿನ 2 ಲಕ್ಷ ನಗದು, ದಾಖಲೆ ಪತ್ರ ಕಳವು

ಕೆ.ಆರ್.ನಗರ, ನ.12–ಸ್ಕೂಟರ್‌ನ ಡಿಕ್ಕಿಯಲ್ಲಿಟ್ಟಿದ್ದ 2 ಲಕ್ಷ ನಗದು ಹಾಗೂ ಕೆಲ ದಾಖಲಾತಿಗಳನ್ನು ಕಳವು ಮಾಡಿರುವ ಘಟನೆ ಕೆ.ಆರ್.ನಗರದ ಸಿಲ್ವರ್ ಜ್ಯೂಬಿಲಿ ರಸ್ತೆಯಲ್ಲಿ ಇರುವ ವಾಲ್ಮೀಕಿ ಛತ್ರದ ಬಳಿ ನಡೆದಿದೆ.

ಹುಣಸೂರು ತಾಲೂಕು ಬಿಳಿಕೆರೆ ಗ್ರಾಮದ ರೈತ ದಾಸೇಗೌಡ (62) ಹಣ ಕಳೆದುಕೊಂಡವರಾಗಿದ್ದು, ಇವರು ತಮ್ಮ ಮಾವ ಶಿವರಾಮೇಗೌಡರ ಗದ್ದೆಯನ್ನು ಬಸವಾಪಟ್ಟಣ ಗ್ರಾಮದ ಲಕ್ಷ್ಮಿ ಎಂಬುವರಿಗೆ ನ.10ರಂದು ಕೆ.ಆರ್.ನಗರ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮಾಡಿಸಿ, ಅವರಿಂದ ಪಡೆದ 2 ಲಕ್ಷ ರೂ.ಗಳನ್ನು ಹೋಂಡಾ ಆಕ್ಟೀವಾ (ಕೆಎ 05 ಕೆಎ 4676) ಡಿಕ್ಕಿಯಲ್ಲಿ ಇಟ್ಟುಕೊಂಡು ಸಿಲ್ವರ್ ಜ್ಯೂಬಿಲಿ ರಸ್ತೆಯ ವಾಲ್ಮೀಕಿ ಛತ್ರದ ಮುಂದೆ ಸ್ಕೂಟರ್ ನಿಲ್ಲಿಸಿ ಎದುರುಗಡೆ ಇದ್ದ ತಾಮ್ರದ ಅಂಗಡಿಗೆ ತನ್ನ ಸ್ನೇಹಿತನೊಂದಿಗೆ ತೆರಳಿದ್ದಾರೆ. ಅಲ್ಲಿ ಸ್ನೇಹಿತನಿಗೆ ತಾಮ್ರದ ಪಾತ್ರೆ ಕೊಡಿಸಿ, ಮಧ್ಯಾಹ್ನ 3.45ರ ಸುಮಾರಿಗೆ ಸ್ಕೂಟರ್ ಬಳಿ ಬಂದಾಗ ಅದರಲ್ಲಿದ್ದ 2 ಲಕ್ಷ ನಗದು ಹಾಗೂ ದಾಖಲೆಗಳು ಕಳುವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಲೆ ಮೇಲೆ ಸಿಮೆಂಟ್ ಬ್ಲಾಕ್ ಎತ್ತಿ ಹಾಕಿ ವ್ಯಕ್ತಿ ಹತ್ಯೆ: ಆರೋಪಿ ಸೆರೆ

ಮೈಸೂರು,ನ.12(ಆರ್‌ಕೆ)–ಮೈಸೂರಿನ ಗಾಂಧಿ ವೃತ್ತದ ಉಮಾ ಟಾಕೀಸ್ ರಸ್ತೆಯಲ್ಲಿ ಸಿಮೆಂಟ್ ಕಾಂಕ್ರೀಟ್ ಬ್ಲಾಕ್‌ನಿಂದ ತಲೆ ಜಜ್ಜಿ ವ್ಯಕ್ತಿ ಹತ್ಯೆಗೈದಿದ್ದ ಆರೋಪಿಯನ್ನು ಲಷ್ಕರ್ ಠಾಣೆ ಪೊಲೀಸರು ಇಂದು ಬಂಧಿಸಿದ್ದಾರೆ.

ಪಾಂಡವಪುರ ಟೌನ್ ನಿವಾಸಿ ಸಮರ್ಥ್ (23) ಬಂಧಿತ ಕೊಲೆ ಆರೋಪಿ. ನ.11ರಂದು ಮುಂಜಾನೆ ತಿ.ನರಸೀಪುರ ತಾಲೂಕು, ಯಡತೊರೆ ಗ್ರಾಮದ ಚೆನ್ನಾಜ (42) ಎಂಬಾತನನ್ನು ಹತ್ಯೆಗೈದು ತಲೆಮರೆಸಿಕೊಂಡಿದ್ದ ಆತನನ್ನು ಪುರಭವನದ ಬಳಿ ಬಂಧಿಸಿದ ಪೊಲೀಸರು, ವಿಚಾರಣೆ ನಡೆಸಿದ ಬಳಿಕ ಸಂಜೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಚಿಂದಿ ಆಯುವವರಾದ ಇಬ್ಬರೂ, ಗಾಂಧಿ ಸ್ಕ್ವೇರ್, ಲಷ್ಕರ್ ಮೊಹಲ್ಲಾ ಹಾಗೂ ಸುತ್ತಮುತ್ತ ಓಡಾಡಿಕೊಂಡು ಆಯ್ದ ಚಿಂದಿ ಪದಾರ್ಥ ಮಾರಿ ಜೀವನ ನಡೆಸುತ್ತಿದ್ದರು. ಮಲಗಿದ್ದ ವೇಳೆ ಚಿಂದಿ ಆಯುವ ಚೀಲ ಕದ್ದ ವಿಷಯಕ್ಕೆ ಜಗಳವಾಡುತ್ತಿದ್ದ ವೇಳೆ ಸಮರ್ಥ್, ಚಾಕುವಿನಿಂದ ಚೆನ್ನಾಜನಿಗೆ ಇರಿದನಲ್ಲದೆ, ಕೆಳಕ್ಕೆ ಬಿದ್ದ ಆತನ ತಲೆ ಮೇಲೆ ಸಿಮೆಂಟ್ ಕಾಂಕ್ರೀಟ್ ಬ್ಲಾಕ್ ಎತ್ತಿ ಹಾಕಿ ಕೊಲೆ ಮಾಡಿದ್ದ. ತನಿಖೆ ನಡೆಸಿದ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಸಂತೋಷ್, ಸಬ್ ಇನ್ಸ್‌ಪೆಕ್ಟರ್ ಗೌತಮ್‌ಗೌಡ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು 24 ಗಂಟೆಯೊಳಗೆ ಬಂಧಿಸಿದ್ದಾರೆ.

ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ: ಸವಾರ ಸಾವು

ಬಿಳಿಕೆರೆ, ನ.12–ಟ್ರಾಕ್ಟರ್ ಡಿಕ್ಕಿ ಹೊಡೆದು ಬೈಕ್ ಸವಾರ ಸಾವನ್ನಪ್ಪಿ, ಹಿಂಬದಿ ಸವಾರ ತೀವ್ರವಾಗಿ ಗಾಯಗೊಂಡಿರುವ ಘಟನೆ ಹುಣಸೂರು ತಾಲೂಕು ಕೊಮ್ಮೇಗೌಡನಕೊಪ್ಪಲು ಗ್ರಾಮದಲ್ಲಿ ಸಂಭವಿಸಿದೆ. ಹುಣಸೂರು ತಾಲೂಕು ಆಯರಹಳ್ಳಿ ಗ್ರಾಮದ ದೀಪಕ್ (26) ಅಪಘಾತದಲ್ಲಿ ಸಾವನ್ನಪ್ಪಿದ್ದು, ಹಿಂಬದಿ ಸವಾರ, ಈತನ ಸಂಬಂಧಿಕ ಕಾರ್ತಿಕ್ (22) ತೀವ್ರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.



ರಾಣಿ ಮದ್ರಾಸ್ ಕಾರ್ಖಾನೆಯ ಕಾರ್ಮಿಕರಾದ ದೀಪಕ್ ಮತ್ತು ಕಾರ್ತಿಕ್ ಕೆಎ 45 ಯು 6731 ಸಂಖ್ಯೆಯ ಬೈಕ್‌ನಲ್ಲಿ ಆಯರಹಳ್ಳಿಯಿಂದ ಮೈಸೂರಿನತ್ತ ತೆರಳುತ್ತಿದ್ದಾಗ ನ.10ರಂದು ಮುಂಜಾನೆ 5.45ರ ಸುಮಾರಿಗೆ ಮೈಸೂರು ಕಡೆಯಿಂದ ಬರುತ್ತಿದ್ದ ಟ್ರಾಕ್ಟರ್ (ಕೆಎ 11 3093) ಇವರ ಬೈಕಿಗೆ ಡಿಕ್ಕಿ ಹೊಡೆದು, ದುರಂತ ಸಂಭವಿಸಿದೆ. ಅಪಘಾತದ ನಂತರ ಚಾಲಕ ಟ್ರಾಕ್ಟರ್ ಅನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ. ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ: ಸವಾರ ಸಾವು

ಮೈಸೂರು, ನ.12–ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ ಹೊಡೆದು ಸವಾರ ಸಾವನ್ನಪ್ಪಿ, ಹಿಂಬದಿ ಸವಾರ ಗಾಯಗೊಂಡಿರುವ ಘಟನೆ ಮೈಸೂರು–ಹುಣಸೂರು ರಸ್ತೆಯ ಜಲದರ್ಶಿನಿ ಅತಿಥಿ ಗೃಹದ ಮುಂಭಾಗ ಸಂಭವಿಸಿದೆ.

ಸಾಲಿಗ್ರಾಮ ತಾಲೂಕು ಕುಪ್ಪೆ ಗ್ರಾಮದ ವಿದ್ಯಾರ್ಥಿ ಶ್ರೀಹರಿಗೌಡ(20) ಅಪಘಾತದಲ್ಲಿ ಸಾವನ್ನಪ್ಪಿದ್ದು, ಹಿಂಬದಿ ಸವಾರ ಅದೇ ಗ್ರಾಮದ ಕೆ.ಎನ್.ವರುಣ ಎಂಬಾತ ಗಾಯಗೊಂಡಿದ್ದಾನೆ. ನ.11ರಂದು ಬೆಳಗಿನ ಜಾವ 2.30ರ ಸುಮಾರಿನಲ್ಲಿ ತನ್ನ ಬುಲೆಟ್ ಬೈಕ್ (ಕೆಎ 09 ಹೆಚ್‌ಎಕ್ಸ್ 8963)ನಲ್ಲಿ ವರುಣನನ್ನು ಹಿಂಬದಿ ಕೂರಿಸಿಕೊಂಡು ವೇಗವಾಗಿ ತೆರಳುತ್ತಿದ್ದ ಶ್ರೀಹರಿಗೌಡನ ನಿಯಂತ್ರಣ ತಪ್ಪಿದ ಬೈಕ್ ಜಲದರ್ಶಿನಿ ವಸತಿ ಗೃಹದ ಮುಂಭಾಗ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಈ ವೇಳೆ ವಿಭಜಕದ ಮಧ್ಯ ಇದ್ದ ವಿದ್ಯುತ್ ಕಂಬಕ್ಕೆ ಶ್ರೀಹರಿಗೌಡನ ತಲೆ ಅಪ್ಪಳಿಸಿ, ಆತ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ. ಹಿಂಬದಿ ಸವಾರ ವರುಣ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾನೆ. ಈ ಸಂಬಂಧ ವಿವಿಪುರಂ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮೇಯರ್‌ಗೆ ಮಾತೃವಿಯೋಗ

ಮೈಸೂರು: ಮೇಯರ್ ಶಿವಕುಮಾರ್ ಅವರ ತಾಯಿ ಸಿದ್ದಮ್ಮ (90) ಶನಿವಾರ ನಿಧನರಾದರು. ಮೃತರು ಪಾಲಿಕೆ ನಿವೃತ್ತ ಇಂಜಿನಿಯರ್ ಶ್ರೀಕಂಠ, ಮೇಯರ್ ಶಿವಕುಮಾರ್ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಕುವೆಂಪುನಗರದಲ್ಲಿರುವ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದ್ದು, ನಾಳೆ(ನ.13) ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.



ರಾಜ್ಯ ಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್-2022

ಹಿರಿಯ ಕ್ರೀಡಾಪಟುಗಳ ಕ್ರೀಡಾ ಸ್ಫೂರ್ತಿಗೆ ಬೆಕ್ಕಸ ಬೆರಗಾದ ನೆರೆದಿದ್ದ ಕ್ರೀಡಾಸಕ್ತರು

ಶಾಸಕ ಎಲ್.ನಾಗೇಂದ್ರರಿಂದ ಕ್ರೀಡಾಕೂಟಕ್ಕೆ ಚಾಲನೆ





ಮೈಸೂರು, ನ.12(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನದಲ್ಲಿ ಶನಿವಾರ ನಡೆದ 42ನೇ ಕರ್ನಾಟಕ ರಾಜ್ಯ ಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್–2022ರಲ್ಲಿ ರಾಜ್ಯದ ವಿವಿಧೆಡೆಯಿಂದ ಆಗಮಿಸಿರುವ 500ಕ್ಕೂ ಹೆಚ್ಚು ಮಾಸ್ಟರ್ ಅಥ್ಲೀಟ್‌ಗಳು ಪಾಲ್ಗೊಂಡು ಗಮನ ಸೆಳೆದರು.

ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್, ಮಾಸ್ಟರ್ಸ್ ಅಥ್ಲೆಟಿಕ್ ಅಸೋಸಿಯೇಷನ್ ಆಫ್ ಕರ್ನಾಟಕ, ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ನಡೆದ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಂಡಿದ್ದ ಹಿರಿಯ ಅಥ್ಲೀಟ್‌ಗಳು ಮಳೆ, ಗಾಳಿ, ಇಬ್ಬನಿಯನ್ನು ಲೆಕ್ಕಿಸದೆ ಕ್ರೀಡಾಸ್ಫೂರ್ತಿ ಪ್ರದರ್ಶಿಸಿ, ಕಿರಿಯ ಪಟುಗಳು ನಾಚುವಂತೆ ಮಾಡಿದರು.

ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗೆ ಶಾಸಕ ಎಲ್. ನಾಗೇಂದ್ರ ಚಾಲನೆ ನೀಡಿ ಮಾತನಾಡಿ, ಎಲ್ಲರೂ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದು ಮುಖ್ಯ. ದೈಹಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ಮಾನಸಿಕ ಹಾಗೂ ದೈಹಿಕವಾಗಿ ಸದೃಢಗೊಳ್ಳಬಹುದು ಎಂದರು.

ಮೇಯರ್ ಶಿವಕುಮಾರ್ ಮಾತನಾಡಿ, ರಾಜ್ಯದ ಹಿರಿಯ ಕ್ರೀಡಾಪಟುಗಳು ಈ ಅಥ್ಲೆಟಿಕ್ಸ್‌ನಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿರುವುದು ಸಂತೋಷವನ್ನುಂಟು ಮಾಡಿದೆ. ಮಾಸ್ಟರ್ ಅಥ್ಲೀಟ್‌ಗಳಾಗಿದ್ದರೂ ಕಿರಿಯ ಕ್ರೀಡಾಪಟುಗಳಂತೆ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದಾರೆ. ಯುವ ಕ್ರೀಡಾಳುಗಳು ಹಿರಿಯ ಅಥ್ಲೀಟ್‌ಗಳಂತೆ ಕ್ರೀಡಾ ಉತ್ಸವ ಪ್ರದರ್ಶಿಸುವ ಅಗತ್ಯವಿದೆ ಎಂದರು.

ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ ಅಧ್ಯಕ್ಷ ಡೇವಿಡ್ ಪ್ರೇಮನಾಥ್ ಮಾತನಾಡಿ, ಮುಂಬರುವ ಏಷ್ಯಾ ಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಮಾಸ್ಟರ್ಸ್ ಅಥ್ಲೀಟ್‌ಗಳು ಈಗಿನಿಂದಲೇ ಸಜ್ಜಾಗಬೇಕು. ಈ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಂಡಿರುವ ಎಲ್ಲರೂ ಏಷ್ಯಾ ಮಟ್ಟದ ಕ್ರೀಡಾಕೂಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಅದಕ್ಕೂ ಮುನ್ನ ವಿವಿಧೆಡೆ ಅನಧಿಕೃತ ಕ್ಲಬ್‌ಗಳು ನಡೆಸುವ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳಬಾರದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷೆ ಸುಮನಾ ನರಸಿಂಹಮೂರ್ತಿ ವಹಿಸಿದ್ದರು. ಮಾಜಿ ಶಾಸಕರೂ ಆದ ಮೈಸೂರು ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ವಾಸು, ವಿಶೇಷ ಅತಿಥಿಯಾಗಿದ್ದ ಹಿರಿಯ ಪತ್ರಕರ್ತ ರವೀಂದ್ರ ಭಟ್, ಮೈವಿವಿ ದೈಹಿಕ ಶಿಕ್ಷಣ ಇಲಾಖೆ ನಿರ್ದೇಶಕ ಡಾ.ಪಿ.ಕೃಷ್ಣಯ್ಯ, ನಿವೃತ್ತ ನಿರ್ದೇಶಕ ಡಾ.ಸಿ.ಕೃಷ್ಣ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತೆ ಶ್ರುತಿ, ಮಾಸ್ಟರ್ಸ್ ಅವರುಗಳು ಉಪಸ್ಥಿತರಿದ್ದರು.

ಗೌರವ ಕಾರ್ಯದರ್ಶಿ ಪಿ.ಜಿ. ಸತ್ಯನಾರಾಯಣ ಸ್ವಾಗತಿಸಿದರು. ಹಿರಿಯ ಜಂಟಿ ಕಾರ್ಯದರ್ಶಿ ಎಂ.ಪಿ.ಚಂದ್ರಶೇಖರ ಕಾರ್ಯಕ್ರಮ ನಿರೂಪಿಸಿದರು. ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಪದಾಧಿಕಾರಿಗಳಾದ ಎನ್.ಆರ್.ಶಂಕರರಾವ್, ಕೆ.ಎನ್.ಸೋಮಶೇಖರ್, ಎಂ.ಯೋಗೇಂದ್ರ ಸಿ.ಎನ್.ಗಣೇಶ್, ಪಾರ್ವತಿ ಕಾಂತರಾಜ್, ಸಿ.ಆರ್.ಆನಂದ, ಎಂ.ಎಂ.ನಾಣಯ್ಯ, ಬಿ.ಬಸವರಾಜು, ಮಹದೇವಯ್ಯ, ಬಿ.ಎಸ್.ಜಯಶ್ರೀ, ಎಸ್.ಮಹದೇವು, ಅಶೋಕ್, ಸಿ.ಕೆ.ಮುರಳೀಧರನ್, ಸೋಮಶೇಖರ್, ಮಹದೇವರಾವ್, ಎಂ.ಶಶಿಧರನ್ ಕುಟ್ಟಿ, ಚನ್ನಯ್ಯ, ಎಂ.ಎಸ್.ಮಹೇಶ್, ರಾಣಿ ಬಿ.ರಾಜ್, ಅಂತಾರಾಷ್ಟ್ರೀಯ ಅಥ್ಲೀಟ್‌ಗಳು ಪಾಲ್ಗೊಂಡಿದ್ದರು.

ಓವಲ್ ಮೈದಾನದಲ್ಲಿ ಶೌಚಾಲಯ, ದೀಪದ ವ್ಯವಸ್ಥೆಗೆ ಮನವಿ

ಮೈಸೂರು ವಿವಿ ಕ್ರಾಫರ್ಡ್ ಭವನದ ಎದುರಿನ ಓವಲ್ ಮೈದಾನಕ್ಕೆ ಪ್ರತಿನಿತ್ಯ ಬೆಳಗ್ಗೆ ಹಾಗೂ ಸಂಜೆ ನೂರಾರು ಕ್ರೀಡಾಪಟುಗಳು ಜಾಗಿಂಗ್‌ಗೆ ಬರುತ್ತಾರೆ. ಆದರೆ ದೀಪ ಹಾಗೂ ಶೌಚಾಲಯ ವ್ಯವಸ್ಥೆ ಇಲ್ಲದೇ ತೊಂದರೆಯಾಗಿದೆ. ಇದನ್ನು ನಗರಪಾಲಿಕೆ ವತಿಯಿಂದ ಮಾಡಿಕೊಡಬೇಕು ಎಂದು ಶಾಸಕ ಎಲ್.ನಾಗೇಂದ್ರ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಹಾಜರಿದ್ದ ಮೇಯರ್ ಶಿವಕುಮಾರ್, ಇದಕ್ಕೆ ಪೂರಕವಾಗಿ ಸ್ಪಂದಿಸಿ, ಸೂಕ್ತ ಕ್ರಮದ ಭರವಸೆ ನೀಡಿದರು.

ಗಂಗೋತ್ರಿಯಲ್ಲಿ ವಾಯುವಿಹಾರಕ್ಕೆ ನಿರ್ಬಂಧ: ಪ್ರತಿಭಟನೆ



ಮೈಸೂರು,ನ.12(ಪಿಎಂ)– ಮೈಸೂರು ವಿವಿಯ ಮಾನಸಗಂಗೋತ್ರಿ ಆವರಣದಲ್ಲಿ ವಾಯುವಿಹಾರಕ್ಕೆ ನಿರ್ಬಂಧ ವಿಧಿಸಿರುವುದನ್ನು ವಿರೋಧಿಸಿ ಇಲ್ಲಿ ಬೆಳಗ್ಗೆ ಮತ್ತು ಸಂಜೆ ವಾಯುವಿಹಾರ ಮಾಡುತ್ತಿದ್ದ ಹಿರಿಯ ನಾಗರಿಕರು ಹಾಗೂ ಸಾರ್ವಜನಿಕರು ಶನಿವಾರ ಬೆಳಗ್ಗೆ ವಿವಿಯ ಮುಖ್ಯದ್ವಾರದಲ್ಲಿ ಪ್ರತಿಭಟನೆ ನಡೆಸಿದರು.

ಮಾನಸಗಂಗೋತ್ರಿ ಆವರಣದಲ್ಲಿ ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಹತ್ಯೆ ನಡೆದ ಹಿನ್ನೆಲೆಯಲ್ಲಿ ಹೀಗೆ ನಿರ್ಬಂಧ ವಿಧಿಸಲಾಗಿದೆ. 700 ಎಕರೆಗಿಂತಲೂ ಹೆಚ್ಚು ವಿಸ್ತೀರ್ಣ ಹೊಂದಿರುವ ಇಡೀ ಆವರಣದಲ್ಲಿ ವಾಯುವಿಹಾರಕ್ಕೆ ನಿರ್ಬಂಧ ವಿಧಿಸುವುದು ಸರಿಯಲ್ಲ ಎಂದು ಕಿಡಿಕಾರಿದರು.

ಹತ್ಯೆ ನಡೆದ ಸ್ಥಳದಲ್ಲಿ ನಿರ್ಬಂಧ ವಿಧಿಸಬಹುದು. ಅದನ್ನು ಬಿಟ್ಟು ಇಡೀ ಮಾನಸಗಂಗೋತ್ರಿಯಲ್ಲಿಯೇ ವಾಯುವಿಹಾರ ನಿರ್ಬಂಧಿಸಿರುವುದು ಸೂಕ್ತವಲ್ಲ. ಇಂತಹ ಅವೈಜ್ಞಾನಿಕ ನಿರ್ಬಂಧವು ವಿವಿಯ ಅಧಿಕಾರಿ ವರ್ಗದ ಬುದ್ಧಿಮತ್ತೆಯ ಕೊರತೆ ಎನ್ನಬಹುದು ಎಂದು ಕಿಡಿಕಾರಿದರಲ್ಲದೆ, ಈ ಹಿಂದಿನಂತೆ ವಾಯುವಿಹಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಇಂದು 'ಟಿಪ್ಪು ನಿಜ ಕನಸುಗಳು' ನಾಟಕ ಕೃತಿ ಲೋಕಾರ್ಪಣೆ

ಮೈಸೂರು, ನ.12– ಮೈಸೂರು ರಂಗಾಯಣದಲ್ಲಿ ನಾಳೆ (ನ.13) ರ ಸಂಜೆ 4 ಗಂಟೆಗೆ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿತ 'ಟಿಪ್ಪು ನಿಜಕನಸುಗಳು' ನಾಟಕ ಕೃತಿ ಲೋಕಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಖ್ಯಾತ ಕಾದಂಬರಿಕಾರರೂ ಆದ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಅವರು ಕೃತಿ ಲೋಕಾರ್ಪಣೆಗೊಳಿಸಿ ಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಸಾಮಾಜಿಕ ಕಾರ್ಯ ಕರ್ತ ವಾದಿರಾಜ್, ಚಿಂತಕ ರೋಹಿತ್ ಚಕ್ರತೀರ್ಥ ಮತ್ತಿತರರು ಭಾಗವಹಿಸಿಲಿದ್ದಾರೆ.

ಆರ್.ಎನ್.ಕುಲಕರ್ಣಿ ಹತ್ಯೆ ಪ್ರಕರಣ

ವಿವಾದಿತ ಅನಧಿಕೃತ ಕಟ್ಟಡ ತೆರವಿಗೆ ಪಾಲಿಕೆ ಗಡುವು ಅಂತ್ಯ; ಆಯುಕ್ತರ ಹಾರಿಕೆ ಉತ್ತರ



ಮೈಸೂರು,ನ.12(ಪಿಎಂ)–ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಹತ್ಯೆಗೆ ಕಾರಣವಾದ ಅನಧಿಕೃತ ಕಟ್ಟಡ ತೆರವಿಗೆ ಪಾಲಿಕೆ ನೀಡಿದ್ದ ಗಡುವು ಶನಿವಾರ ಅಂತ್ಯಗೊಂಡಿದೆ. ಮೈಸೂರಿನ ಟಿ.ಕೆ.ಬಡಾವಣೆಯಲ್ಲಿ ಕುಲಕರ್ಣಿಯವರ ಮನೆಯ ಪಕ್ಕದಲ್ಲಿ ನೆರಮನೆಯ ಮಾದಪ್ಪ ಎಂಬುವರ ಮನೆಯ ಅಕ್ರಮ ನಿರ್ಮಾಣ ತೆರವಿಗೆ ಪಾಲಿಕೆ 2 ಬಾರಿ ನೋಟಿಸ್ ನೀಡಿತ್ತು. ಅಲ್ಲದೆ, ಪಾಲಿಕೆಯು, ಅಂತಿಮವಾಗಿ ನ.2ರಂದು ನೋಟಿಸ್ ನೀಡಿ, ನ.12ರೊಳಗೆ ನಿಯಮಬಾಹಿರವಾಗಿ ನಿರ್ಮಿಸಿರುವ ಕಟ್ಟಡದ ಭಾಗವನ್ನು ಸ್ವತಃ ಮಾಲೀಕರೇ ತೆರವುಗೊಳಿಸುವಂತೆ ಸೂಚನೆ ನೀಡಿತ್ತು. ಇಲ್ಲವಾದರೆ ಪಾಲಿಕೆ ವತಿಯಿಂದಲೇ ಕಾರ್ಯಾಚರಣೆ ನಡೆಸಿ ತೆರವುಗೊಳಿಸುವ ಎಚ್ಚರಿಕೆಯನ್ನೂ ನೀಡಲಾಗಿತ್ತು. ಇದೀಗ ಶನಿವಾರಕ್ಕೆ ಪಾಲಿಕೆ ನೀಡಿದ್ದ ಗಡುವು ಅಂತ್ಯಗೊಂಡಿದ್ದು, ಪಾಲಿಕೆ ಮುಂದಿನ ಕ್ರಮ ಏನೆಂದು ಕಾದು ನೋಡಬೇಕಿದೆ. ಈ ಸಂಬಂಧ ನಗರ ಪಾಲಿಕೆ ಆಯುಕ್ತರನ್ನು ಮೊಬೈಲ್ ಮೂಲಕ 'ಮೈಸೂರು ಮಿತ್ರ' ಸಂಪರ್ಕಿಸಿದಾಗ, ಈ ಸಂಬಂಧ ನಿಮ್ಮೊಂದಿಗೆ ನಾಳೆ (ಭಾನುವಾರ) ಮಾತನಾಡುವುದಾಗಿ ತಿಳಿಸಿದರು.

ಕೆಂಪೇಗೌಡರ ಪ್ರತಿಮೆ ಅನಾವರಣ ವೇಳೆ ದೇವೇಗೌಡರು, ಸಿದ್ದರಾಮಯ್ಯರ ಆಹ್ವಾನಿಸದ್ದಕ್ಕೆ ಕುರುಬರ ಸಂಘ ಆಕ್ಷೇಪ

ಮೈಸೂರು, ನ.12– ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಪ್ರಧಾನಿಯಾಗಿದ್ದ ಕನ್ನಡಿಗ ಎಚ್.ಡಿ ದೇವೇಗೌಡರು ಹಾಗೂ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯನವರನ್ನು ಆಹ್ವಾನಿಸದೆ ಬಿಜೆಪಿ ಸರ್ಕಾರ ಸಣ್ಣತನ ಮೆರೆದಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘ ಖಂಡಿಸಿದೆ.



ಬಿ.ಸುಬ್ರಹ್ಮಣ್ಯ

ರಾಜ್ಯದಲ್ಲಿ ಒಕ್ಕಲಿಗ ಸಮುದಾಯಕ್ಕೆ ಹೆಚ್.ಡಿ.ದೇವೇಗೌಡರು, ಹಿಂದುಳಿದ ವರ್ಗಗಳಿಗೆ ಸಿದ್ದರಾಮಯ್ಯನವರು ಹಾಗೂ ಲಿಂಗಾಯತ ಸಮಾಜಕ್ಕೆ ಬಿ.ಎಸ್.ಯಡಿಯೂರಪ್ಪನವರು ಪ್ರಶ್ನಾತೀತ ನಾಯಕರು ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಆದರೆ ನಾಡಪ್ರಭು ಕೆಂಪೇಗೌಡರ ಬೃಹತ್ ಪ್ರತಿಮೆ ಅನಾವರಣಕ್ಕೆ ಅವರದೇ ಸಮುದಾಯದ ಮುತ್ಸದ್ದಿ ಹೆಚ್.ಡಿ.ದೇವೇಗೌಡರನ್ನು ಆಹ್ವಾನಿಸಿಲ್ಲ. ಪ್ರತಿಪಕ್ಷ ನಾಯಕ ಸಿದ್ದರಾಮಯ್ಯನವರನ್ನು ಆಹ್ವಾನಿಸದೆ ಶಿಷ್ಟಾಚಾರವನ್ನು ಉಲ್ಲಂಘಿಸಿದ್ದಾರೆ. ಅವರದೇ ಪಕ್ಷದ ಹಿರಿಯರಾದ ಯಡಿಯೂರಪ್ಪನವರನ್ನೂ ಕಾಟಾಚಾರಕ್ಕೆ ಆಹ್ವಾನಿಸಿದ್ದಾರೆ. ಹೀಗೆ ಬಿಜೆಪಿ ಸರ್ಕಾರ ನಾಡಿನ ಹಿರಿಯರಿಗೆ ಅಪಮಾನ ಮಾಡಿದೆ.

ರೈತಾಪಿ ಕುಟುಂಬದ ದೇವೇಗೌಡರು ರಾಜಕೀಯದಲ್ಲಿ ಹಂತಹಂತವಾಗಿ ಬೆಳೆದು ಪ್ರಧಾನಿಯಾಗಿ ದೇಶದ ಆಡಳಿತ ನಡೆಸಿ ಏಕಮಾತ್ರ ಕನ್ನಡಿಗರೆನಿಸಿಕೊಂಡಿದ್ದಾರೆ. ಬೆಂಗಳೂರು ವಿಮಾನ ನಿಲ್ದಾಣವನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವೆಂದು ನಾಮಕರಣ ಮಾಡಿದ್ದು ಮಾಜಿ ಸಿಎಂ ಸಿದ್ದರಾಮಯ್ಯನವರು. ಆದರೆ ಇವರನ್ನು ಸೌಜನ್ಯಕ್ಕೂ ಆಹ್ವಾನಿಸದಿರುವುದು ಖಂಡನೀಯ. ಇದೇ ವೇಳೆ ಶ್ರೀ ಕನಕದಾಸರ ಜಯಂತಿಯನ್ನು ಸರ್ಕಾರ ನೆಪಮಾತ್ರಕ್ಕೆ ಆಚರಿಸಿದೆ. ಹಲವು ಜಿಲ್ಲೆಗಳಲ್ಲಿ ಉಸ್ತುವಾರಿ ಸಚಿವರು ಹಾಗೂ ಅಧ್ಯಕ್ಷತೆ ವಹಿಸಬೇಕಿದ್ದ ಶಾಸಕರೂ ಗೈರಾಗಿದ್ದರು. ಜಿಲ್ಲಾಡಳಿತವೂ ನಿರಾಸಕ್ತಿ ಪ್ರದರ್ಶಿಸಿತು. ಈ ಧೋರಣೆ ಸರಿಯಲ್ಲ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಟಿಪ್ಪು ನಿಜ ಕನಸುಗಳು' ನಾಟಕಕ್ಕೆ ತಡೆಯಾಜ್ಞೆ ತರ್ತೇನೆ...'

- ಶಾಸಕ ತನ್ವೀರ್ ಸೇಠ್ ಸ್ಪಷ್ಟ ನುಡಿ
- ಇಸ್ಲಾಂನಲ್ಲಿ ಪ್ರತಿಮೆ ಪ್ರತಿಷ್ಠಾಪನೆಗೆ ಅವಕಾಶವಿಲ್ಲ; ಆದರೆ ಈಗ ಅನಿವಾರ್ಯ

ಮೈಸೂರು, ನ.12(ಎಂಟಿವೈ)– ಟಿಪ್ಪು ಸುಲ್ತಾನ್ ಕುರಿತಂತೆ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಆಯೋಜಿಸಿರುವ 'ಟಿಪ್ಪು ನಿಜ ಕನಸುಗಳು' ನಾಟಕ ಪ್ರದರ್ಶನಕ್ಕೆ ತಡೆಯಾಜ್ಞೆ ತರುವ ಮೂಲಕ ಕಾನೂನು ಹೋರಾಟ ನಡೆಸಲು ನಿರ್ಧರಿಸಲಾಗಿದೆ ಎಂದು ಶಾಸಕ ಹಾಗೂ ಮಾಜಿ ಸಚಿವ ತನ್ವೀರ್ ಸೇಠ್ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟಗಾರರಾದ ಟಿಪ್ಪು ಸುಲ್ತಾನ್ ಬಗ್ಗೆ ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ತಮ್ಮದೇ ಆದ ಕಪೋಲಕಲ್ಪಿತ ಮಾಹಿತಿಯೊಂದಿಗೆ ಪುಸ್ತಕ ರಚಿಸಿದ್ದಾರೆ. ಓರ್ವ ವ್ಯಕ್ತಿಪರ ಎಲ್ಲಾ ಮಾಹಿತಿಗಳು ಪೂರಕವಾಗಿಯೇ ಇರಬೇಕು ಎನ್ನುವುದು ಸರಿಯಲ್ಲ. ಟೀಕೆ ಮಾಡುವ ಮನೋಭಾವವೂ ನಮ್ಮಲ್ಲಿರುತ್ತದೆ. ಈ ಹಿನ್ನೆಲೆಯಲ್ಲಿ 'ಟಿಪ್ಪು ನಿಜ ಕನಸುಗಳು' ಪುಸ್ತಕದಲ್ಲಿ ಏನಿದೆ ಎಂದು ತಿಳಿದಿಲ್ಲ. ಕೊಡಗಿನಲ್ಲಿ ದಾಳಿ ಮಾಡಿದರು ಎನ್ನುವ ದೃಷ್ಟಿಕೋನವನ್ನು ಮುಂದಿಟ್ಟುಕೊಂಡು ಪುಸ್ತಕ ಬರೆದಿದ್ದಾರೆ ಎಂದು ತಿಳಿದು ಬಂದಿದೆ. ಈ ಹಿಂದೆಯೂ ಟಿಪ್ಪು ಬಗ್ಗೆ ಸಾಕಷ್ಟು ಪುಸ್ತಕಗಳು ಬಂದಿವೆ. ಟಿಪ್ಪು ಕೊಡುಗೆ ಬಗ್ಗೆ ನಾಡಿನ ಜನತೆಗೆ ಗೊತ್ತಿದೆ. ಆದ್ದರಿಂದ ಅಡ್ಡಂಡ ಕಾರ್ಯಪ್ಪ ಪುಸ್ತಕದಲ್ಲಿ ಏನಿದೆ ಎಂದು ನೋಡಿದ ನಂತರ ನಮ್ಮ ಹೋರಾಟ ನಿರ್ಧರಿಸಲಾಗುತ್ತದೆ ಎಂದು ಹೇಳಿದರು.



ತನ್ವೀರ್ ಸೇಠ್

ನ.20ರಂದು ಪ್ರದರ್ಶಿಸಲು ಉದ್ದೇಶಿಸಿರುವ ಟಿಪ್ಪು ನಾಟಕಕ್ಕೆ ತಡೆಯಾಜ್ಞೆ ತರುವುದು ನಿಶ್ಚಿತ. ಜನರಲ್ಲಿ ತಪ್ಪು ಮಾಹಿತಿ ನೀಡಿ, ಕೋಮು ಸೌಹಾರ್ದತೆ ಕದಡಲು ಅಡ್ಡಂಡ ಕಾರ್ಯಪ್ಪ ಮುಂದಾಗಿದ್ದಾರೆ. ರಂಗಾಯಣದಂತಹ ಸಂಸ್ಥೆಯ ನಿರ್ದೇಶಕರಾಗಿ ಅವರ ನಡೆ ಖಂಡನೀಯ. ಈ ಕುರಿತು ನಮ್ಮ ಕಾನೂನು ಹೋರಾಟ ಮುಂದುವರೆಸುತ್ತೇವೆ ಎಂದು ತನ್ವೀರ್ ಸೇಠ್ ಸ್ಪಷ್ಟಪಡಿಸಿದರು.

100 ಅಡಿ ಟಿಪ್ಪು ಪ್ರತಿಮೆ ನಿರ್ಮಾಣ ಖಚಿತ: ಟಿಪ್ಪು ಜಯಂತಿ ಆಚರಣೆಗೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಸರ್ಕಾರವು ಟಿಪ್ಪು ಜಯಂತಿ ಆಚರಣೆಯನ್ನೇ ರದ್ದು ಮಾಡಿದೆ. ಕೆಲವರು ಟಿಪ್ಪು ಸುಲ್ತಾನ್ ದೇಶಭಕ್ತ ಎಂದರೆ, ಮತ್ತೆ ಕೆಲವರು ಮತಾಂಧ ಎಂದು ಟೀಕಿಸುತ್ತಿದ್ದಾರೆ. ಈ ನಡುವೆಯೇ 100 ಅಡಿ ಎತ್ತರದ ಟಿಪ್ಪು ಸುಲ್ತಾನ್ ಪ್ರತಿಮೆ ನಿರ್ಮಾಣ ಮಾಡುವುದು ಖಚಿತ ಎಂದರು.

ಈ ಪ್ರತಿಮೆಯನ್ನು ಮೈಸೂರಲ್ಲಿ ನಿರ್ಮಿಸಬೇಕೋ ಅಥವಾ ಶ್ರೀರಂಗಪಟ್ಟಣದಲ್ಲಿ ನಿರ್ಮಾಣ ಮಾಡಬೇಕೋ ಎಂದು ಮುಂದಿನ ದಿನಗಳಲ್ಲಿ ನಿರ್ಧರಿಸಲಾಗುತ್ತದೆ. ಇಸ್ಲಾಂ ಸಂಪ್ರದಾಯದಲ್ಲಿ ಮೂರ್ತಿ ಸ್ಥಾಪನೆಗೆ ಅವಕಾಶವಿಲ್ಲ. ಆದರೆ, ಟಿಪ್ಪು ವಿಚಾರದಲ್ಲಿ ಬಿಜೆಪಿ ಸರ್ಕಾರ ನಡೆದುಕೊಳ್ಳುತ್ತಿರುವ ರೀತಿ. ಜನರಿಗೆ ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸುವ ಹುನ್ನಾರದಿಂದಾಗಿ ಈಗ ಪ್ರತಿಮೆ ನಿರ್ಮಾಣಕ್ಕೆ ಕೈ ಹಾಕಿದ್ದೇವೆ. ಏಕಾಏಕಿ ಪ್ರತಿಮೆ ನಿರ್ಮಾಣ ಮಾಡುವುದಿಲ್ಲ. ಇಸ್ಲಾಂ ಧರ್ಮದ ಮುಖಂಡರು ಹಾಗೂ ಟಿಪ್ಪು ಸಂದೇಶ ಒಪ್ಪುವ ಇತರೆ ಸಮುದಾಯದ ಮುಖಂಡರೊಂದಿಗೆ ಚರ್ಚಿಸಿ ಪ್ರತಿಮೆ ನಿರ್ಮಾಣದ ಕಾರ್ಯ ಆರಂಭಿಸುತ್ತೇವೆ. ಈ ಪ್ರತಿಮೆ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರವಿಲ್ಲ ಎಂದರು.

ನಕ್ಕರೆ ಅದೇ ಸ್ವರ್ಗ

ನ್ಯಾಯಾಧೀಶರು : (ಕುಡಿದು ಕಾರು ಓಡಿಸಿದ್ದಕ್ಕೆ ಸಾವಿರ ರೂಪಾಯಿ ಜುಲ್ಮಾನೆ ವಿಧಿಸಿ) ಕಾರಿನಲ್ಲಿದ್ದವರು ಎಷ್ಟು ಮಂದಿ?

ಓರ್ವ ಆರೋಪಿ : ನಾವು ಮೂವರು ಸಾರ್, ಮೂವರು ಹಿಂದಿನ ಸೀಟಿನಲ್ಲೇ ಕೂತಿದ್ದೆವು. ಕಾರು ಹೇಗೆ ಮುಂದೆ ಓಡ್ತಿತ್ತು

ಮೈಸೂರು ಮಿತ್ರ

ಭಾನುವಾರ, 13 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಅನುಭವವೇ ಬುದ್ಧಿವಂತಿಕೆ, ಮುಖ್ಯ ಸ್ನೇಹಿತ –ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆದದ್ದೇ ಒಂದು / ಅಂದುಕೊಂಡದ್ದೇ ಒಂದು

ನಿಮ್ಮ ಪತ್ರಗಳು

ಖಾತಾ ವರ್ಗಾವಣೆಯಲ್ಲಿ ವಿಳಂಬ?

ಮಾನ್ಯರೆ,

01.04.2022ರಿಂದ ಮೈಸೂರು ವರ್ತುಲ ರಸ್ತೆಯ ಹೊರಗಿರುವ ಬಡಾವಣೆಗಳ ನಿರ್ವಹಣೆಯನ್ನು ಪಟ್ಟಣ ಪಂಚಾಯಿತಿಯ ವ್ಯಾಪ್ತಿಗೆ ಸೇರಿಸಿ ಸರಕಾರವು ಆದೇಶ ಹೊರಡಿಸಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಿಂದ ಹೊರ ವಲಯದ ಬಡಾವಣೆಗಳನ್ನು ಹೊರಗಿಟ್ಟ ಸರಕಾರ ಪಟ್ಟಣ ಪಂಚಾಯಿತಿಯಲ್ಲಿ ಸ್ವತ್ತಿನ ಖಾತೆಯನ್ನು ಮಾಡಿಸಬೇಕೆಂದೂ ಆದೇಶಿಸಿದ್ದು ಅದರಂತೆ ನಿವೇಶನ, ಮನೆಗಳ ಖಾತೆಯನ್ನು ಪಟ್ಟಣ ಪಂಚಾಯಿತಿಯಲ್ಲಿ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳೊಂದಿಗೆ ಪ್ರತ್ಯೇಕ ಅರ್ಜಿ ಸಲ್ಲಿಸಿ ಖಾತೆ ವರ್ಗಾವಣೆ ಮಾಡಿಸಿಕೊಂಡು ಕಂದಾಯ ನಿಗದಿಯಾದ ನಂತರ, ಕಂದಾಯ ಪಾವತಿ ಮಾಡಬೇಕೆಂದೂ ಸೂಚಿಸಿದೆ.

ಕಂದಾಯ ಸಚಿವರಾದ ಆರ್.ಅಶೋಕ್ ಅವರು ಎರಡು ತಿಂಗಳಲ್ಲಿ ಖಾತೆ ಬದಲಾವಣೆ ಮಾಡಲಾಗುವುದೆಂದೂ ಹೇಳಿದ್ದಾರೆ. ನಾನು ಮೈಸೂರಿನ ಕೇರ್ಗಳ್ಳಿಯಲ್ಲಿರುವ ನ್ಯಾಯಾಂಗ ಬಡಾವಣೆಯ ನನ್ನ ನಿವೇಶನ ಸಂಖ್ಯೆ 131ರ ಖಾತೆಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಬೋಗಾದಿಯ ಪಟ್ಟಣ ಪಂಚಾಯಿತಿಯಲ್ಲಿ ವರ್ಗಾಯಿಸಲು 11.08.2022 ರಲ್ಲಿ ಅರ್ಜಿಯನ್ನು ಕೊಟ್ಟು ಮೂರು ತಿಂಗಳೇ ಆಗಿದೆ. ಬೋಗಾದಿ ಪಟ್ಟಣ ಪಂಚಾಯಿತಿ ಕಚೇರಿಯು ಇನ್ನೂ ನನ್ನ ನಿವೇಶನದ ಖಾತಾ ಬದಲಾವಣೆಯನ್ನು ಮಾಡುತ್ತಲೇ ಇದೆ.! ಅರ್ಜಿಯ ಕಥೆ ಏನಾಯಿತೆಂಬುವುದನ್ನು ಪಟ್ಟಣ ಪಂಚಾಯಿತಿ ಕಚೇರಿಯವರು ಇನ್ನು ತಿಳಿಸಿಲ್ಲ.

ನಾವೇ ಐದು ಕಿಲೋಮೀಟರ್ ಹೋಗಿ ವಿಚಾರಿಸಲಾದೀತೇ? ಖಾತಾ ವರ್ಗಾವಣೆಯಲ್ಲಿನ ವಿಳಂಬದ ಕಾರಣದಿಂದ ನಾವು ಕಂದಾಯ ಕಟ್ಟಲು ಆಗುವ ವಿಳಂಬದಿಂದ ಸರಕಾರಕ್ಕೆ ಬರುವ ಆದಾಯಕ್ಕೂ ವಿಳಂಬವಾಗುವುದಿಲ್ಲವೇ? ಆದುದರಿಂದ ಸಬೂಬು ಹೇಳದೇ ಪಟ್ಟಣ ಪಂಚಾಯಿತಿಯು ಖಾತಾ ವರ್ಗಾವಣೆ ಮಾಡಿ ಕಂದಾಯ ಕಟ್ಟಿಸಿಕೊಳ್ಳಬೇಕೆಂದು ಸರಕಾರವನ್ನು ನಾನು ಒತ್ತಾಯಿಸುತ್ತೇನೆ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು

ಭತ್ತ ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸಿ

ಮಾನ್ಯರೆ,

ರಾಜ್ಯದ ಬಹುತೇಕ ಕಡೆ ಭತ್ತ ಕಟಾವು ಅಂತಿಮ ಹಂತ ತಲುಪಿದ್ದರೂ, ರಾಜ್ಯ ಸರ್ಕಾರ ಖರೀದಿ ಕೇಂದ್ರವನ್ನೂ ಆರಂಭಿಸಿಲ್ಲ, ಬೆಂಬಲ ಬೆಲೆಯನ್ನು ಘೋಷಿಸಿಲ್ಲ. ಹೀಗಾಗಿ ಕಳೆದ ಬಾರಿಯಂತೆ ರೈತರು ಮಿಲ್‌ಗಳಿಗೆ ತಾವು ಬೆಳೆದ ಬಹುಪಾಲು ಭತ್ತ ನೀಡಲು ಆರಂಭಿಸುತ್ತಿದ್ದಾರೆ. ಪ್ರತಿ ಬಾರಿಯೂ ಸರಕಾರ ರೈತರು ಕಟಾವು ಮಾಡಿದ ಭತ್ತ ಮಧ್ಯವರ್ತಿಗಳ ಕೈಸೇರಿದ ಬಳಿಕ ಬೆಂಬಲ ಬೆಲೆ ಘೋಷಿಸುವುದು, ಖರೀದಿ ಕೇಂದ್ರ ಆರಂಭಿಸುವುದು ಮಾಡಿಕೊಂಡು ಬಂದಿದೆ. ಈ ಬಾರಿಯೂ ಇಂತಹುದೆ ಕಥೆ. ಇನ್ನೂ ಖರೀದಿ ಕೇಂದ್ರ ತೆರೆದಿಲ್ಲ. ಬೆಂಬಲ ಬೆಲೆನೂ ಇಲ್ಲ. ಬಹಳ ಕಡೆ ಸಣ್ಣ ಹಿಡುವಳಿದಾರರಿಗೆ ಕಟಾವು ಮಾಡಿದ ಭತ್ತವನ್ನು ಸಂಗ್ರಹಿಸಿ ಇಟ್ಟುಕೊಂಡು ಸರಕಾರ ಖರೀದಿ ಕೇಂದ್ರ ತೆರೆಯುವವರೆಗೂ ಕಾಯಲು ಬೇಕಾದ ವ್ಯವಸ್ಥೆ ಇಲ್ಲದಿರುವುದರಿಂದ ಕಟಾವು ಆಗುತ್ತಿದ್ದಂತೆ ಭತ್ತ ಮಾರಾಟ ಮಾಡುತ್ತಿದ್ದಾರೆ.ಪ್ರತಿ ಬಾರಿಯೂ ಸರಕಾರ ಭತ್ತ ಬೆಳೆಗಾರರನ್ನು ಕಡೆಗಣಿಸುತ್ತಿದೆ. ಸಣ್ಣ ರೈತರು ಭತ್ತವನ್ನು ಸಂಗ್ರಹಿಸಿಟ್ಟುಕೊಳ್ಳುವ ವ್ಯವಸ್ಥೆ ಹೊಂದಿರದ ಕಾರಣ ಮಧ್ಯವರ್ತಿಗಳಿಗೆ ಲಾಭ ಆಗುತ್ತಿದೆ. ಭತ್ತ ಕಟಾವು ಕಾರ್ಯ ಬಹುತೇಕ ಅಂತಿಮ ಘಟ್ಟ ತಲುಪಿದ್ದರೂ ಸರಕಾರ ಇನ್ನೂ ಭತ್ತ ಖರೀದಿ ಕೇಂದ್ರ ತೆರೆಯದೆ ಇರುವುದು, ಬೆಂಬಲ ಬೆಲೆ ಘೋಷಿಸದೆ ಇರುವ ಬಗ್ಗೆ ರೈತಾಪಿ ವಲಯದಲ್ಲಿ ಅಸಮಾಧಾನ ಮೂಡಿಸಿದೆ.ಭತ್ತ ಬೆಳೆಗಾರರಿಗೆ ನೇರ ಪ್ರಯೋಜನ ಸಿಗುವಂತಾಗಲು ಕೂಡಲೆ ಭತ್ತ ಖರೀದಿ ಕೇಂದ್ರ ತೆರೆಯಬೇಕಾಗಿದೆ.ಜನಪ್ರತಿನಿಧಿಗಳು ಭತ್ತ ಬೆಳೆಗಾರರು ಮೂಲೆಗುಂಪು ಆಗದಂತೆ ನೋಡಿಕೊಳ್ಳಬೇಕು.ಭತ್ತ ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸ ನಡೆಯಬೇಕು.

–ವಿಜಯಕುಮಾರ್ ಎಚ್.ಕೆ., ಸಾಮಾಜಿಕ ಕಾರ್ಯಕರ್ತ, ರಾಯಚೂರು

ಮಾದರಿ ಸಚಿವೆ ಶೋಭಾ ಕರಂದ್ಲಾಜೆ

ಮಾನ್ಯರೆ,



ಉಕ್ಕಿನ ಮಹಿಳೆ ಶೋಭಾ ಕರಂದ್ಲಾಜೆ. ನಾನು ಈ ಮಾತನ್ನು ಇಲ್ಲಿ ಯಾಕೆ ಹೇಳುತ್ತಿದ್ದೇನೆಂದರೆ, ಈ ಹಿಂದೆ ಯಡಿಯೂರಪ್ಪನವರ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದು, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಅವರು ದಸರೆಯನ್ನು ನಡೆಸಿದ ರೀತಿ ಅತ್ಯದ್ಭುತವಾಗಿತ್ತು. ದಸರೆ ನೋಡ ಬಯಸುವ ಗ್ರಾಮೀಣ ಭಾಗದ ಜನರಿಗೆ ಮೈಸೂರು ಸುತ್ತಮುತ್ತ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಪ್ಯಾಕೇಜ್ ನಿಗದಿಪಡಿಸಿ ಅವರಿಗೆ ವಾಹನ ಮತ್ತು ಊಟದ ವ್ಯವಸ್ಥೆಯನ್ನು ಮಾಡಿದ್ದರು. ಪ್ರೇಕ್ಷಣೀಯ ಸ್ಥಳ ನೋಡಿ ಬಂದವರಿಗೆ ರಾತ್ರಿ 12 ಆದರೂ ಊಟ ಮತ್ತು ತಂಗುವ ವ್ಯವಸ್ಥೆ ಮಾಡಿದ್ದರು. ಕೊನೆಯ ವಾಹನ ಬರುವವರೆಗೆ ಅಲ್ಲಿಯೇ ಇದ್ದು, ರಾತ್ರಿ ಎಷ್ಟು ಹೊತ್ತಾದರೂ ಪ್ರಯಾಣಿಕರ ಊಟವಾದ ಮೇಲೆಯೇ ನಾಳಿನ ಕಾರ್ಯಕ್ರಮಗಳ ಬಗ್ಗೆ ಅಧಿಕಾರಿಗಳೊಂದಿಗೆ, ಸಮಿತಿ ಸದಸ್ಯರೊಂದಿಗೆ ಚರ್ಚಿಸಿ ಆಮೇಲೆಯೇ ಅವರು ತೆರಳುತ್ತಿದ್ದರು. ದಸರೆ ಮುಗಿಯುವವರೆಗೂ ಇದೊಂದು ನಿತ್ಯ ದಿನಚರಿಯಾಗಿತ್ತು. ಇದೊಂದೇ ಅಲ್ಲ ಅವರ ಅವಧಿಯಲ್ಲಿ ದಸರೆಯನ್ನು ವಿಜೃಂಭಣೆಯಿಂದ ನಡೆಸಿದ್ದರು. ರಸ್ತೆ ರಿಪೇರಿ ಇರಬಹುದು, ಸ್ವಚ್ಛತೆ ಇರಬಹುದು, ದೀಪಾಲಂಕಾರವಿರಬಹುದು, ಸಾಂಸ್ಕೃತಿಕ ಕಾರ್ಯಕ್ರಮಗಳಿರಬಹುದು ಅದ್ಭುತವಾಗಿ ನಡೆದವು. ಅದೂ ಯಾವುದೇ ನ್ಯೂನತೆ ಇಲ್ಲದೆ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾಲಿಗೆ ಚಕ್ರ ಕಟ್ಟಿಕೊಂಡು ನಡೆಸಿದರು. ಊಟ – ತಿಂಡಿ ಯಾವಾಗ ಮಾಡುತ್ತಿದ್ದರು. ಯಾವಾಗ ನಿದ್ರೆ ಮಾಡುತ್ತಿದ್ದರೊ, ದಣಿವರಿಯದೆ ದಸರಾ ನಡೆಸಿ ದಸರಾ ಎಂದರೆ ಹೀಗಿರಬೇಕು ಎಂಬುದನ್ನು ನಾಡಿನ ಜನತೆಗೆ, ಶೋ ಮಾಡುವ ರಾಜಕಾರಣಿಗಳಿಗೆ ತೋರಿಸಿಕೊಟ್ಟರು. ಆ ರೀತಿಯ ದಸರಾ ಮಹಾರಾಜರ ಅವಧಿ ಹೊರತುಪಡಿಸಿದರೆ ಹಿಂದೆ ಯಾವ ಉಸ್ತುವಾರಿ ಸಚಿವರು ನಡೆಸಲಾಗಿರಲಿಲ್ಲ, ಮುಂದೆಯೂ ನಡೆಯುವುದಿಲ್ಲ. ಕೇವಲ ಜಗಮಗಿಸುವ ದೀಪಾಲಂಕಾರ ಇದ್ದರೆ ಸಾಲದು ನೀಟಾಗಿ ಸೂಟು–ಬೂಟು ಹಾಕಿಕೊಂಡು ಕಾರ್ಯಕ್ರಮ ಉದ್ಘಾಟಿಸಿದರೆ ಸಾಲದು, ದಸರಾ ಎಂದರೆ ಅದೊಂದು ಪರಂಪರೆ. ಅದೊಂದು ಸಂಭ್ರಮ. ಅದೊಂದು ಕಾರ್ಯಕ್ರಮಗಳ ಮಹಾಪೂರ. ದಸರೆಗೆ ಏನೆಲ್ಲಾ ಹೊಸ ಹೊಸ ಕಾರ್ಯಕ್ರಮ ನೀಡಬಹುದು ಎಂಬುದನ್ನು ಶೋಭಾ ಕರಂದ್ಲಾಜೆಯವರಿಂದ ಕಲಿಯಬೇಕು. ರಸ್ತೆ ಗುಂಡಿಗಳನ್ನೆ ಮುಚ್ಚಲಾಗದ ದಸರೆ ದೀಪಾಲಂಕಾರ ನೋಡುತ್ತ ರಸ್ತೆ ಗುಂಡಿಗೆ ಬೀಳಬೇಕು. ಈ ಕಾರಣಕ್ಕಾಗಿಯೇ ನಾನವರನ್ನು ಉಕ್ಕಿನ ಮಹಿಳೆ ಎಂದು ಕರೆದಿರುವುದು. ಎಂದೆಂದಿಗೂ ಅವರೊಬ್ಬ ಧೀಮಂತ ಮಹಿಳೆ. ಮೈಸೂರಿನ ಮನೆ ಮನೆ ಮಗಳಾಗಿ ಇಂದಿಗೂ ಮುಂದೆಯೂ ನೆನಪಿನಲ್ಲಿರುತ್ತಾರೆ.

–ಬಿ.ಜಿ.ರಂಗೇಗೌಡ, ಮೈಸೂರು.



ವಿಶ್ವ ಮಧುಮೇಹ ದಿನಾಚರಣೆ

ಅರಿತು ಬಾಳಿದರೆ ಮಧುಮೇಹ 'ಮಧುರ'



ಡಾ.ಆರ್. ರೇಣುಕಾಪ್ರಸಾದ್



ಭಾರತ ಕೇವಲ ಜನಸಂಖ್ಯೆಯಲ್ಲಿ ಮಾತ್ರವಲ್ಲ ಮಧುಮೇಹಿಗಳನ್ನು ಹೊಂದಿರುವಲ್ಲಿಯೂ ಪ್ರಪಂಚದ ಎರಡನೇ ಅತೀ ದೊಡ್ಡ ದೇಶವಾಗಿದೆ. ಪ್ರಪಂಚದ ಒಟ್ಟು ಮಧುಮೇಹಿಗಳ ಸಂಖ್ಯೆ ಒಂದೆಡೆ ನೋಡುವುದಾದರೆ ಅದು ಪ್ರಪಂಚದ ಮೂರನೇ ಅತಿ ದೊಡ್ಡ ದೇಶವಾಗಿಬಿಡುತ್ತದೆ. ದುರದೃಷ್ಟವಶಾತ್..!

ಇತ್ತೀಚಿನ (IDF2021) ಕೆಲವು ಅಂಕಿ ಅಂಶಗಳನ್ನು ನೋಡುವುದಾದರೆ, ಪ್ರಪಂಚದಾದ್ಯಂತ 537 ಮಿಲಿಯನ್‌ಗೂ ಅಧಿಕ ಮಧುಮೇಹಿಗಳು ಇದ್ದಾರೆ. ಈ ಸಂಖ್ಯೆ 2030ರ ವೇಳೆಗೆ 643 ಮಿಲಿಯನ್‌ಗೆ ಹಾಗೂ 2045 ವೇಳೆಗೆ 783 ಮಿಲಿಯನ್‌ಗೆ ಏರಲಿದೆ ಎಂಬುದು ಆತಂಕಕಾರಿ ಸಂಗತಿ. ಅಲ್ಲದೇ ಶೇ.44 ಜನರಿಗೆ ತಮಗೆ ಮಧುಮೇಹವಿರುವ ಅರಿವೇ ಇಲ್ಲ.

541 ಮಿಲಿಯನ್‌ಗೂ ಅಧಿಕ ಜನರು ಮುಂದಿನ ದಿನಗಳಲ್ಲಿ ಟೈಪ್ 2 ಮಧುಮೇಹಿಗಳಾಗುವ ಹಂತದಲ್ಲಿದ್ದಾರೆ. ಶೇ.75ರಷ್ಟು ಮಧುಮೇಹ ಕಡಿಮೆ ಹಾಗೂ ಮಧ್ಯಮ ಆದಾಯವಿರುವ ಕುಟುಂಬಗಳಲ್ಲಿ ಹೆಚ್ಚಾಗಿದೆ. 1.2 ಮಿಲಿಯನ್‌ಗಳಿಗೂ ಅಧಿಕ ಟೈಪ್ 1 ಮಧುಮೇಹಿಗಳಿದ್ದಾರೆ.

ಪ್ರತಿವರ್ಷ ಮಧುಮೇಹದ ಸಂಬಂಧ ನಿರ್ಲಕ್ಷ್ಯದಿಂದಾಗಿ ದೊಡ್ಡ ಪ್ರಮಾಣದಲ್ಲಿ ಸಾವು–ನೋವುಗಳಾಗುತ್ತಿದ್ದು, 2021ರಲ್ಲಿ ಈ ಸಂಖ್ಯೆ 6.7 ಮಿಲಿಯನ್ ಆಗಿದೆ. ಜಾಗತಿಕ ಮಟ್ಟದಲ್ಲಿ ಆರೋಗ್ಯಕ್ಕಾಗಿ ವ್ಯಯಿಸಲಾದ ವೆಚ್ಚದಲ್ಲಿ ಸುಮಾರು 966 ಮಿಲಿಯನ್ (ಶೇ9) ಕೇವಲ ಮಧುಮೇಹದ ಮೇಲಾಗಿದೆ.

ಈ ಅಂಕಿ ಅಂಶಗಳ ಕಿರುನೋಟದೊಡನೆ, ಮಧುಮೇಹದ ಪ್ರಭಾವ ಜನ ಜೀವನದ ಮೇಲೆ ಎಷ್ಟಿದೆ ಎಂಬುದು ಅರಿವಾಗುವುದಲ್ಲವೆ?

ಸರಳವಾಗಿ ಹೇಳುವುದಾದರೆ ಪ್ರತಿ 30 ಸೆಕೆಂಡುಗಳಲ್ಲಿ ಪ್ರಪಂಚದ ಯಾವುದೋ ಭಾಗದಲ್ಲಿ ಒಬ್ಬರಲ್ಲ ಇಬ್ಬರು ಮಧುಮೇಹದಿಂದಾಗಿ ತನ್ನ ಕಾಲನ್ನು ಅಥವಾ ಕಾಲಿನ ಭಾಗವನ್ನು ಕಳೆದುಕೊಳ್ಳುತ್ತಿದ್ದಾರೆ. ಶೇ.50 ಡಯಾಲಿಸಿಸ್‌ಗೆ ಒಳಪಡುತ್ತಿರುವವರು ಮಧುಮೇಹಿಗಳೇ ಆಗಿದ್ದಾರೆ. ಪ್ರಪಂಚದಾದ್ಯಂತ ದಿನವೊಂದಕ್ಕೆ 3000ಕ್ಕೂ ಅಧಿಕ ಮಧುಮೇಹಿ ಕಣ್ಣಿನ ತೊಂದರೆಗೆ ಒಳಪಟ್ಟಿದ್ದಾರೆ. (ಡಯಾಬಿಟಿಕ್ ರೆಟಿನೊಪತಿ–ಮಧುಮೇಹಿಗಳಲ್ಲುಂಟಾಗುವ ತಡೆಗಟ್ಟಬಹುದಾದ ಕುರುಡುತನ) ಇನ್ನೂ ನಗರದ ಯಾವುದೇ ಆಸ್ಪತ್ರೆಯಲಿ ಚಿಕಿತ್ಸೆ ಪಡೆಯುತ್ತಿರುವ ಶೇ.50ಕ್ಕಿಂತಲೂ ಹೆಚ್ಚಿನ ಹೃದಯಾಘಾತವುಳ್ಳವರು ಮಧುಮೇಹಿಗಳೇ. ಈ ಅಂಕಿ ಅಂಶಗಳೆಲ್ಲವು ಎಚ್ಚರಿಕೆಯ ಗಂಟೆಯಾಗಲೆಂದೇ ಹೊರತು, ಯಾರನ್ನೂ ಹೆದರಿಸುವುದಕ್ಕಾಗಿ ಅಲ್ಲ.

ಮಧುಮೇಹವೆಂಬುದು – ದಿನ ಕಳೆದಂತೆ ಪ್ರತಿ ಕುಟುಂಬದ ಸಮಸ್ಯೆಗಳಾಗತೊಡಗಿದೆ. ಕೇವಲ ದೈಹಿಕವಾಗಿ ಅಲ್ಲದೇ ಮಾನಸಿಕವಾಗಿ, ಆರ್ಥಿಕವಾಗಿ ನಮ್ಮ ಜೀವನದ ಮೇಲೆ ಪ್ರಭಾವ ಬೀರುತ್ತಿದೆ. ಈ ನಿಟ್ಟಿನಲ್ಲಿ ಇದರ ನಿಯಂತ್ರಣ ನಮ್ಮೆಲ್ಲರ ಪ್ರಯತ್ನವಾಗಬೇಕಿದೆ. ಕಳೆದ ಹತ್ತು ವರ್ಷಗಳಿಂದ ಮಧುಮೇಹಿಗಳನ್ನು ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಚಿಕಿತ್ಸೆ ನೀಡುತ್ತ ಬಂದಿದ್ದೇನೆ. ನನ್ನ ಈ ಸೀಮಿತ ಅನುಭವದಲ್ಲಿ ಹೇಳುವುದಾದರೆ, ಇಂದಿನ ಈ ಮಧುಮೇಹಿಗಳ ಸಂಖ್ಯೆ ಏರಿಕೆಗೆ ಬಹುಮುಖ್ಯ ಕಾರಣವೆನಿಸುತ್ತಿರುವುದು 'ಮಧುಮೇಹದ ಬಗ್ಗೆ ಸರಿಯಾದ ಅರಿವಿಲ್ಲದಿರುವುದು' ಹಾಗೂ 'ಅರಿವಿದ್ದರೂ ಕೂಡ ತೋರುವ ತಾತ್ಸಾರ ಮನೋಭಾವ'.

ಯಾವಾಗ ತಪಾಸಣೆಗೆ ಒಳಪಡಬೇಕಿದೆ

- **ತಂದೆ ತಾಯಿಯರಿಗೆ ಮಧುಮೇಹವಿದ್ದಲ್ಲಿ 30–35 ವಯಸ್ಸಾಗುತ್ತಿದ್ದಂತೆ ಒಮ್ಮೆಯಾದರೂ ಮಧುಮೇಹದ ತಪಾಸಣೆಗೆ ಒಳಪಡುವುದು ಒಳ್ಳೆಯದು.**
- **ಯಾರಲ್ಲಿ ರಕ್ತದೊತ್ತಡ, ಹೃದ್ರೋಗ ಹಾಗೂ ಅತಿಯಾದ ಕೊಬ್ಬಿನಂಶ ಇರುವುದೋ ಅವರಿಗೆ ಮಧುಮೇಹದ ಪರೀಕ್ಷೆ ಕಡ್ಡಾಯ.**
- **ವ್ಯಾಯಾಮ ರಹಿತ ಜೀವನ, ಅನಾರೋಗ್ಯಕರವಾದ ಆಹಾರ ಸೇವನೆ, ದೀರ್ಘ ಕಾಲ ಹೆಚ್ಚಿನ ಮಾನಸಿಕ ಒತ್ತಡವಿದ್ದಲ್ಲಿ ದಯವಿಟ್ಟು ಒಮ್ಮೆ ಪರೀಕ್ಷೆಗೆ ಒಳಪಡುವುದು ಉತ್ತಮ.**
- **ಮಹಿಳೆಯರಲ್ಲಿ ಪಾಲಿಸಿಸ್ಟಿಕ್ ಓವೆರಿಯನ್ ಸಿಂಡ್ರೋಮ್ (PCOS) ಇದ್ದಲ್ಲಿ ಇನ್ಸುಲಿನ್ ಪ್ರತಿರೋಧ (Insulin Resistance) ಹೆಚ್ಚಿರುತ್ತದೆ. ಹಾಗಾಗಿ ತಪಾಸಣೆ ಅಗತ್ಯ.**
- **ಮಧುಮೇಹದ ಪೂರ್ವ ಹಂತ (Prediabetes) ಇದ್ದಲ್ಲಿ ಆಗಾಗ್ಗೆ ಪರೀಕ್ಷಿಸಿಕೊಳ್ಳಿ.**
- **ಗರ್ಭಾವಸ್ಥೆಯಲ್ಲಿನ ಮಧುಮೇಹ ಹೆರಿಗೆಯ ನಂತರ ಮುಕ್ತವಾದರೂ ಕೂಡ ಮರಳಿ ಬರುವ ಸಾಧ್ಯತೆ ಹೆಚ್ಚು. ಪರೀಕ್ಷಿಸಿಕೊಳ್ಳಿ.**
- **ಅತಿಯಾದ ಬೊಜ್ಜುತನ ಇತ್ತೀಚಿನ ದಿನಗಳಲ್ಲಿ ಹೆಚ್ಚು ಮಧುಮೇಹಕ್ಕೆ ಕಾರಣವಾಗುತ್ತಿದ್ದು ಅವರಲ್ಲೂ ಆಗಾಗ್ಗೆ ಪರೀಕ್ಷೆ ಅಗತ್ಯ.**

ಇನ್ನು ಮಧುಮೇಹದ ಲಕ್ಷಣಗಳಲ್ಲಿ, ಅತಿಯಾದ ದಾಹ, ಹಸಿವು ಹಾಗೂ ಮೂತ್ರ ವಿಸರ್ಜನೆ, ತೂಕ ಕಮ್ಮಿಯಾಗುವುದು, ಗಾಯಗಳು ವಾಸಿಯಾಗದಿರುವುದು, ಶೀಲಿಂಧ್ರ ಸೋಂಕು ಇತ್ಯಾದಿಗಳಿದ್ದಲ್ಲಿ ಕೂಡಲೇ ವೈದ್ಯರನ್ನು ಸಂಪರ್ಕಿಸಿ.

ಎಲ್ಲಕ್ಕಿಂತಲೂ ಮೊದಲು ತಜ್ಞ ವೈದರ ಸಲಹೆ ಪಡೆದು ನಂತರ ಪರೀಕ್ಷೆಗೆ ಒಳಪಡುವುದು ಉತ್ತಮ.

ಈ ನಿಟ್ಟಿನಲ್ಲಿ ಅಂತರರಾಷ್ಟ್ರಿಯ ಮಧುಮೇಹ ಒಕ್ಕೂಟ (IDF) ವು ಪ್ರತಿವರ್ಷ ಒಂದು ಧ್ಯೇಯ ವಾಕ್ಯದೊಡನೆ ನವೆಂಬರ್ 14ರಂದು ಪ್ರಪಂಚದಾದ್ಯಂತ **ವಿಶ್ವ ಮಧುಮೇಹ ದಿನಾಚರಣೆ**ಯನ್ನು ಆಚರಿಸುತ್ತಾ ಬಂದಿದೆ. ನವೆಂಬರ್ 14 ಮನುಕುಲಕ್ಕೆ ವೈದ್ಯಲೋಕದ ಅಚ್ಚರಿಯ ಆವಿಷ್ಕಾರವೆನ್ನಬಹುದಾದ ಇನ್ಸುಲಿನ್‌ನನ್ನು ಕಂಡುಹಿಡಿದ ಕೆನಡಿಯನ್ ವೈದ್ಯ ವಿಜ್ಞಾನಿ ಡಾ॥ ಫ್ರೆಡರಿಕ್ ಬ್ಯಾಂಟಿಗ್ ಹುಟ್ಟಿದ ದಿನ. ತನ್ನ ಸಹೋದ್ಯೋಗಿ ಬೆಸ್ಟ್‌ನೊಡಗೂಡಿ ವರ್ಷಗಟ್ಟಲೆ ಪ್ರಯೋಗ ನಡೆಸಿ, 1922 ಜನವರಿ 23ರಂದು ಮೊಟ್ಟ ಮೊದಲ ಬಾರಿಗೆ ಟೈಪ್– 1 ಮಧುಮೇಹದಿಂದ ಬಳಲುತ್ತಿದ್ದ 14 ವರ್ಷದ ಲಿಯೋನಾರ್ಡ್ ಥಾಮಸ್ ಎಂಬುವವನಿಗೆ ನೀಡಲಾಯಿತು. ಇವರ ಈ ಅತ್ಯದ್ಭುತ ಆವಿಷ್ಕಾರಕ್ಕಾಗಿ ಆ ಮಹನೀಯರು 1923 ರಲ್ಲಿ ನೊಬೆಲ್ ಪಾರಿತೋಷಕವನ್ನು ಪಡೆದರು.

ಮಧುಮೇಹ ಕ್ಷೇತ್ರದಲ್ಲಿ ಇವರು ನೀಡಿದ ಸೇವೆಗಾಗಿ ಐಡಿಎಫ್ ಪ್ರತಿ ವರ್ಷ ನ. 14ರಂದು ವಿಶ್ವ ಮಧುಮೇಹ ದಿನಾಚರಣೆ ಆಚರಿಸುತ್ತಿದ್ದು ಈ ವರ್ಷದ ಧ್ಯೇಯವಾಕ್ಯ – Diabetes : Education to protect Tomorrow ಎಂಬುದಾಗಿದೆ. ಅಲ್ಲದೇ ಮಧುಮೇಹದ ಅರಿವು ಎಲ್ಲರಿಗೂ ಇರಬೇಕೆಂಬುದು ಐಡಿಎಫ್ (IDF)ನ ಆಶಯವಾಗಿದೆ ಇದರ ಅಂಗವಾಗಿ ಮೈಸೂರಿನಲ್ಲಿ ನಮ್ಮ ಸಂಸ್ಥೆ ನ್ಯೂ ಡಯಾಕೇರ್ ಪ್ರತಿವರ್ಷ ಮಧುಮೇಹ ಅರಿವಿಗಾಗಿ "ನಮ್ಮ ನಡಿಗೆ ಮಧುಮೇಹ"ದ ತಡೆಗೆ ಘೋಷದೊಡನೆ, ವಾಕಾಥಾನ್(ಕಾಲ್ನಡಿಗೆ) ಹಮ್ಮಿಕೊಂಡು, ಜನರಲ್ಲಿ ಉಚಿತ ಮಧುಮೇಹ ಶಿಬಿರಗಳನ್ನು ಆಯೋಜಿಸಿ ಜನರಲ್ಲಿ ಅರಿವು ಮೂಡಿಸುತ್ತಾ ಬಂದಿದೆ.

■ **ಡಾ.ಆರ್. ರೇಣುಕಾಪ್ರಸಾದ್,**
ಮೊ. 7848067887

ಶ್ರೀಸಾಮಾನ್ಯನ ಸಕ್ಕರೆ ವೈದ್ಯರು



ಡಾ.ವಿ.ಲಕ್ಷ್ಮೀನಾರಾಯಣ್.

ಆಧುನಿಕ ಕಾಲದಲ್ಲಿ ಮನುಷ್ಯನ ಸದ್ದಿಲ್ಲದೆ ಹಿಂಡಿ ಹಿಪ್ಪೆ ಮಾಡುವ ಸಕ್ಕರೆ ಕಾಯಿಲೆ ಅರ್ಥಾತ್ ಮಧುಮೇಹದ ಬಗ್ಗೆ ಜನರಲ್ಲಿ ಆತಂಕವಿದೆ. ಇದು ಒಮ್ಮೆ ವಕ್ಕರಿಸಿದರೆ ಇನ್ನಿತರೆ ಜಾಡ್ಯಗಳಿಗೆ ಪ್ರೇರಣೆಯಾಗುತ್ತದೆ ಎಂಬುದೇ ಅದಕ್ಕೆ ಕಾರಣ.

ಒಮ್ಮೆ ಸಕ್ಕರೆ ಕಾಯಿಲೆ ಬಂದರೆ ಮುಗಿಯಿತು, ಅದು ನರಕದರ್ಶನ ಮಾಡಿಸಲಿದೆ ಎಂಬುದು ಕೆಲವರ ತಪ್ಪು ಕಲ್ಪನೆ. ಹಲವರು ಈ ಭಾವನೆಯಿಂದ ನರಳುತ್ತಾರೆ. ಆದರೆ ಸಕ್ಕರೆ ಕಾಯಿಲೆ ಒಂದು ಸಾಮಾನ್ಯ ಜಾಡ್ಯ. ಇನ್ನಿತರೆ ರೋಗಗಳ ಬಗ್ಗೆ ವಹಿಸುವಂತಹ ಕನಿಷ್ಠ ಎಚ್ಚರಿಕಾ ವಿಧಾನದ ಮೂಲಕ ಅದನ್ನು ನಿಯಂತ್ರಿಸಿಕೊಂಡು ಸಹಜ ಜೀವನ ನಡೆಸಬಹುದು ಎಂಬುದು ತಜ್ಞ ವೈದ್ಯರ ಅಭಯ.

ಅದರಲ್ಲೂ ಆಹಾರ ವಿಧಾನ, ಜೀವನ ಶೈಲಿ ಮತ್ತು ಮಾನಸಿಕ ಸದ್ಯಢತೆಯಿಂದ ಮಧುಮೇಹ ಅರ್ಥಾತ್ ಸಕ್ಕರೆ ಕಾಯಿಲೆಯನ್ನು ಸರಳವಾಗಿ ನಿರ್ವಹಣೆ ಮಾಡಬಹುದು. ಚಿಂತೆ ಬೇಡ ಎಂದು ಹೇಳುವುದರೊಂದಿಗೆ ಅನಿವಾರ್ಯವಾದರಷ್ಟೇ ಔಷಧಿ ಮೊರೆ ಹೋಗುವಂತೆಯೂ ಸಲಹೆ ನೀಡುತ್ತಾರೆ. ಸಕ್ಕರೆ ಕಾಯಿಲೆಯ ವಿಚಾರದಲ್ಲಿ ಸಂಪೂರ್ಣ ಪರಿಣತಿ ಹೊಂದಿದಂತಹ ವೈದ್ಯರಲ್ಲಿ ಮೈಸೂರಿನ ಡಾ. ವಿ. ಲಕ್ಷ್ಮೀನಾರಾಯಣ್ ಖ್ಯಾತನಾಮರು. ಇವರು ರಾಷ್ಟ್ರಕವಿ ಕುವೆಂಪು ಅವರ ಆಪ್ತ ವೈದ್ಯರಾಗಿದ್ದರು. ಸುದೀರ್ಘ ಕಾಲ ಕುವೆಂಪು ಅವರ ಆರೋಗ್ಯದ ಹೊಣೆ ಹೊತ್ತು, ವಿಶ್ವಾಸಾರ್ಹ ಸೇವೆ ಸಲ್ಲಿಸಿದ್ದರು.

ಇವರು 1970 ರಲ್ಲಿ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ವೈದ್ಯಶಾಸ್ತ್ರ ಉಪನ್ಯಾಸಕರಾಗಿ ವೃತ್ತಿ ಪ್ರಾರಂಭಿಸಿ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಕೋಲಾರ ಜಿಲ್ಲೆಯಲ್ಲಿ ಸಾಂಕ್ರಾಮಿಕ ವ್ಯಾಧಿಗಳು ಬಾಧಿಸತೊಡಗಿದಾಗ ಉಪನ್ಯಾಸಕ ಹುದ್ದೆಗೆ ರಾಜೀನಾಮೆ ನೀಡಿ, ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಅಸಿಸ್ಟೆಂಟ್ ಸರ್ಜನ್ ಆಗಿ, ಗ್ರಾಮೀಣ ಪ್ರದೇಶದಲ್ಲಿ ಕಾಲ್ನಡಿಗೆಯಲ್ಲಿ ಅಲೆದು, ಜನರಿಗೆ ಆರೋಗ್ಯ ಸೇವೆ ಕಲ್ಪಿಸಿದ್ದರು.

ತದನಂತರ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಒಟ್ಟು 20 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಸ್ವಯಂ ನಿವೃತ್ತಿ ಪಡೆದ ನಂತರ ಸ್ವತಂತ್ರವಾಗಿ ವೃತ್ತಿ ನಿರತರಾಗಿದ್ದಾರೆ.

ರಾಷ್ಟ್ರಕವಿ ಕುವೆಂಪು ಅವರಿಗೆ ವೈದ್ಯಕೀಯ ಸೇವೆ: ಡಾ.ವಿ.ಲಕ್ಷ್ಮೀನಾರಾಯಣ್, ಕುವೆಂಪು ಅವರ ಆಪ್ತ ವೈದ್ಯರಾಗಿದ್ದರು. ಅವರ ಕುಟುಂಬದ ಕೋರಿಕೆಯಂತೆ ಕುವೆಂಪು ಅವರ ಜೀವಿತಾವಧಿಯ ಅಂತಿಮ ಹತ್ತು ವರ್ಷಗಳ ಕಾಲ ಅವರ ಆರೋಗ್ಯವನ್ನು ಅತ್ಯಂತ ಜತನದಿಂದ ನೋಡಿಕೊಳ್ಳುತ್ತಿದ್ದರು. ಅವರ ವೃತ್ತಿ ಜೀವನದಲ್ಲಿ ಇದೊಂದು ವಿಶೇಷ ಭಾಗವಾಗಿತ್ತು. ಇದನ್ನು ಅವರೂ ಅತ್ಯಂತ ಧನ್ಯತಾಭಾವದಿಂದ ಸ್ಮರಿಸಿಕೊಳ್ಳುತ್ತಾರೆ.

ಎನ್‌ಇಪಿ 2020: ರಾಜ್ಯ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿ–2020, ಆಧರಿಸಿ ಡಾ.ವಿ.ಲಕ್ಷ್ಮೀನಾರಾಯಣ್ ಪಠ್ಯಕ್ರಮಕ್ಕೆ ಪೂರಕವಾಗಿ Health and well-being ವಿಷಯದ ಪೊಸಿಷನ್ ಪೇಪರ್ ರಚನಾ ಸಮಿತಿ ಸದಸ್ಯರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದರು. ಇವರ ಸುತ್ಯಾರ್ಹ ಕಾರ್ಯಕ್ಕೆ ಪ್ರಶಂಸಾ ಪತ್ರವನ್ನು ನೀಡಿ ಸರ್ಕಾರ ಗೌರವಿಸಿದೆ.

ಮಧುಮೇಹ ನಿರ್ವಹಣೆಯಲ್ಲಿ ಪರಿಣಿತಿ: ಮಧುಮೇಹ ನಿರ್ವಹಣೆಯಲ್ಲಿ ಶ್ರೀಯುತರು ಪರಿಣಿತರು. ಇವರ ಸಂಶೋಧನೆಗಳು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮನ್ನಣೆ ಪಡೆದಿವೆ. ಹಲವು ಅಮೂಲ್ಯ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅಲ್ಲದೆ ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಮಧುಮೇಹ ಕುರಿತ ನಾಲ್ಕು ಸೇರಿದಂತೆ ಆರು ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ಇವರ The world's invisible enemy diabetes' ಕೃತಿಯ ಬಗೆಗೆ ಪ್ರಧಾನಿ ಮೋದಿ ಅವರು ಮೆಚ್ಚುಗೆ ವ್ಯಕ್ತಪಡಿಸಿ, ಪತ್ರ ಮುಖೇನಾ ಅಭಿನಂದಿಸಿದ್ದಾರೆ.

ಶ್ರೀ ಸಾಮಾನ್ಯನ ವೈದ್ಯ: ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಹೃದಯ ಸಂಬಂಧಿ ಕಾಯಿಲೆಗಳ ಬಗೆಗೆ ಆಕಾಶವಾಣಿ, ದೂರದರ್ಶನ ಹಾಗೂ ಪತ್ರಿಕಾ ಮಧ್ಯಮಗಳ ಮೂಲಕ ಜನರಲ್ಲಿ ಸಾಕಷ್ಟು ಜಾಗೃತಿ ಮೂಡಿಸುತ್ತಾ, 'ಶ್ರೀ ಸಾಮಾನ್ಯನ ವೈದ್ಯ' 'ಶ್ರೀಸಾಮಾನ್ಯನ ಸಕ್ಕರೆ ವೈದ್ಯ' ಎಂಬ ಅನ್ವರ್ಥ ನಾಮಕ್ಕೂ ಪಾತ್ರರಾಗಿದ್ದಾರೆ.

ಫ್ರಂಟ್‌ಲೈನ್ ಕೋವಿಡ್ ವಾರಿಯರ್: 2019 ರಿಂದ 2021 ರ ಎರಡು ವರ್ಷಗಳ ಕಾಲ ಕಾಡಿದ ಭಯಾನಕ ಕೊರೊನಾ ವೈರಸ್ ಸೋಂಕಿನ ಸಂದರ್ಭದಲ್ಲಿ ತಮ್ಮ ಸಿಬ್ಬಂದಿಯ ಒಳಗೊಂಡಂತೆ ಸೇವಾ ಕೇಂದ್ರವನ್ನು ತೆರೆದು, ನಿರಂತರ ಸೇವೆ ಮಾಡಿಕೊಂಡು ಬಂದಿದ್ದಾರೆ ಡಾ.ವಿ.ಲಕ್ಷ್ಮೀನಾರಾಯಣ್.

ಇವರ ವೈದ್ಯಕೀಯ ಸೇವೆ ಮತ್ತು ತಜ್ಞತೆಗಾಗಿ ಹಲವು ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕುವೆಂಪು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್, ಡಾ. ಬಿ.ಆರ್. ಅಂಬೇಡ್ಕರ್ ರಾಷ್ಟ್ರೀಯ ಪುರಸ್ಕಾರ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ವರ್ಧಂತಿ ಪುರಸ್ಕಾರ, ಬಸವರತ್ನ ಪುರಸ್ಕಾರ ಹೀಗೆ ನಾನಾ ಪ್ರಶಸ್ತಿಗಳು ಸಂದಿವೆ.

ಇವರ ಅಭಿಮಾನಿ ಬಳಗ, ಗೌರವ ಗ್ರಂಥವೊಂದನ್ನು ಹೊರತರಲು ನಿರ್ಧರಿಸಿದೆ. ನಿಮಿತ್ತ, ಇವರನ್ನು ಬಲ್ಲವರು ಐದು ಪುಟಗಳ ಮಿತಿಯ ಲೇಖನವನ್ನು ಇದೇ ನವೆಂಬರ್ 25ರ ಒಳಗೆ ಡಾ.ನೀಲಗಿರಿ ತಳವಾರ್, ನಂ. 219, ಗುರುಕೃಪಾ, 21ನೇ ಮುಖ್ಯ ರಸ್ತೆ, ಬಿ ಬ್ಲಾಕ್, 3ನೇ ಹಂತ, ವಿಜಯನಗರ, ಮೈಸೂರು–570 017 ಇಮೇಲ್ ವಿಳಾಸ : nmtalawar@gmail.com ಮೊಬೈಲ್ ಸಂಖ್ಯೆ : 8971522330, 9480478162 ವಿಳಾಸಕ್ಕೆ ಕಳುಹಿಸಲು ಕೋರಿದೆ.

ಕ್ರಿಕೆಟ್ ಜಗತ್ತಿನಲ್ಲಿ ಏನೇ ಬದಲಾವಣೆ ಆದರೂ ಟೆಸ್ಟ್ ಕ್ರಿಕೆಟ್‌ಗೆ ಅದರದ್ದೇ ಆದ ಮಹತ್ವವಿದೆ

● ಹಿರಿಯ ಕ್ರಿಕೆಟ್ ದಿಗ್ಗಜ ಜಿ.ಆರ್.ವಿಶ್ವನಾಥ್ ಅಭಿಮತ ● ತಮ್ಮ ಆತ್ಮಚರಿತ್ರೆ 'ರಿಸ್ಟ್ ಅಷ್ಯೂರ್ಡ್' ಕುರಿತಾಗಿ ಹಿರಿಯ ಪತ್ರಕರ್ತ ಕೃಷ್ಣ ಪ್ರಸಾದ್‌ರೊಂದಿಗೆ ಸಂವಾದ
● ಪಿಚ್ ಬಗ್ಗೆ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ; ಬಾಲ್ ಗಮನಿಸಿ ರನ್ ಗಳಿಕೆಯತ್ತ ಗಮನವಿರಬೇಕು ● ಕ್ರಿಕೆಟ್ ಆಟಗಾರನಿಗೆ ದೈಹಿಕ ಸಾಮರ್ಥ್ಯಕ್ಕಿಂತ ಕೌಶಲ್ಯತೆ ಮುಖ್ಯ



ಮೈಸೂರು, ನ.12(ಎಂಕೆ)– ಕ್ರಿಕೆಟ್ ಇತಿಹಾಸದಲ್ಲಿ ಟೆಸ್ಟ್ ಕ್ರಿಕೆಟ್ ಎಂದೆಂದಿಗೂ ಶಾಶ್ವತ. ಟಿ20, ಟಿ10 ಎಂದೆಲ್ಲಾ ಎಷ್ಟೇ ಬದಲಾವಣೆಗಳಾದರೂ ಟೆಸ್ಟ್ ಕ್ರಿಕೆಟ್‌ಗೆ ತನ್ನದೇ ಪ್ರಾಮುಖ್ಯತೆ ಇದೆ ಎಂದು ಹಿರಿಯ ಕ್ರಿಕೆಟ್ ದಿಗ್ಗಜ ಜಿ.ಆರ್.ವಿಶ್ವನಾಥ್(ಗುಂಡಪ್ಪ ವಿಶ್ವನಾಥ್) ಅಭಿಪ್ರಾಯಪಟ್ಟರು. ಮೈಸೂರಿನ ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್(ಮೈಸೂರು ಸ್ಪೋರ್ಟ್ಸ್ ಕ್ಲಬ್)ನಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ತಮ್ಮ ಆತ್ಮಚರಿತ್ರೆಯಾದ 'ರಿಸ್ಟ್ ಅಷ್ಯೂರ್ಡ್'(Wrist Assured)' ಕುರಿತು ಹಿರಿಯ ಪತ್ರಕರ್ತ ಕೃಷ್ಣ ಪ್ರಸಾದ್ ಅವರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಟೆಸ್ಟ್ ಕ್ರಿಕೆಟ್ ಕುರಿತು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಐಪಿಎಲ್‌ನಂತಹ ಚುಟುಕು ಕ್ರಿಕೆಟ್ ಹೆಚ್ಚಾಗುತ್ತಿದೆ. ಕ್ರಿಕೆಟ್ ಅಭಿಮಾನಿಗಳು ಕೂಡ ಚುಟುಕು ಕ್ರಿಕೆಟ್ ಅನ್ನು ನೋಡಿ ಆನಂದಿಸುತ್ತಿದ್ದಾರೆ. ಆದರೆ, ಕ್ರಿಕೆಟ್ ಆಟಗಾರನ ನಿಜವಾದ ಕಲಿಕೆ ಇರುವುದು ಟೆಸ್ಟ್ ಕ್ರಿಕೆಟ್‌ನಲ್ಲಿ. ಟೆಸ್ಟ್ ಕ್ರಿಕೆಟ್‌ನಲ್ಲಿ ಹೆಚ್ಚಿನ ಸಾಧನೆ ಮಾಡಿದವರೇ ಓಡಿಐ ಪಂದ್ಯಗಳಲ್ಲಿಯೂ ಉತ್ತಮ ಪ್ರದರ್ಶನ ನೀಡುತ್ತಾ ಬಂದಿದ್ದಾರೆ. ಹಾಗೆಯೇ ನಾನು ಕೂಡ ಮೊದಲು ಟೆಸ್ಟ್ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ್ದು ಎಂದರು. 1969ರ ನ.20ರಂದು ಉತ್ತರ ಪ್ರದೇಶ ಕಾನ್ಪುರದ ಗ್ರೀನ್‌ಪಾರ್ಕ್ ಮೈದಾನದಲ್ಲಿ ಆಸ್ಟ್ರೇಲಿಯಾ ವಿರುದ್ಧ ನಡೆದ ಟೆಸ್ಟ್ ಪಂದ್ಯಾವಳಿಯಲ್ಲಿ ನನ್ನ ಮೊದಲ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಶೂನ್ಯಕ್ಕೆ ಔಟಾಗಿದ್ದೆ. ನಂತರ ಎರಡನೇ ಇನ್ನಿಂಗ್ಸ್‌ನಲ್ಲಿ 354 ಎಸೆತಗಳನ್ನು ಎದುರಿಸಿ 25 ಬೌಂಡರಿ ಸಹಿತ 137ರನ್ ಗಳಿಸುವ ಮೂಲಕ ತಂಡವನ್ನು ಸೋಲಿನಿಂದ ಪಾರು ಮಾಡುವ ಜವಾಬ್ದಾರಿ ನಿರ್ವಹಿಸಿದ್ದೆ. ಶೂನ್ಯಕ್ಕೆ ಔಟಾದಾಗ ಬೇಸರಗೊಳ್ಳದೆ ಬೆನ್ನು ತಟ್ಟಿ ಸಂತೈಸಿದ್ದ ಅಂದಿನ ತಂಡದ ನಾಯಕ ಮನ್ಸೂರ್ ಅಲಿಖಾನ್ ಪಟೌಡಿ ನನ್ನ ನೆಚ್ಚಿನ ನಾಯಕರಾಗಿದ್ದಾರೆ ಎಂದು ಸ್ಮರಿಸಿದರು. ಭಾರತ ತಂಡದಲ್ಲಿ ನನ್ನನ್ನು ಗುರ್ತಿಸಿ ಆಟವಾಡಲು ಅವಕಾಶ ಮಾಡಿಕೊಟ್ಟ ಪಟೌಡಿಯವರು ಅತ್ಯುತ್ತಮ ನಾಯಕತ್ವದ ಗುಣಗಳನ್ನು ಹೊಂದಿದ್ದರು. ತಂಡವನ್ನು ಒಗ್ಗಟ್ಟಿನಿಂದ ಇರುವಂತೆ ನೋಡುಕೊಳ್ಳುತ್ತಿದ್ದರಲ್ಲದೆ ಸೂಕ್ತ ಸಮಯದಲ್ಲಿ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು. ಅಲ್ಲಿಂದ ಸತತ 14 ವರ್ಷ 91 ಟೆಸ್ಟ್‌ಗಳ ಪಂದ್ಯಗಳಲ್ಲಿ ಆಟವಾಡಿದ್ದೇನೆ. ನನ್ನ ಬ್ಯಾಟ್‌ನಿಂದ 14 ಶತಕಗಳು ಬಂದಿವೆ ಎಂದು ನೆನೆದರು.

ಬಾಲ್ ನೋಡುವುದು ಮುಖ್ಯ: ಕ್ರಿಕೆಟ್‌ನಲ್ಲಿ ಈಗ ಪಿಚ್ ಬಗ್ಗೆ ತುಂಬಾ ಚರ್ಚೆಯಾಗುತ್ತದೆ. ಪಿಚ್ ಹೇಗಿದ್ದರೂ ನಾವು ಬ್ಯಾಟ್ ಬೀಸುವುದರ ಮೇಲೆ ರನ್‌ಗಳಿಕೆ ನಿಂತಿರುತ್ತದೆ. ನಾನು ಎಂದಿಗೂ ಪಿಚ್ ಬಗ್ಗೆ ತಲೆ ಕೆಡಿಸಿಕೊಂಡವನಲ್ಲ. ಬಾಲ್ ನೋಡುತ್ತಾ ಬಾಲ್ ಬರುವುದನ್ನು ಗಮನಿಸಿ ಹೊಡೆಯುತ್ತಿದ್ದೆ. ವೇಗದ ಬಾಲ್‌ಗಳನ್ನು ಎದುರಿಸಲು ಟೆನ್ನಿಸ್ ಬಾಲ್‌ನಲ್ಲಿ ಅಭ್ಯಾಸ ಮಾಡುತ್ತಿದ್ದೆ. ಇದರಿಂದ ಶಾಟ್ ಪಿಚ್ ಬಾಲ್‌ಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುತ್ತಿತ್ತು ಎಂದರು. ಮೊದಲು ಬೌಲರ್‌ಗೆ ವಿಕೆಟ್ ಕಾಣುವಂತೆ ನಿಂತು ಬ್ಯಾಟಿಂಗ್ ಮಾಡಬೇಕಾಗಿತ್ತು. ವೇಗದ ಬಾಲ್‌ಗಳನ್ನು ಎದುರಿಸುವುದೇ ಕಷ್ಟವಾಗಿತ್ತು. ಬಾಲ್ ಮೇಲೆ ಸ್ವಲ್ಪ ಗಮನ ಕಳೆದುಕೊಂಡರೂ ಬಾಲ್ ವಿಕೆಟ್ ಮೇಲೆ ಹಾರುತ್ತಿತ್ತು. ಆದರೀಗ ಕ್ರಿಕೆಟ್‌ನಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಸಂಪೂರ್ಣವಾಗಿ ವಿಕೆಟ್ ಕವರ್ ಮಾಡಿಕೊಂಡೇ ಬ್ಯಾಟಿಂಗ್ ಮಾಡಲು ಅವಕಾಶ ನೀಡಲಾಗಿದೆ. ಇದರಿಂದ ಬ್ಯಾಟ್ಸ್‌ಮನ್ ಅಂದುಕೊಂಡ ಕಡೆಗೆ ಬೌಂಡರಿ ಬಾರಿಸಲು ಸಹಾಯವಾಗುತ್ತದೆ ಎಂದು ತಿಳಿಸಿದರು.

ಕೌಶಲ್ಯತೆ ಮುಖ್ಯ: ಆಟಗಾರನಿಗೆ ದೈಹಿಕ ಸಾಮರ್ಥ್ಯದ ಜೊತೆಗೆ ಕೌಶಲ್ಯತೆ ಮುಖ್ಯ. ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸುವ ಆಟಗಾರರಿಗೆ ಕೌಶಲ್ಯತೆ ಎಂಬುದು ಅತ್ಯಂತ ಅವಶ್ಯವಾಗಿರುತ್ತದೆ. ಎಷ್ಟೇ ದೈಹಿಕ ಸಾಮರ್ಥ್ಯವಿದ್ದರೂ ಕೌಶಲ್ಯತೆ ಇಲ್ಲದಿದ್ದರೆ ಏನನ್ನೂ ಸಾಧಿಸಲಾಗದು. ದೈಹಿಕವಾಗಿ ಎತ್ತರ ಕಡಿಮೆ ಇದ್ದವರೂ ಉತ್ತಮ ಸಾಧನೆ ಮಾಡಿದ್ದಾರೆ ಎಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. 1967ರಲ್ಲಿ ಕರ್ನಾಟಕ–ಆಂಧ್ರ ವಿರುದ್ಧ ನಡೆದ ರಣಜಿ ಪಂದ್ಯದಲ್ಲಿ ನನ್ನನ್ನು ಕುಳ್ಳಿದ್ದಾನೆ ಎಂದಿದ್ದರು. ಆದರೆ ಅದೇ ಪಂದ್ಯದಲ್ಲಿ 214 ರನ್ ಗಳಿಸಿದ್ದೆ. ಈಗಂತೂ ರಣಜಿ ಕ್ರಿಕೆಟ್ ಆಡದೆಯೂ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಲು ಅವಕಾಶಗಳು ಹೆಚ್ಚಾಗಿವೆ. ಮೊದಲು ರಣಜಿ ಕ್ರಿಕೆಟ್‌ನಲ್ಲಿ ಆಟವಾಡುವುದು ಒಂದು ಹೆಮ್ಮೆಯಾಗಿರುತ್ತಿತ್ತು ಎಂದು ಕೌಶಲ್ಯದ ಮಹತ್ವ ತಿಳಿಸಿಕೊಟ್ಟರು.

ಚಂಬಲ್ ಅನುಭವ: 1971ರಲ್ಲಿ ಗ್ವಾಲಿಯರ್‌ನಲ್ಲಿ ನಡೆಯುತ್ತಿದ್ದ ರಾಷ್ಟ್ರಮಟ್ಟದ ಕ್ರಿಕೆಟ್ ಪಂದ್ಯಾವಳಿಯಂದು ರಾತ್ರಿ ವೇಳೆ ಸ್ವಲ್ಪ ಹೊರಗಡೆ ಸುತ್ತಾಡಲು ನನ್ನ ಸಹ ಆಟಗಾರರೊಂದಿಗೆ ಹೋಗಿದ್ದಾಗ ಕುದುರೆ ಮೇಲೆ ಬಂದಂತಹ ಮುಸುಕುಧಾರಿಗಳು ನಮ್ಮನ್ನು ಅಡ್ಡಗಟ್ಟಿ ಮರಕ್ಕೆ ಕಟ್ಟಿಹಾಕಿದ್ದರು. ಆನಂತರ ಪಟೌಡಿಯವರೇ ಬಂದು ಕರೆದುಕೊಂಡು ಹೋಗಿದ್ದರು. ಆ ಘಟನೆಯಾದ 2 ವರ್ಷದ ನಂತರ ಪಟೌಡಿಯವರೇ ಮಾಡಿಸಿದ್ದು ಎಂದು ತಿಳಿಯಿತು ಎಂದು ತಮ್ಮ ಹಳೇಯ ನೆನಪುಗಳನ್ನು ಮೆಲುಕು ಹಾಕಿದರು. ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಶನ್‌ನ ಪದಾಧಿಕಾರಿಗಳು, ಕ್ರಿಕೆಟ್ ಆಟಗಾರರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

> "ಕ್ರಿಕೆಟ್ ಆಟಗಾರರನ್ನು ವ್ಯವಹಾರಕ್ಕೆ ಬಳಸಿಕೊಳ್ಳುವುದು ಸರಿಯಲ್ಲ. ವ್ಯವಹಾರ ಕ್ರಿಕೆಟ್ ಮೈದಾನದಿಂದ ಹೊರಗಿರಬೇಕು. ಕ್ರೀಡಾ ಕ್ಷೇತ್ರ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು, ಕ್ರಿಕೆಟ್ ಸೇರಿದಂತೆ ಎಲ್ಲಾ ಬಗೆಯ ಕ್ರೀಡೆಗಳಿಗೂ ಆದ್ಯತೆ ನೀಡುತ್ತಿರುವುದು ಶ್ಲಾಘನೀಯ. ನಿವೃತ್ತಿಯಾದ 39 ವರ್ಷಗಳ ಬಳಿಕ ಎಲ್ಲರ ಒಪ್ಪಿಗೆ ಮೇರೆಗೆ ಬರಹಗಾರ ಆರ್.ಕೌಶಿಕ್ ನನ್ನ ಆತ್ಮಚರಿತ್ರೆ ಹೊರ ತಂದಿದ್ದಾರೆ.
> – ಜಿ.ಆರ್.ವಿಶ್ವನಾಥ್, ಹಿರಿಯ ಕ್ರಿಕೆಟ್ ದಿಗ್ಗಜ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಾರದ ಮಿತ್ರ
ಸಾಪ್ತಾಹಿಕ ಪುರವಣಿ


ಮೈಸೂರು ಮಿತ್ರ
ಭಾನುವಾರ
13-11-2022



ವಿಶೇಷ ಮಕ್ಕಳ ಬಾಳ ಬೆಳಗುತಿದೆ
ದೇವ್‌ಧನ್ ಫೌಂಡೇಷನ್



ಬಲ್ಲಚಂಡ ಧನ್ಯ ಪೊನ್ನಮ್ಮ ಉತ್ತಪ್ಪ



ಕೊಟೇರ ದಿಲೀಪ್ ದೇವಯ್ಯ

■ ಎಂ.ಟಿ.ಯೋಗೇಶ್‌ಕುಮಾರ್ ಮೊ.9880813195

ವಿಶೇಷ ಮಕ್ಕಳಿಗೆ ಅಕ್ಕರೆ ಶಿಕ್ಷಣ ನೀಡುವ ಮೂಲಕ ಮೈಸೂರಿನ ದೇವ್‌ಧನ್ ಫೌಂಡೇಷನ್ ಸದ್ದಿಲ್ಲದೆ ನಿಸ್ವಾರ್ಥ ಸೇವೆ ಒದಗಿಸುತ್ತಾ ಬಂದಿದ್ದು, ದೇವರ ಮಕ್ಕಳಿಗೆ ಬದುಕುವ ಛಲಗಾರಿಕೆಯನ್ನು ಕಲಿಸುವ ಕಾಯಕದಲ್ಲಿ ತೊಡಗಿದೆ.

ಕೊಡಗು ಮೂಲದ ಸ್ನೇಹಿತರಿಬ್ಬರು ವಿಶೇಷ ಮಕ್ಕಳ ಸೇವೆಗಾಗಿ ದೇವ್‌ಧನ್ ಫೌಂಡೇಷನ್ ಚಾರಿಟೆಬಲ್ ಟ್ರಸ್ಟ್ ಸ್ಥಾಪಿಸಿದ್ದು, 2016ರಿಂದ ಮೈಸೂರಿನ ಎನ್.ಆರ್.ಮೊಹಲ್ಲಾ, ಲಷ್ಕರ್ ಮೊಹಲ್ಲಾ ಸೇರಿದಂತೆ ಸುತ್ತಮುತ್ತಲಿನ ಬಡಾವಣೆಗಳ ವಿಶೇಷ ಮಕ್ಕಳಿಗೆ ಅವರ ಸಾಮರ್ಥ್ಯಕ್ಕನುಗುಣವಾಗಿ ಶಿಕ್ಷಣದೊಂದಿಗೆ ಬದುಕುವ ಕಲೆ ಕಲಿಸಿ, ಅವರ ಪೋಷಕರಿಗೆ ನೆಮ್ಮದಿ ತರುವ ಮೂಲಕ ಪ್ರಶಂಸೆಗೆ ಪಾತ್ರರಾಗಿದ್ದಾರೆ. ವಿಶೇಷ (ಬುದ್ಧಿಮಾಂದ್ಯ) ಮಕ್ಕಳಿಗೆ ಪ್ರೀತಿಯಿಂದ ಅಕ್ಕರೆ ಶಿಕ್ಷಣ ನೀಡುತ್ತಿರುವ ಧನ್ಯ ಪೊನ್ನಮ್ಮ ಉತ್ತಪ್ಪ ಬಲ್ಲಚಂಡ ಹಾಗೂ ಕೊಟೇರ ದಿಲೀಪ್ ದೇವಯ್ಯ ಅವರ ನಿಸ್ವಾರ್ಥ ಸಮಾಜಮುಖಿ ಸೇವೆಗೆ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ.

ಸೇವೆ ಮಾಡುವ ಹಂಬಲವಿತ್ತು: ದೇವ್‌ಧನ್ ಫೌಂಡೇಷನ್ ಮುಖ್ಯಸ್ಥೆ ಧನ್ಯ ಪೊನ್ನಮ್ಮ ಉತ್ತಪ್ಪ ಬಲ್ಲಚಂಡ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಪ್ರೌಢ ಶಿಕ್ಷಣವನ್ನು ಕೊಡಗಿನ ನಾಪೋಕ್ಲು ಹಾಗೂ ಪದವಿಪೂರ್ವ ಶಿಕ್ಷಣವನ್ನು ವಿರಾಜಪೇಟೆಯಲ್ಲಿ ಪೂರೈಸಿದ ಬಳಿಕ ಮೈಸೂರಲ್ಲಿ ಪದವಿ ಶಿಕ್ಷಣ ಮಾಡಿದ ನನಗೆ ಸಮಾಜ ಸೇವೆ ಮಾಡಬೇಕೆಂಬ ಹಂಬಲವಿತ್ತು. 2010ರಲ್ಲಿ ಮೈಸೂರಲ್ಲೇ ನೆಲೆಸಲು ನಿರ್ಧರಿಸಿದ ಬಳಿಕ ಬ್ಯೂಟಿಫುಲ್ ಗೇಟ್ ಸ್ಪೆಷಲ್ ಸ್ಕೂಲ್‌ನಲ್ಲಿ 5 ವರ್ಷ ಕೆಲಸ ಮಾಡಿದೆ. ಅಲ್ಲಿವರೆಗೂ ವಿಶೇಷ ಮಕ್ಕಳು, ಅವರಿಗೆ ಶಿಕ್ಷಣ, ಆರೈಕೆ ಕೊರತೆ ಬಗ್ಗೆ ನನ್ನ ಗಮನಕ್ಕೆ ಬಂದಿರಲಿಲ್ಲ. ಈ ಸಂಸ್ಥೆಯಲ್ಲಿ ಕೆಲಸ ಮಾಡುವಾಗ ವಿಶೇಷ ಮಕ್ಕಳ ಬಗ್ಗೆ ಸಾಕಷ್ಟು ಮಾಹಿತಿ ಕಲೆ ಹಾಕಿದೆ. ಇದು ಬುದ್ಧಿಮಾಂದ್ಯ ಮಕ್ಕಳ ಸೇವೆಗೆ ಪ್ರೇರಣೆ ನೀಡಿತು.

ವಿಶೇಷ ತರಬೇತಿ: ಬ್ಯೂಟಿಫುಲ್ ಗೇಟ್ ಸ್ಪೆಷಲ್ ಸ್ಕೂಲ್‌ನಲ್ಲಿ ಕೆಲಸ ಬಿಟ್ಟ ಬಳಿಕ ಬೆಂಗಳೂರಿನ ಇಂದಿರಾನಗರದಲ್ಲಿರುವ ಸ್ಪಾಸ್ಟಿಕ್ಸ್ ಸೊಸೈಟಿಯಲ್ಲಿ ಒಂದು ವರ್ಷ ಕೋರ್ಸ್‌ನ ವಿಶೇಷ ತರಬೇತಿ ಪಡೆದುಕೊಂಡೆ. ಈ ಕೋರ್ಸ್ ಪಡೆಯಬೇಕಾದರೆ ಕಡ್ಡಾಯವಾಗಿ 5 ವರ್ಷ ವಿಶೇಷ ಮಕ್ಕಳೊಂದಿಗೆ ಕೆಲಸ ಮಾಡಿರಲೇಬೇಕಾದ ನಿಯಮವಿದೆ. ನಾನು ಮೊದಲು ವಿಶೇಷ ಮಕ್ಕಳ ಶಾಲೆಯಲ್ಲಿ ಕೆಲಸ ಮಾಡಿದ್ದರಿಂದ ವಿಶೇಷ ಶಿಕ್ಷಣದ ತರಬೇತಿ ಪಡೆಯುವುದು ಸಹಕಾರಿಯಾಯಿತು. ಇದರಿಂದ ಇಂದು ವಿಶೇಷ ಮಕ್ಕಳ ಸೇವೆ ಮಾಡುವ ಅವಕಾಶ ನನ್ನ ಪಾಲಿಗೆ ಒಲಿದು ಬಂದಿದೆ.

ಟ್ರಸ್ಟ್ ಸ್ಥಾಪನೆಗೆ ಸ್ನೇಹಿತನ ಸಹಕಾರ: ವಿಶೇಷ ಶಿಕ್ಷಣ ಪಡೆದ ಬಳಿಕ, ವಿಶೇಷ ಮಕ್ಕಳನ್ನು ಕಂಡಾಗ ಸಂಕಟವಾಗುತ್ತಿತ್ತು. ಆ ಮಕ್ಕಳಿಗೂ ಸೂಕ್ತ ಶಿಕ್ಷಣ ಕೊಡಿಸಿದರೆ ಅವರು ಸಾಮಾನ್ಯರಂತೆ ಇನ್ನಿತರರನ್ನು ಅವಲಂಭಿಸದೆ ದೈನಂದಿನ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಅಲ್ಲದೇ, ಜೀವನ ಸಾಗಿಸಲು ನೆರವಾಗುತ್ತದೆ ಎಂಬ ಆಲೋಚನೆ ಬಂತು. ಈ ವೇಳೆ ಟ್ರಸ್ಟ್‌ವೊಂದನ್ನು ಸ್ಥಾಪಿಸುವ ಆಲೋಚನೆ ಬಂದು, ಇದಕ್ಕೆ ಬಾಲ್ಯ ಸ್ನೇಹಿತ, ಮನಶಾಸ್ತ್ರಜ್ಞರೂ ಆದ ಕೊಟೇರ ದೀಲಿಪ್ ದೇವಯ್ಯ ಸಾಥ್ ನೀಡಿದರು. ಇಬ್ಬರು ಸೇರಿ 2016ರಲ್ಲಿ ದೇವಧನ್ ಫೌಂಡೇಷನ್ ಚಾರಿಟೆಬಲ್ ಟ್ರಸ್ಟ್ ಸ್ಥಾಪಿಸಿ, ಬುದ್ಧಿಮಾಂದ್ಯ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದೇವೆ ಎಂದು ವಿವರಿಸಿದರು.



ವಿಶೇಷ ಮಕ್ಕಳಿಗೆ ಸದಾ ಚೈತನ್ಯ ತುಂಬುವ ಕಾರ್ಯ ಚಟುವಟಿಕೆ ಸಾಗಿದೆ

21 ಮಕ್ಕಳ ಆರೈಕೆ: ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್ ಬಳಿ ಇರುವ ದೇವ್‌ಧನ್ ಫೌಂಡೇಷನ್‌ನಲ್ಲಿ 7 ವರ್ಷದಿಂದ 54 ವರ್ಷದ 21 ಮಂದಿ ಬುದ್ಧಿಮಾಂದ್ಯರು ಶಿಕ್ಷಣ ಪಡೆಯುತ್ತಿದ್ದಾರೆ. ಈ 21 ಮಂದಿಯಲ್ಲೂ ಬುದ್ಧಿಮತ್ತೆ 5 ರಿಂದ 7 ವರ್ಷದ ಮಕ್ಕಳಿಗಿರುವಂತೆ ಇದ್ದು, ಅವರಿಗೆ ವಿಶೇಷ ತರಬೇತಿ ನೀಡುವ ಅಗತ್ಯವಿದೆ. ಆ ನಿಟ್ಟಿನಲ್ಲಿ ಶಾಲೆಯಲ್ಲಿ ಮಕ್ಕಳಿಗೆ ಆಟದೊಂದಿಗೆ ಪಾಠ ಕಲಿಸಲಾಗುತ್ತಿದೆ ಎಂದು ಹೇಳಿದರು.

ವಿವಿಧ ತರಬೇತಿ: ನಮ್ಮ ಶಾಲೆಯಲ್ಲಿ 7ರಿಂದ 14 ವರ್ಷದ ಮಕ್ಕಳಿಗೆ ಶೈಕ್ಷಣಿಕ, ಪೂರ್ವ ವೃತ್ತಿಪರ ಶಿಕ್ಷಣದೊಂದಿಗೆ ದೈನಂದಿನ ಚಟುವಟಿಕೆಗಳಲ್ಲಿ ಯಾರ ನೆರವಿಲ್ಲದೆ ಪಾಲ್ಗೊಳ್ಳಲು ಕಲಿಸಲಾಗುತ್ತದೆ. 18 ವರ್ಷ ಮೇಲ್ಪಟ್ಟವರಿಗೆ ಬಟ್ಟೆ ಹಾಗೂ ಪೇಪರ್ ಬ್ಯಾಗ್ ತಯಾರಿಸುವುದು, ಹೊಲಿಗೆ ಹಾಕುವುದು ಸೇರಿದಂತೆ ವೃತ್ತಿಪರ ಶಿಕ್ಷಣ ನೀಡಲಾಗುತ್ತದೆ. ಕೆಲವು ಮಕ್ಕಳು ನಮ್ಮ ಸಂಸ್ಥೆ ಸೇರಿದಾಗ ಬಹುತೇಕರಿಗೆ ಶೌಚಾಲಯಕ್ಕೂ ಹೋಗುವ ಅರಿವಿರಲಿಲ್ಲ. ಅವರಿಗೆ ಮಲ, ಮೂತ್ರ ವಿಸರ್ಜನೆಗೆ ಶೌಚಾಲಯಕ್ಕೆ ಹೋಗುವುದನ್ನು ಕಲಿಸಲಾಯಿತು. ಅಲ್ಲದೆ, ಯಾರ ಸಹಾಯ ಪಡೆಯದೇ ತಾವೇ ಊಟ ಮಾಡುವುದನ್ನು ಕಲಿಸುತ್ತೇವೆ. ಶಾಲೆಯಲ್ಲಿ 8 ಕೊಠಡಿಗಳಿದ್ದು, ಅವುಗಳಲ್ಲಿ ವೃತ್ತಿಪರ ತರಬೇತಿ, ಫಿಜಿಯೋ ಥೆರಪಿ, ಸ್ಪೀಚ್ ಥೆರಪಿ, ಫೈನ್ ಆರ್ಟ್ ತರಬೇತಿ, ಕೌನ್ಸಿಲಿಂಗ್ ಮಾಡಲಾಗುತ್ತದೆ ಎಂದು ವಿವರಿಸಿದರು.



> **ಬೋರ್ಡಿಂಗ್ ವ್ಯವಸ್ಥೆ**
> ಮೈಸೂರಿನ ಹೆಬ್ಬಾಳು ಬಡಾವಣೆಯಲ್ಲಿರುವ ರಿವೈವ್ ಹೆಲ್ತ್‌ಕೇರ್ ಸೆಂಟರ್ ಸಹಯೋಗದಲ್ಲಿ ದೇವ್‌ಧನ್ ಫೌಂಡೇಷನ್ ವತಿಯಿಂದ ವಿಶೇಷ ಮಕ್ಕಳಿಗೆ ವಸತಿ ಸೌಲಭ್ಯ ಒದಗಿಸಲು ಮುಂದಾಗಿದ್ದು, ಈಗಾಗಲೇ ಇಬ್ಬರು ಮಕ್ಕಳು ಬೋರ್ಡಿಂಗ್‌ಗೆ ದಾಖಲಾಗಿದ್ದಾರೆ. ಈ ಕೇಂದ್ರದಲ್ಲಿ ದಿನದ 24 ಗಂಟೆಯೂ ವೈದ್ಯಕೀಯ ಸೌಲಭ್ಯ ಲಭ್ಯವಿದೆ.
> –ಕೊಟೇರ ದಿಲೀಪ್ ದೇವಯ್ಯ, ಮುಖ್ಯಸ್ಥರು ದೇವ್‌ಧನ್ ಫೌಂಡೇಷನ್

ಗುಣಮಟ್ಟದ ಶಿಕ್ಷಣ: ವಿಶೇಷ ಮಕ್ಕಳಿಗೆ ಸಮಾಧಾನದಿಂದ ಕಲಿಸಬೇಕಾಗುತ್ತದೆ. ಹಾಗಾಗಿ ತರಬೇತಿ ಪಡೆದ 5 ಮಂದಿ ಶಿಕ್ಷಕರನ್ನು ನಿಯೋಜಿಸಿಕೊಂಡಿದ್ದೇವೆ. ಅದರೊಂದಿಗೆ ಮಕ್ಕಳಿಗೆ ನೆರವಾಗಲು ಓರ್ವ ಸಹಾಯಕಿಯೊಬ್ಬರನ್ನು ನೇಮಿಸಿಕೊಳ್ಳಲಾಗಿದೆ ಎಂದರು.

ಜರ್ಮನಿಯಿಂದ ಸ್ವಯಂ ಸೇವಕರು: ದೇವ್‌ಧನ್ ಫೌಂಡೇಷನ್ ಕಾರ್ಯ ಚಟುವಟಿಕೆ ಮೆಚ್ಚಿ ಪ್ರತಿವರ್ಷ ಎಂಬಿಎ ವಿದ್ಯಾರ್ಥಿಗಳಿಬ್ಬರನ್ನು ಸ್ವಯಂಸೇವಕರಾಗಿ ಜರ್ಮನಿಯ ಐಸಿಡಿಇ ಕಂಪನಿ ಕಳುಹಿಸುತ್ತದೆ. ಈ ವಿದ್ಯಾರ್ಥಿಗಳು ಸಹಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾರೆ. ಇದುವರೆಗೂ 8 ಮಂದಿ ವಿದೇಶಿ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಇಲ್ಲಿ ಸೇವೆ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ಕೌನ್ಸಿಲಿಂಗ್: ವಿಶೇಷ ಮಕ್ಕಳ ಶಿಕ್ಷಣದಲ್ಲಿ ಕೌನ್ಸಿಲಿಂಗ್ ಒಂದು ಭಾಗವಾಗಿ ರುವುದರಿಂದ ನಮ್ಮ ಸಂಸ್ಥೆಯ ಮನೋಶಾಸ್ತ್ರಜ್ಞ ದಿಲೀಪ್ ದೇವಯ್ಯ ಈ ಮಕ್ಕಳು, ಅವರ ಪೋಷಕರಿಗೆ ಕೌನ್ಸಿಲಿಂಗ್ ಮಾಡುತ್ತಾರೆ. ಜೊತೆಗೆ ಫ್ಯಾಮಿಲಿ ಕೌನ್ಸಿಲಿಂಗ್ ಮಾಡಲಿದ್ದಾರೆ. ಇದರಿಂದ ವಿಶೇಷ ಮಕ್ಕಳ ಪಾಲನೆ, ಆರೈಕೆ ಬಗ್ಗೆ ಪೋಷಕರಿಗೆ ಮತ್ತಷ್ಟು ಮಾಹಿತಿ ದೊರೆಯಲಿದೆ ಎಂದರು.

ಮಕ್ಕಳಲ್ಲಿ ಸುಧಾರಣೆ: ಈ ಮೊದಲು ರಾಜೀವ್‌ನಗರದಲ್ಲಿ ನಮ್ಮ ಸಂಸ್ಥೆ ಕಾರ್ಯಾಚರಿಸುತ್ತಿತ್ತು. ಒಂದು ವರ್ಷದಿಂದ ಲಷ್ಕರ್ ಮೊಹಲ್ಲಾದ ಅಶೋಕ ರಸ್ತೆಯಲ್ಲಿ ಸಂಸ್ಥೆ ಕಾರ್ಯನಿರತವಾಗಿದೆ. 7 ವರ್ಷದಲ್ಲಿ 80ಕ್ಕೂ ಹೆಚ್ಚು ವಿಶೇಷ ಮಕ್ಕಳಿಗೆ ಶಿಕ್ಷಣ ನೀಡಿದ್ದೇವೆ. ನಮ್ಮ ಸಂಸ್ಥೆಯಲ್ಲಿ ಕಲಿತ ಮಕ್ಕಳ ವರ್ತನೆಯಲ್ಲಿ ಸುಧಾರಣೆ ಕಂಡಿದೆ. ಅವರ ಪೋಷಕರು ಮಕ್ಕಳ ವರ್ತನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಭಾರ್ಗವಿ ಎಂಬ 24 ವರ್ಷದ ವಿಶೇಷ ಯುವತಿ ನಮ್ಮ ಸಂಸ್ಥೆಯಲ್ಲೇ ವಿದ್ಯಾರ್ಥಿಯಾಗಿದ್ದರು. ಅವರು ತರಬೇತಿ ಪಡೆದು, ತಾವೇ ಕಾಟನ್ ಬ್ಯಾಗ್ ಹೊಲಿಯುವ ಸಾಮರ್ಥ್ಯ ಪಡೆದುಕೊಂಡಿದ್ದಾರೆ. ಅವರನ್ನು ಸಹ ಶಿಕ್ಷಕಿಯಾಗಿ ನೇಮಕ ಮಾಡಿಕೊಂಡಿದ್ದೇವೆ ಎಂದು ತಿಳಿಸಿದರು.

ಆರ್ಥಿಕ ಸಂಪನ್ಮೂಲದ ಕೊರತೆ: ಶಾಲೆಗೆ ಸೇರಿರುವ ಕೆಲ ವಿಶೇಷ ಮಕ್ಕಳ ಪೋಷಕರು ತಮ್ಮ ಶಕ್ತಿಯಾನುಸಾರ ಶುಲ್ಕ ಪಾವತಿಸುತ್ತಾರೆ. ಕೆಲ ಬಡಕುಟುಂಬದ ಮಕ್ಕಳ ಪೋಷಕರು ಶುಲ್ಕ ನೀಡಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಸ್ಥೆಗೆ ಆರ್ಥಿಕ ಸಂಪನ್ಮೂಲದ ಅಗತ್ಯವಿದೆ. ಕೆಲವು ಸ್ನೇಹಿತರು ಇಂತಹ ಮಕ್ಕಳ ಶಿಕ್ಷಣಕ್ಕೆ ನೆರವು ನೀಡುತ್ತಾರೆ. ಕಳೆದ 7 ವರ್ಷದಿಂದ ನಾನು ಹಾಗೂ ದೇವಯ್ಯ ಒಂದು ರೂ. ವೇತನ ಪಡೆಯದೇ ಸೇವೆ ಸಲ್ಲಿಸುತ್ತಿದ್ದೇವೆ. ಆದರೆ, ಸಂಸ್ಥೆಯಲ್ಲಿರುವ ಐವರು ಶಿಕ್ಷಕರು ಹಾಗೂ ಓರ್ವ ಸಹಾಯಕಿಗೆ ತಪ್ಪದೇ ವೇತನ ನೀಡುತ್ತಿದ್ದೇವೆ. ಭಾನುವಾರ ಹೊರತುಪಡಿಸಿ ಪ್ರತಿದಿನ ಬೆಳಗ್ಗೆ 9.30 ರಿಂದ ಮಧ್ಯಾಹ್ನ 2.30ರವರೆಗೆ ತರಗತಿ ನಡೆಸಲಾಗುತ್ತದೆ. 12 ಮಂದಿ ಬಾಲಕರು, 9 ಮಂದಿ ಬಾಲಕಿಯರು ಈಗ ಶಿಕ್ಷಣ ಪಡೆಯುತ್ತಿದ್ದಾರೆ. ಎಲ್ಲರಿಗೂ ಮಧ್ಯಾಹ್ನ ಹಾಲು ಹಾಗೂ ಹಣ್ಣನ್ನು ನೀಡಲಾಗುತ್ತದೆ ಎಂದು ವಿವರಿಸಿದರು. ದೇವ್‌ಧನ್ ಫೌಂಡೇಷನ್ ಕುರಿತು 9008509850 ಸಂಪರ್ಕಿಸಬಹುದಾಗಿದೆ.



ವಾರಭವಿಷ್ಯ
13.11.2022 ರಿಂದ 19.11.2022

ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ–ತುಲಾ, ಚಂದ್ರ–ಮಿಥುನ, ಕಟಕ–ಸಿಂಹ, ಕನ್ಯಾ, ಕುಜ–ಮಿಥುನ, ಬುಧ–ತುಲಾ, ವೃಶ್ಚಿಕ, ಗುರು–ಮೀನ, ಶುಕ್ರ–ವೃಶ್ಚಿಕ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ಯಾವುದೂ ನೀವಂದುಕೊಂಡಂತೆ ಸಾಗುವುದಿಲ್ಲ. ಹೆಚ್ಚಿನ ಪರಿಶ್ರಮವಷ್ಟೇ ನಿಮ್ಮ ಬಂಡವಾಳ. ನಿಮ್ಮ ವೈಯಕ್ತಿಕ ಕಾರ್ಯ ಕಲಾಪಗಳಲ್ಲಿ ವಿಘ್ನಗಳು ಉಂಟಾಗಲಿದೆ. ನ್ಯಾಯ ಮಾರ್ಗದಲ್ಲೇ ನಡೆದರೂ ಅಸಫಲತೆಗಳು ಎದುರಾಗಲಿದೆ. ಶ್ರೀ ಶನಿದೇವನ ಕೃಪೆಯಿಂದ ಅಭೀಷ್ಟ ಸಿದ್ಧಿ, ಕೃಷಿಕರಿಗೆ ಹೆಚ್ಚಿನ ಆದಾಯ. ವೃಥಾ ಅಪವಾದಗಳಿಗೆ ಗುರಿಯಾಗುವಿರಿ. ಧಾರ್ಮಿಕ ಕಾರ್ಯಗಳಲ್ಲಿ ವಿಘ್ನ.
ಶ್ರೀ ಅನಿಷ್ಟ ನಿವಾರಕ ನರಸಿಂಹ ಸ್ತುತಿ. ಶುಭ ಸಂಖ್ಯೆ–2.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಫಲವನ್ನು ಅನುಭವಿಸಬೇಕಾದರೆ ಅದಕ್ಕೆ ತಕ್ಕ ಕಷ್ಟ ಪಡಬೇಕು. ಗುರುಬಲವಿದೆ. ವರ್ತಕರಿಗೆ ಹೆಚ್ಚಿನ ಆದಾಯದೊಂದಿಗೆ ಅಭಿವೃದ್ಧಿ, ಮಕ್ಕಳು ಉತ್ತಮ ಸಾಧನೆ ಮಾಡುವರು. ಕಲಾವಿದರಿಗೆ ಸರ್ಕಾರದಿಂದ ಗೌರವ ಪ್ರಾಪ್ತಿ. ಹಳೆಯ ಕಾಯಿಲೆಯಿಂದ ಬಿಡುಗಡೆ. ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ವಿಚಾರ ಇತ್ಯರ್ಥವಾಗುವುದು. ವಿದ್ಯುತ್ ಅವಗಢಗಳಿಂದ ಜಾಗ್ರತರಾಗಿರಿ.
ಶ್ರೀದೇವಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಹರುಷ, ಉಲ್ಲಾಸಗಳು ದೊರೆಯಲಿದೆ. ಅವರಿವರು ಹೊಗಳುತ್ತಾರೆಂದು ಮಾರು ಹೋಗದಿರಿ. ನೀವು ಈ ವಾರದಲ್ಲಿ ಸಾಕಷ್ಟು ಸಾಧಿಸುವ ಸಾಮರ್ಥ್ಯ ಹೊಂದಿರುವಿರಿ. ಸಣ್ಣ ಪುಟ್ಟ ಕೈಗಾರಿಕೆಗಳನ್ನು ಪ್ರಾರಂಭಿಸಬಹುದಾಗಿದೆ. ಅಷ್ಟಮ ಭಾವದಲ್ಲಿ ಶನಿ ಸಂಚಾರವಿದ್ದು ದುಷ್ಕರ್ಮಗಳನ್ನು ಮಾಡಲು ಪ್ರೇರಣೆ ಆಗುವುದು. ಇದರಿಂದ ಗೌರವಕ್ಕೆ ಭಂಗವಾಗುವುದು.
ಶ್ರೀರಾಮನಾಮ ಜಪ, ಶುಭ ಸಂಖ್ಯೆ–7

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಸಪ್ತಾಹದ ಆದಿಗೆ ಹೊಸ ಹುರುಪಿನಿಂದ ಕೆಲಸಗಳು ಸಂಪನ್ನಗೊಳ್ಳಲಿವೆ. ವ್ಯಾಪಾರ ವಹಿವಾಟುಗಳು ಪ್ರಗತಿಯ ಹಾದಿಯಲ್ಲಿ ಸಾಗುವುದು. ವಾರಮಧ್ಯೆ ಆತ್ಮೀಯರ ಭೇಟಿಯಿಂದ ಮನಸ್ಸು ಪ್ರಫುಲ್ಲವಾಗುವುದು. ಮುಂದಿನ ಸಾಧನೆಗಳಿಗೆ ಹೆಚ್ಚಿನ ಸಿದ್ಧತೆ ಬೇಕಾಗುತ್ತದೆ. ಶನಿದೇವ ಅಶುಭನಿರುವುದರಿಂದ ಅಂದಿನದು ಅಂದಿಗೆ ಇಂದಿನದು ಇಂದಿಗೆ ಎಂಬಂತೆ ನಡೆದುಕೊಂಡರೆ ಕ್ಷೇಮ. ಮಹಿಳಾ ಮಣಿಯರು ಮಾಂಗಲ್ಯಸರ ಮುಚ್ಚಿಕೊಂಡು ಓಡಾಡಲಿ.
ಶ್ರೀ ಲಿಂಗಾಷ್ಟಕ ಪಠಿಸಿ. ಶುಭ ಸಂಖ್ಯೆ–2.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಎಲ್ಲವೂ ನಾವಂದುಕೊಂಡಂತೆ ಆಗುವುದಿಲ್ಲ. ಅದಕ್ಕೆ ಹೊಂದಿಕೊಂಡು ಹೋಗುವುದೇ ಜಾಣ್ಮೆ. ಹಣಕಾಸಿನ ಪರಿಸ್ಥಿತಿಯಲ್ಲಿ ಚೇತರಿಕೆಯನ್ನು ಕಾಣುವಿರಿ. ಟ್ರಾವೆಲ್ ಏಜೆನ್ಸಿ, ಕೇಟರಿಂಗ್‌ನವರಿಗೆ ಉತ್ತಮ ಆದಾಯವಿದೆ. ಕೃಷಿಕರಿಗೆ ಉತ್ತಮ ಫಸಲು ಹಾಗೂ ಬೆಲೆ ದೊರಕುವುದು. ಕೆಲವೊಮ್ಮೆ ನಿಮ್ಮ ವೈರಿಗಳು ಮಿತೃತ್ವ ಬಯಸಿ ಬರುವ ಸಂಭವವಿದೆ. ಮಂಡಿ ನೋವು, ಸೊಂಟ ನೋವು ಕಾಡಿಸುತ್ತದೆ.
ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ–1.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ನಿಮ್ಮ ರಾಶಿಗೆ ಗುರುವಿನ ಶುಭ ದೃಷ್ಟಿ ಇದೆ. ಮುಟ್ಟಿದ್ದೆಲ್ಲಾ ಚಿನ್ನಾ ಅಲ್ಲದಿದ್ದರೂ ಬೆಳ್ಳಿಯಂತೂ ದೊರೆಯುವುದು. ಸಜ್ಜನರ ಸಹವಾಸ, ಪುಣ್ಯ ಕಾರ್ಯಾಚರಣೆಯಿಂದ ಧನ್ಯತೆಯ ಭಾವ. ಬುದ್ಧಿಕಾರಕ ಬುಧ ನಿಮ್ಮ ರಾಶ್ಯಾಧಿಪತಿಯಾದ ಕಾರಣ ಕಲಿಕೆಗೆ ಕೊನೆಯಿಲ್ಲ ಎಂಬಂತೆ ಉನ್ನತ ವ್ಯಾಸಂಗಗಳಿಗೆ ಹಾದಿ ಸುಗಮವಾಗಿದೆ. ಶರೀರಾರೋಗ್ಯ ಭಾಗ್ಯವನ್ನೂ ಹೊಂದುವಿರಿ. ಚಾಡಿಕೋರರ ಮಾತಿಗೆ ಬೆಲೆ ಕೊಡದಿರಿ.
ಶ್ರೀ ವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ–8.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದ ಪೂರ್ವಾರ್ಧಕ್ಕೆ ಎಲ್ಲವೂ ಚೆನ್ನಾಗಿದೆ. ಧನ, ಕನಕ, ದುಬಾರಿ ವಸ್ತು, ವಾಹನ ಹೊಂದಲು ನಿಮ್ಮ ರಾಶ್ಯಾಧಿಪತಿ ಶುಕ್ರನ ಕರುಣೆಯಿಂದ ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ಮನಸ್ಸು ಮತ್ತು ಮಾತು ಸ್ವಚ್ಛವಾಗಿರುವುದು. ಧಾರ್ಮಿಕ ಉತ್ಸವಗಳಲ್ಲಿ ಭಾಗಿಯಾಗುವಿರಿ. ನಿಮ್ಮ ರಾಶಿ ಸ್ಥಿತ ಕೇತು ಹಾಗೂ ನೀಚ ರವಿಯಿಂದ ರಾಜಕಾರಣಿಗಳಿಗೆ ಅಪವಾದ, ಗಂಡಾಂತರಗಳು ಸುತ್ತಿಕೊಳ್ಳುವುದು.
ಶ್ರೀ ಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–5.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)
ಶುಭ ಗುರುವಿನ ಪರಿಣಾಮ ಭಾಗ್ಯದಲ್ಲಿ ವೃದ್ಧಿ, ಸುವರ್ಣ ವ್ಯಾಪಾರಿಗಳಿಗೆ ಉತ್ತಮ ಧನಲಾಭ, ವಿದ್ಯಾರ್ಥಿಗಳಿಗೆ ಪರೀಕ್ಷೆ, ಸಂದರ್ಶನಗಳಲ್ಲಿ ಯಶಸ್ಸು, ಮಕ್ಕಳ ಉತ್ತಮ ಸಾಧನೆಯಿಂದ ಹರುಷ. ಯುವತಿಯರಿಗೆ ಕನ್ಯಾಸೆರೆಯಿಂದ ಬಿಡುಗಡೆ ಹೊಂದುವ ಸುಸಮಯ. ಸರ್ಕಾರಿ ಉದ್ಯೋಗಿಗಳಿಗೆ ಬೇಡದ ವರ್ಗಾವಣೆಯಿಂದ ಬೇಸರ. ವಾರಾಂತ್ಯಕ್ಕೆ ಪಿತೃ ಸಮಾನ ವ್ಯಕ್ತಿಯೋರ್ವ ಆರೋಗ್ಯ ಕೆಡುವ ಸಂಭವ.
ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–8.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದಾರಂಭಕ್ಕಷ್ಟೇ ಸ್ವಲ್ಪ ನೆಮ್ಮದಿಯ ವಾತಾವರಣ. ಮಿತ್ರ ಜನರ ಸಂಪರ್ಕದಿಂದ ಹರುಷ. ಪಾರ್ಟಿ ಆಚರಣೆಗಳು, ಯಾರನ್ನೂ ಅತೀ ಹೆಚ್ಚು ನಂಬದಿರಿ. ಅನ್ಯಥಾ ಕೊಡಿಟ್ಟ ಹಣ ಅನ್ಯರ ಪಾಲಾಗುವುದು. ವಾರದ ಉತ್ತರಾರ್ಧಕ್ಕೆ ಗುರುದರ್ಶನದಿಂದ ಗುರಿ ಕಾಣುತ್ತದೆ. ತುಳಿಯುವರು ಎಷ್ಟೇ ಜನ ಇದ್ದರೂ ಕಾಪಾಡಲು ಒಬ್ಬ ದೇವನಿದ್ದಾನೆ ಎಂಬ ನಂಬಿಕೆ ಇದೇರಿ. ವಾಯು ವಿಹಾರಕ್ಕೆ ತೆರಳುವಾಗ ಚಿನ್ನದ ಸರದ ಅಗತ್ಯವಿಲ್ಲ.
ಶ್ರೀ ದಕ್ಷಿಣಾಮೂರ್ತಿ ಸ್ತುತಿ. ಶುಭ ಸಂಖ್ಯೆ–3.


ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ವಾರದಾರಂಭಕ್ಕೆ ಮಿತ್ರ ಲಾಭ, ವಿತ್ತ ಲಾಭ, ಶತೃ ನಾಶ, ಕೀರ್ತಿ ಸನ್ಮಾನಗಳು ದೊರೆಯಲಿದೆ. ಜಲಜನ್ಯ ವಸ್ತು ವ್ಯಾಪಾರಿಗಳಿಗೆ ಅಧಿಕ ಲಾಭವಿದೆ. ಹವಳ ಮತ್ತು ರಫ್ತುದಾರರಿಗೆ ದೊಡ್ಡ ಆರ್ಡರ್ ದೊರೆಯುವ ಸಾಧ್ಯತೆ ಇದೆ. ಜನ್ಮಸ್ಥ ಶನಿಯಿಂದ ಸ್ವೇಚ್ಛಾಚಾರದಿಂದ ನಡೆದು ತೊಂದರೆಯನ್ನು ವೈಮೇಲೆ ಎಳೆದುಕೊಳ್ಳುವಿರಿ. ಅಧಿಕ ವೇಗದ ಡ್ರೈವಿಂಗ್‌ನಿಂದ ನಿಮಗೂ, ನಿಮ್ಮ ಮನೆ ಮಂದಿಗೂ ಸುಖಹರಣವಾಗುವುದು.
ಶ್ರೀಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ–9.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಎಡರು–ತೊಡರುಗಳು ಜೀವನದ ಒಂದು ಅಂಗವೇ. ಆರಂಭದಲ್ಲಿ ಕಷ್ಟವೆನಿಸಿದರೂ ಅಮೂಲ್ಯ ಸಂಪತ್ತು ಗಳಿಕೆಗೆ ಗುರುಬಲವಿದೆ. ಕುಟುಂಬ ವರ್ಗದಲ್ಲಿ ವೃದ್ಧಿಯಾಗುವುದು. ಶೇರು ವ್ಯವಹಾರದಲ್ಲಿ ನಷ್ಟಕ್ಕೆ ಗುರಿಯಾಗುವಿರಿ. ಅಧಿಕ ತಿರುಗಾಟಗಳಿಂದ ದೇಹ ಬಳಲುವುದು. ಎಲ್ಲ ರಂಗದಲ್ಲೂ ಹಿರಿಯರ ಮಾತನ್ನು ಅಲಕ್ಷ್ಯ ಮಾಡಬೇಡಿ. ಅವರ ಮಾರ್ಗ ದರ್ಶನ ತೀರ ಅಗತ್ಯವಿದೆ. ಡ್ರೈವಿಂಗ್ ಮಾಡುವಾಗ ಮನೆಯಲ್ಲಿ ನಿಮ್ಮನ್ನು ಪ್ರೀತಿಸುವವರು ಇದ್ದಾರೆ ಎಂಬ ನೆನಪಿರಲಿ.
ಶ್ರೀ ಗುರುಸ್ತೋತ್ರ ಪಠಿಸಿ, ಶುಭ ಸಂಖ್ಯೆ–4


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದ ಪ್ರಾರಂಭಕ್ಕೆ ನಿಮ್ಮ ಅನಿರೀಕ್ಷಿತ ನಡವಳಿಕೆಗೆ ಗುರುದೇವನೇ ಕಾರಣ. ಕುಟುಂಬ ಸದಸ್ಯರೇ ಸಾಮರಸ್ಯದ ಕೊರತೆಯಿಂದ ಮನಃಶಾಂತಿ ಕೆಡುವುದು. ಹುಲ್ಲು ಕಡ್ಡಿಯನ್ನು ಬೆಟ್ಟ ಮಾಡದಿರಿ. ವಾರ ಮಧ್ಯೆ ಸುಭೋಜನ, ಶಯನ ಸುಖಗಳೂ ಉಂಟು. ವಿದೇಶ ಯಾತ್ರೆ, ತೀರ್ಥ ಯಾತ್ರೆಯ ಎರಡೂ ಯೋಗವಿದೆ. ರಾಹು–ಕೇತು ಅಶುಭರಿರುವ ಕಾರಣ ಅನಿರೀಕ್ಷಿತ ಘಟನಾವಳಿಗಳು ನಿಮಗೆ ತೊಂದರೆಗೆ ದೂಡಬಹುದು.
ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–3.

ಮಕ್ಕಳ ಚಿತ್ರ ಕಥೆ


ಚಾಣಕ್ಯ ಹೇಳಿದ್ದು...!
–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199




1. ನಮ್ಮ ಸಮಸ್ಯೆಗಳನ್ನು, ನೋವುಗಳನ್ನು ಮತ್ತೊಬ್ಬರ ಬಳಿ ಹಂಚಿಕೊಳ್ಳಬಾರದು. ಏಕೆಂದರೆ, ಜನ ನಮ್ಮನ್ನು ನೋಡಿ ಗೇಲಿ ಮಾಡಿಕೊಂಡು ನಗುವುದರ ಜೊತೆಗೆ ನಮ್ಮ ದುರ್ಬಲತೆಗಳ ಲಾಭ ಪಡೆದುಕೊಳ್ಳುತ್ತಾರೆ.




2. ಕಾನೂನನ್ನು ಪಾಲಿಸದ, ಮಾನ–ಮರ್ಯಾದೆಗೆ ಹೆದರದ, ತಿಳುವಳಿಕೆ ಇಲ್ಲದ ಜನರಿರುವ ರಾಜ್ಯದಲ್ಲಿ ಬುದ್ಧಿವಂತರು ಯಾವುದೇ ಕಾರಣಕ್ಕೂ ಇರಬಾರದು.




3. ಗಳಿಸುವುದಕ್ಕಿಂತ ಹೆಚ್ಚಾಗಿ ಖರ್ಚು ಮಾಡುವವನ, ತನಗಿಂತ ಶಕ್ತಿಶಾಲಿಯಾಗಿರುವವರ ಜೊತೆ ಕಾಲುಕೆರೆದು ಜಗಳ ಕಾಯುವವನ, ಸ್ತ್ರೀಯರನ್ನು ಕೆಟ್ಟ ದೃಷ್ಟಿಯಿಂದ ನೋಡುವವನ ಅವನತಿಗೆ ಬಹಳ ಸಮಯ ಬೇಕಾಗುವುದಿಲ್ಲ.



4. ಒಬ್ಬ ಆಸೆಬುರುಕನನ್ನು ಹಣ ಕೊಟ್ಟು ಕೈವಶ ಮಾಡಿಕೊಳ್ಳಬಹುದು. ಆದರೆ, ಒಬ್ಬ ಸಜ್ಜನನನ್ನು ಕೈವಶ ಮಾಡಿಕೊಳ್ಳಬೇಕಾದರೆ ಬರೀ ಸತ್ಯವನ್ನೇ ನುಡಿಯಬೇಕಾಗುತ್ತದೆ.



5. ಹೇಗೆ ಒಬ್ಬ ಕುಡುಕನಿಗೆ ಸರಿ–ಕೆಟ್ಟದ್ದು ಗೊತ್ತಾಗುವುದಿಲ್ಲವೋ, ಅದೇ ರೀತಿ ಒಬ್ಬ ಸ್ವಾರ್ಥಿಗೆ ಸರಿ–ಕೆಟ್ಟದ್ದು ಸ್ವಲ್ಪವೂ ಗೊತ್ತಾಗುವುದಿಲ್ಲ.



6. ಪ್ರಾಮಾಣಿಕರಿಗೆ, ಮುಗ್ಧರಿಗೆ ಶಿಕ್ಷೆ ವಿಧಿಸುವ ಮೂಲಕ ನೀವು ಅನಾವಶ್ಯಕವಾಗಿ ಒಬ್ಬ ಶತ್ರುವನ್ನು ಸೃಷ್ಟಿಸಿಕೊಳ್ಳುತ್ತೀರಿ.

ನ.25ರಿಂದ ಮೂರು ದಿನ ಅಪ್ಪು ನಮನ

ಕಾರ್ಯಕ್ರಮ ಯಶಸ್ವಿಗೆ ಶಾಸಕ ಸಿ.ಎಸ್.ಪುಟ್ಟರಾಜು ಮನವಿ





ಪಾಂಡವಪುರ, ನ.12– ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ನವೆಂಬರ್ 25, 26 ಮತ್ತು 27ರಂದು ನಡೆಯುವ 'ಅಪ್ಪು ನಮನ' ಕಾರ್ಯಕ್ರಮ ಯಶಸ್ವಿಗೆ ಪಕ್ಷದ ಕಾರ್ಯಕರ್ತರು, ಅಪ್ಪು ಅಭಿಮಾನಿಗಳು ಸಹಕಾರ ನೀಡಬೇಕು ಎಂದು ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣ ದಲ್ಲಿ ನಡೆದ ಅಪ್ಪು ನಮನ ಕಾರ್ಯಕ್ರಮದ ಪೂರ್ವ ಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಯಾರಿಗಾದರೂ ಒಂದೇ ಕುಟುಂಬದ ಇಬ್ಬರಿಗೆ ಕರ್ನಾಟಕ ರತ್ನ ಪ್ರಶಸ್ತಿ ದೊರೆತಿದೆ ಎಂದರೆ ಅದು ಡಾ.ರಾಜ್‌ಕುಮಾರ್ ಕುಟುಂಬಕ್ಕೆ ಮಾತ್ರ. ಡಾ.ರಾಜ್‌ಕುಮಾರ್ ಅವರಿಗೆ ಮೊದಲು ಕರ್ನಾಟಕ ರತ್ನ ಪ್ರಶಸ್ತಿ ಸಿಕ್ಕರೆ, ಅಪ್ಪು ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ದೊರೆತಿದೆ. ಅಪ್ಪು ಅವರು ಕನ್ನಡ ಚಿತ್ರದಲ್ಲಿ ಅಪಾರ ಜನಪ್ರಿಯತೆ ಗಳಿಸಿದ ನಾಯಕರು. ಅವರ ಅಕಾಲಿಕ ನಿಧನ ನಾಡಿನ ಜನತೆಗೆ ಸಾಕಷ್ಟು ನೋವುಂಟು ಮಾಡಿತು. ಅವರ ನಿಧನದ ಬಳಿಕ ಅವರ ಮಾಡಿದ ಹಲವಾರು ಪುಣ್ಯದ ಕೆಲಸಗಳು ಹೊರ ಬಂದವು. ಅಂತಹ ಮಹಾನ್ ವ್ಯಕ್ತಿಗೆ ನಮನ ಸಲ್ಲಿಸುವ ಉದ್ದೇಶದಿಂದ ಪಾಂಡವಪುರದಲ್ಲಿ ಅಪ್ಪು ನಮನ ಕಾರ್ಯಕ್ರಮ ಆಯೋಜಿಸ ಲಾಗಿದೆ ಎಂದು ತಿಳಿಸಿದರು.

ಮೂರು ದಿನಗಳ ಕಾಲ ನಡೆಯುವ ಅಪ್ಪು ನಮನ ಕಾರ್ಯಕ್ರಮದ ಸಂಪೂರ್ಣ ನಿರ್ವಹಣೆ ಯನ್ನು ಚಿತ್ರ ನಿರ್ದೇಶಕ ಹರ್ಷ ಮಾಡುತ್ತಿದ್ದಾರೆ. ಈಗಾಗಲೇ ಅಪ್ಪು ಕುಟುಂಬದ ಎಲ್ಲರ ಒಪ್ಪಿಗೆ ಪಡೆದುಕೊಂಡಿದ್ದು, ಡಾ.ಶಿವರಾಜ್ ಕುಮಾರ್ ಸೇರಿದಂತೆ ಅವರ ಕುಟುಂಬಸ್ಥರು ಸಹ ಆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಅನನ್ಯಭಟ್, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಗಾಯಕ ವಿಜಯಪ್ರಕಾಶ್ ತಂಡದಿಂದ ಸಂಗೀತ ಕಾರ್ಯಕ್ರಮ, ಜಗ್ಗಪ್ಪ ತಂಡದ ಕಾಮಿಡಿ ಕಾರ್ಯಕ್ರಮ ಹಾಗೂ ರಾಜ್ಯ ಹಲವು ನಟ–ನಟಿಯರಿಂದ ನೃತ್ಯ ಪ್ರದರ್ಶನವು ಸಹ ಇರಲಿದೆ. ಜತೆಗೆ ಇದೇ ಕಾರ್ಯಕ್ರಮದಲ್ಲಿ ಕನ್ನಡ ರಾಜ್ಯೋತ್ಸವ ಪುರಸ್ಕೃತ ಕನಗನ ಮರಡಿ ಪ್ರೊ.ಕೃಷ್ಣೇಗೌಡರಿಗೆ ಅಭಿನಂದನೆ ಸಲ್ಲಿಸಲಾಗುವುದು. ಮೊದಲ ದಿನದ ಕಾರ್ಯ ಕ್ರಮದಲ್ಲಿ ಪಟ್ಟಣದ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಒಂದು ಸಾವಿರ ಹೆಣ್ಣು ಮಕ್ಕಳಿಂದ ಗಾಯನ ಕಾರ್ಯಕ್ರಮ ಹಮ್ಮಿ ಕೊಳ್ಳಲಾಗಿದೆ ಎಂದು ವಿವರಿಸಿದರು.

ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಕ್ಕಾಗಿ ಕೆಲವರು ನನ್ನ ಹಿತೈಷಿಗಳು ಕಾಯುತ್ತಿದ್ದಾರೆ. ತೊಣ್ಣೂರುಕೆರೆ ರಕ್ಷಣೆಗಾಗಿ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿದ್ದೇನೆ. 1996ರಲ್ಲಿ ನಾನು ಶಾಸಕನಾಗುವ ಮೊದಲೇ ಹೇಮಾವತಿ ನೀರು ಅಧಿಕ ಪ್ರಮಾಣದಲ್ಲಿ ಬಂದು ತೊಣ್ಣೂರು ಕೆರೆ ಅಪಾಯಕ್ಕೆ ಸಿಲುಕಿದಾಗ, ಆಗಿನ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ಕರೆತಂದು ತೊಣ್ಣೂರುಕೆರೆ ಕೋಡಿ ರೆಡಿ ಮಾಡಿದೆ. ಇತ್ತೀಚೆಗೆ ಸುರಿದ ಮಳೆಯಿಂದಾಗಿ ತೊಣ್ಣೂರು ಕೆರೆಗೆ ಸಂಗ್ರಹ ಮಟ್ಟಕ್ಕಿಂತ ಅಧಿಕ ನೀರು ಬಂದು ಅಪಾಯದಂಚಿಗೆ ಸಿಲುಕಿದಾಗ ನೀರಾವರಿ ಅಧಿಕಾರಿಗಳು ಅದರ ರಕ್ಷಣೆಗೆ ಕ್ರಮಕೈಗೊಂಡರು. ಆ ವೇಳೆ ಕೆರೆ ಏರಿ ಮೇಲಿದ್ದ ಗಿಡ ತೆರವುಗೊಳಿಸಲು ಮುಂದಾದಾಗ, ಅದೇ ಗ್ರಾಮದ ಕೆಲವರು ರಾಜಕೀಯ ದುರುದ್ದೇಶದಿಂದ ಕೆರೆ ಏರಿ ಕೊರೆಸಲು ಶಾಸಕರೇ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಸುಳ್ಳು ಪ್ರಚಾರ ಮಾಡಿ ಗೊಂದಲ ಸೃಷ್ಟಿ ಮಾಡಿದರು ಎಂದು ಬೇಸರ ವ್ಯಕ್ತಪಡಿಸಿದರು.

ಮೆಡಿಕಲ್ ವಿದ್ಯಾರ್ಥಿನಿಗೆ ನೆರವು: ಬಡ ಕುಟುಂಬದ ತಾಲೂಕಿನ ಬೇಬಿ ಗ್ರಾಮದ ಗಾಯಿತ್ರಿ, ಶ್ರೀನಿವಾಸ್ ಮೂರ್ತಿ ದಂಪತಿ ಪುತ್ರಿ ಸೌಂದರ್ಯ ಎಂಬ ಪ್ರತಿಭಾವಂತ ವಿದ್ಯಾರ್ಥಿನಿ ಸಿಇಟಿಯಲ್ಲಿ ಅಧಿಕ ರ್‍ಯಾಂಕ್ ಪಡೆದು ಬಾಗಲಕೋಟೆ ಕಾಲೇಜಿನಲ್ಲಿ ಉಚಿತ ಮೆಡಿಕಲ್ ಸೀಟ್ ಸಿಕ್ಕರು ಸಹ ಕಾಲೇಜಿನ ಪ್ರವೇಶ ಶುಲ್ಕ ಪಾವತಿಸಲು ಹಣವಿಲ್ಲದೆ ಕಾಲೇಜು ಬಿಡುವ ಸ್ಥಿತಿಯಲ್ಲಿದ್ದಾಗ ಶಾಸಕ ಸಿ.ಎಸ್.ಪುಟ್ಟರಾಜು ವಿದ್ಯಾರ್ಥಿನಿಯ ಶಿಕ್ಷಣ ಮುಗಿಯುವವರೆಗೂ ಕಾಲೇಜು ಶುಲ್ಕ ಪಾವತಿಸುವುದಾಗಿ ಭರವಸೆ ನೀಡುವ ಮೂಲಕ ಎಲ್ಲರ ಪ್ರಶಂಸೆಗೆ ಪಾತ್ರರಾದರು.

ಸಭೆಯಲ್ಲಿ ಜಿಪಂ ಮಾಜಿ ಸ್ಥಾಯಿಸಮಿತಿ ಅಧ್ಯಕ್ಷ ಸಿ.ಅಶೋಕ್, ಜೆಡಿಎಸ್ ಪ್ರಭಾರ ಅಧ್ಯಕ್ಷ ಎಸ್.ಎ.ಮಲ್ಲೇಶ್, ಮನ್‌ಮುಲ್ ಅಧ್ಯಕ್ಷ ರಾಮಚಂದ್ರು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಯಶ್ವಂತ್‌ಕುಮಾರ್, ಪುರಸಭೆ ಅಧ್ಯಕ್ಷೆ ಅರ್ಚನಾ ಚಂದ್ರು, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಗುರುಸ್ವಾಮಿ, ಜಿಪಂ ಮಾಜಿ ಸದಸ್ಯ ಎಚ್.ಎಲ್. ಶಿವಣ್ಣ, ಮುಖಂಡರಾದ ಎಚ್.ಎಲ್. ನಂಜೇಗೌಡ, ಪಿ.ಎಸ್.ಲಿಂಗರಾಜು, ದ್ಯಾವಪ್ಪ, ಎಸ್ಸಿಎಸ್ಟಿ ವಿಭಾಗದ ಅಧ್ಯಕ್ಷ ಬೊಮ್ಮರಾಜು ಸೇರಿದಂತೆ ಹಲವರು ಹಾಜರಿದ್ದರು.

ರಾಮಾನುಜಾಚಾರ್ಯರಿಗೆ ವಿಶೇಷ ಪೂಜೆ

ಮೇಲುಕೋಟೆ, ನ.12– ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ರಾಮಾನುಜಾಚಾರ್ಯರಿಗೆ ಕಾರ್ತೀಕ ಮಾಸದ ಆರಿದ್ರಾ ನಕ್ಷತ್ರ ಮಹೋತ್ಸವ ವೈಭವದಿಂದ ನೆರವೇರಿತು. ಮೂರು ದಿನಗಳ ಕಾಲ ಸತತ ಸರ್ಕಾರಿ ರಜೆ ಇರುವ ಕಾರಣ ಮೇಲುಕೋಟೆಗೆ ಭಕ್ತಸಾಗರವೇ ಹರಿದು ಬಂದಿತ್ತು.



ಆರಿದ್ರಾ ನಕ್ಷತ್ರದ ನಿಮಿತ್ತ ಭಗವದ್ರಾಮಾನುಜಾಚಾರ್ಯರಿಗೆ ವೇದಮಂತ್ರ ಮತ್ತು ಮಂಗಳ ವಾದ್ಯದೊಂದಿಗೆ ಅಭಿಷೇಕ ನೆರವೇರಿತು. ಹಾಲು, ಜೇನು, ಮೊಸರು ಮುಂತಾದ ಮಂಗಳ ದ್ರವ್ಯಗಳಿಂದ ನಡೆದ ಅಭಿಷೇಕದ ವೈಭವವನ್ನು ನೂರಾರು ಭಕ್ತರು ಕಣ್ತುಂಬಿ ಕೊಂಡರು. ನಂತರ ಆಚಾರ್ಯರನ್ನು ಸಿಂಹಾಸನದಲ್ಲಿ ಅಲಂಕರಿಸಿ ದಿವ್ಯ ಪ್ರಬಂಧಗೋಷ್ಠಿ ನೆರವೇರಿಸಿ ಸಂಜೆ ಬೆಳ್ಳಿಯ ಪಲ್ಲಕ್ಕಿ ಉತ್ಸವವನ್ನು ನೆರವೇರಿಸಲಾಯಿತು. ಅರ್ಚಕರಾದ ವಿದ್ವಾನ್ ಬಿ.ವಿ.ಆನಂದಾಳ್ವಾರ್ ಅಭಿಷೇಕದ ವಿದಿವಿಧಾನಗಳನ್ನು ನೆರವೇರಿಸಿದರು. ಬೆಳಗ್ಗೆಯಿಂದಲೇ ಸಹಸ್ರಾರು ಸಂಖ್ಯೆಯಲ್ಲಿ ಮೇಲುಕೋಟೆಗೆ ಆಗಮಿಸಿದ ಭಕ್ತರು ಚೆಲುವನಾರಾಯಣಸ್ವಾಮಿ ಮತ್ತು ಯೋಗನರಸಿಂಹಸ್ವಾಮಿ ದೇವಾಲಯಗಳ ಮುಂದೆ ಸಾಲುಗಟ್ಟಿದ್ದರು. ಪ್ರವಾಸಿಗರ ವಾಹನದಟ್ಟಣೆ ಹೆಚ್ಚಾದ ಕಾರಣ ದೇವಾಲಯದ ಬಳಿಗೆ ಭಕ್ತರ ವಾಹನಗಳು ಹೋಗದಂತೆ ತಡೆದ ಪೊಲೀಸರು, ಮುಂಭಾಗದ ಮೈದಾನದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿದ್ದರು.

ರಾಮಮಂದಿರದ ಕಟ್ಟಡ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ



ಶ್ರೀರಂಗಪಟ್ಟಣ, ನ.12– ಪಟ್ಟಣ ಪುರಸಭಾ ವ್ಯಾಪ್ತಿಯ 1ನೇ ವಾರ್ಡ್‌ನ ರಂಗನಾಥ ನಗರದಲ್ಲಿರುವ ರಾಮಮಂದಿರದ ಮೇಲಂತಸ್ತಿನ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ರವೀಂದ್ರ ಶ್ರೀಕಂಠಯ್ಯ ಗುರುವಾರ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಹಾಗೂ 1ನೇ ವಾರ್ಡ್ ಸದಸ್ಯ ಶ್ರೀನಿವಾಸ್ ಮಾತನಾಡಿ, ಜನಾಂಗದ ರಾಮಮಂದಿರ ಕಟ್ಟಡದ ಮೇಲಂತಸ್ತು ಹಾಗೂ ಭಾವಣಿ ನಿರ್ಮಾಣಕ್ಕೆ ಶಾಸಕರ ಬಳಿ ಮನವಿ ಸಲ್ಲಿಸಿದ್ದು, ತಕ್ಷಣ ಸ್ಪಂದಿಸಿ ತಮ್ಮ ಅನುದಾನದಿಂದ 5 ಲಕ್ಷ ರೂ. ನೀಡಿದ್ದಾರೆ ಎಂದರಲ್ಲದೆ, ತಮ್ಮ ವಾರ್ಡ್‌ನಲ್ಲಿ ಸುಮಾರು 80 ಲಕ್ಷದಿಂದ 1 ಕೋಟಿ ರೂ.ಗಳಷ್ಟು ವಿವಿಧ ಕಾಮಗಾರಿಗಳನ್ನು ಅಭಿವೃದ್ಧಿ ನಡೆಸಿದ್ದೇನೆ. ಇನ್ನು ಕೇವಲ ನಗರೋತ್ಥಾನದ ಕೆಲಸಗಳು ಬಾಕಿ ಇದ್ದು ಮುಂದಿನ ದಿನಗಳಲ್ಲಿ ಅದು ಸಹ ನೆರವೇರಲಿದೆ ಎಂದರು.

ಈ ವೇಳೆ ಪುರಸಭೆ ಉಪಾಧ್ಯಕ್ಷ ಗಂಜಾಂ ಕೃಷ್ಣಪ್ಪ, ಸದಸ್ಯರಾದ ಎಸ್.ಟಿ. ರಾಜು, ರವಿ, ಗಂಜಾಂ ಶಿವು, ನಿಂಗರಾಜು, ನರಸಿಂಹೇಗೌಡ ಸೇರಿದಂತೆ ಇತರರು ಇದ್ದರು.

ಎ.ಎಸ್.ಮಹೇಶ್ ನಿಧನ



ಕೆ.ಆರ್.ಪೇಟೆ, ನ.12– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ಜಮೀನ್ದಾರ್ ಸುಬ್ಬೇಗೌಡರ (ಕಾಮನಹಳ್ಳಿ ಸುಬ್ಬೇಗೌಡ್ರು) ಮಗ ಜಮೀನ್ದಾರ್ ಎ.ಎಸ್.ಮಹೇಶ್(57) ಇಂದು ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ, ಸಹೋದರರು, ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ನಡೆಯಿತು. ಮೃತರಿಗೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಗುಣಮಟ್ಟದ ಕಾಮಗಾರಿಗೆ ಆದ್ಯತೆ



ನಾಗಮಂಗಲ, ನ.12– ಕಾಮಗಾರಿಯ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲವೆಂದು ಶಾಸಕ ಸುರೇಶ್ ಗೌಡ ತಿಳಿಸಿದರು. ಅವರು ಹೊಣಕೆರೆ ಹೋಬಳಿಯ ಬಂಕಾಪುರ ಗ್ರಾಮದಲ್ಲಿ ನಿರ್ಮಿತಿ ಕೇಂದ್ರದಿಂದ ಕೈಗೆತ್ತಿಕೊಂಡಿರುವ 25 ಲಕ್ಷ ರೂ.ಗಳ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡುತ್ತಿದ್ದರು.

ಹಲವಾರು ವರ್ಷಗಳಿಂದ ಈ ಭಾಗದ ರಸ್ತೆಗಳಲ್ಲಿ ಓಡಾಡಲು ಸಾಧ್ಯವಾಗುತ್ತಿಲ್ಲವೆಂಬ ದೂರಿನ ಮೇರೆಗೆ ದುರಸ್ತಿ ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ. ಗ್ರಾಮಸ್ಥರು ಮುಂದೆ ನಿಂತು ಗುಣಮಟ್ಟದ ಕಾಮಗಾರಿಯನ್ನು ಗುತ್ತಿಗೆದಾರರಿಂದ ಮಾಡಿಸಿಕೊಳ್ಳಬೇಕು ಎಂದು ಹೇಳಿದರಲ್ಲದೆ ಗ್ರಾಮದಲ್ಲಿ ನಡೆದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಈ ವೇಳೆ ಅಂಬರೀಷ್(ಅಂಬಿ) ಕುಳ್ಳೇಗೌಡ, ಮುಖಂಡರಾದ ರಾಮು ಸೇರಿದಂತೆ ಹಲವಾರು ಮುಖಂಡರು ಪಾಲ್ಗೊಂಡಿದ್ದರು.

ಮುಂದಿನ ಚುನಾವಣೆಯಲ್ಲಿ ನಾನು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ



ಕೆ.ಆರ್.ಪೇಟೆ,ನ.12– ಕಳೆದ 40 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ, ತಾಲೂಕು ಕಾಂಗ್ರೆಸ್ ಅಧ್ಯಕ್ಷನಾಗಿ ದುಡಿದಿದ್ದೇನೆ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ ಎಂದು ಕೆಯುಐಡಿಎಫ್‌ಸಿ ನಿಗಮ ಮಾಜಿ ರಾಜ್ಯಾಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ ತಿಳಿಸಿದರು.

ಅವರು ಪಟ್ಟಣದ ಸುಲೋಚನಮ್ಮ–ರಾಮದಾಸ್ ಸಭಾಂಗಣದಲ್ಲಿ ಆಯೋಜಿಸಿದ್ದ ತಮ್ಮ ಅಭಿಮಾನಿಗಳ ಸಭೆಯಲ್ಲಿ ಮಾತನಾಡಿ, ಕಳೆದ 40 ವರ್ಷಗಳಿಂದ ಕಾಂಗ್ರೆಸ್ ಪಕ್ಷಕ್ಕೆ ಸೇವೆ ಸಲ್ಲಿಸಿದ್ದು, 1998ರಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷನಾಗಿ, ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ, ಕೆಆರ್.ಪೇಟೆ ತಾಲೂಕು ಕಾಂಗ್ರೆಸ್ ಅಧ್ಯಕ್ಷನಾಗಿಯೂ ಸೇವೆ ಸಲ್ಲಿಸಿದ್ದೇನೆ.

ಸಿದ್ದರಾಮಯ್ಯ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಭಾರತ ಆಹಾರ ನಿಗಮದ ರಾಜ್ಯ ಸಲಹಾ ಸಮಿತಿ ಸದಸ್ಯನಾಗಿ, ಕೆಆರ್‌ಐಡಿಎಲ್ ನಿರ್ದೇಶಕನಾಗಿ ಸೇವೆ ಸಲ್ಲಿಸಿದ್ದೇನೆ. ಈ ಅವಧಿಯಲ್ಲಿ ಕೆ.ಆರ್.ಪೇಟೆ ಪಟ್ಟಣಕ್ಕೆ ಹೇಮಾವತಿ ನದಿಯಿಂದ 27 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರು ಯೋಜನೆ, 12 ಕೋಟಿ ವೆಚ್ಚದಲ್ಲಿ ಪಟ್ಟಣದ ಒಳಚರಂಡಿ ಯೋಜನೆ ಹಾಗೂ ಕೆ.ಆರ್.ಪೇಟೆ ಪುರಸಭೆ ವತಿಯಿಂದ ಕಾಂಪ್ಲೆಕ್ಸ್ ನಿರ್ಮಾಣಕ್ಕೆ 6 ಕೋಟಿ ರೂ. ವಿಶೇಷ ಅನುದಾನವನ್ನು ಬಿಡುಗಡೆ ಮಾಡಿಸಿರುವುದು ನನ್ನ ಹೆಮ್ಮೆ ಎಂದರು.

ಸಭೆಯಲ್ಲಿ ಜಿಪಂ ಮಾಜಿ ಸದಸ್ಯ ಕೋಡಿಮಾರನಹಳ್ಳಿ ದೇವರಾಜು, ಪಿ.ಎಲ್.ಡಿ. ಬ್ಯಾಂಕ್ ಮಾಜಿ ಅಧ್ಯಕ್ಷ ಅಗಸರಹಳ್ಳಿ ಗೋವಿಂದರಾಜು, ಜಿಲ್ಲಾ ಕುರುಬರ ಸಂಘದ ನಿರ್ದೇಶಕ ಎಂ.ಜೆ.ಶಶಿಧರ್, ಜಿಲ್ಲಾ ಕಾಂಗ್ರೆಸ್ ವಕ್ತಾರರಾದ ಮಾದಾಪುರ ಡಾ.ರಾಮಕೃಷ್ಣೇಗೌಡ, ನಿವೃತ್ತ ಪ್ರಾಂಶುಪಾಲ ಜಾನೇಗೌಡ್ರು, ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಅಕ್ಕಿಹೆಬ್ಬಾಳು ದಿವಾಕರ್, ತಾಲೂಕು ಕೃಷಿಕ ಸಮಾಜದ ಮಾಜಿ ಅಧ್ಯಕ್ಷ ಹೆತ್ತಗೋನಹಳ್ಳಿ ನಾರಾಯಣಗೌಡ, ತಾಲೂಕು ಕಾಂಗ್ರೆಸ್ ಸೇವಾ ದಳದ ಅಧ್ಯಕ್ಷ ಸಾಕ್ಷಿಬೀಡು ಶ್ರೀನಿವಾಸ್, ಟೌನ್ ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಆಯಾಜ್, ಹಾಫೀಜುಲ್ಲಾ ಷರೀಫ್, ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಮೈಸೂರು ಕೈಗಾರಿಕಾ ಪಟ್ಟಣ ಪ್ರಾಧಿಕಾರ ರಚನೆಯೂ ಸೇರಿದಂತೆ ವಿವಿಧ ಬೇಡಿಕೆ ಈಡೇರದಿದ್ದರೆ ಕರ ನಿರಾಕರಣೆ ಚಳವಳಿ

- ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಿಗಳ ಪರಿಷತ್‌ನ ಪ್ರದಾನ ಕಾರ್ಯದರ್ಶಿ ಸುರೇಶ್ ಕುಮಾರ್‌ಜೈನ್ ಎಚ್ಚರಿಕೆ
- ಈ ಸಂಬಂಧ ಸಿಎಂಗೆ ಪತ್ರ

ಮೈಸೂರು, ನ.12(ಜಿಎ)– ಮೈಸೂರು ಕೈಗಾರಿಕಾ ಪಟ್ಟಣ ಪ್ರಾಧಿಕಾರ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸದಿದ್ದರೆ, ಮೈಸೂರು ಕೈಗಾರಿಕೆಗಳಿಂದ ಕರ(ಆಸ್ತಿ ತೆರಿಗೆ) ನಿರಾಕರಣೆ ಚಳುವಳಿ ಮಾಡಲಿದ್ದೇವೆ ಎಂದು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಿಗಳ ಪರಿಷತ್‌ನ ಪ್ರದಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬರೆದಿರುವ ಪತ್ರದಲ್ಲಿ ಕೈಗಾರಿಕೆಗಳಿಗೆ ನಾಗರಿಕ ಸೌಲಭ್ಯ ನೀಡದಿರುವುದು, ಮೈಸೂರು ಮಹಾನಗರ ಪಾಲಿಕೆ ಅವೈಜ್ಞಾನಿಕವಾಗಿ ಹೆಚ್ಚು ತೆರಿಗೆ ವಸೂಲಿ, ಹೂಟಗಳ್ಳಿ ನಗರಸಭೆ ಮತ್ತು ಇತರ ಗ್ರಾಮ ಪಂಚಾಯಿತಿ ವ್ಯಾಪ್ತಿಯಿಂದ ಕೈಗಾರಿಕಾ ಪ್ರದೇಶ ಹೊರಗಿಡುವಂತೆ ಆಗ್ರಹಿಸಿ ಮತ್ತು ಮೈಸೂರು ಕೈಗಾರಿಕಾ ಪಟ್ಟಣ ಪ್ರಾಧಿಕಾರ ರಚಿಸುವಂತೆ ಕರ ನಿರಾಕರಣೆ ಚಳವಳಿಗೆ ಮುಂದಾಗಿದ್ದೇವೆ ಎಂದು ತಿಳಿಸಿದ್ದಾರೆ.

ಮೈಸೂರು ಕೈಗಾರಿಕಾ ಪಟ್ಟಣ ಪ್ರಾಧಿಕಾರ ರಚನೆಗೆ ಆದೇಶ ಹೊರಡಿಸಿ, ಅಧ್ಯಕ್ಷರು, ಆಯುಕ್ತರು ಮತ್ತು ಸಿಬ್ಬಂದಿಯನ್ನು ನಿಯೋಜಿಸಿ ಪ್ರಾರಂಭಿಕವಾಗಿ 50 ಕೋಟಿ ಬಿಡುಗಡೆ ಮಾಡಬೇಕು. 2020–2025ರ ಕೈಗಾರಿಕಾ ನೀತಿ ಮತ್ತು 2021–22ರ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ನಮ್ಮ ಮನವಿ ಮೇರೆಗೆ ಮೈಸೂರು ಒಳಗೊಂಡಂತೆ ರಾಜ್ಯದ ಇತರ ಆಯ್ದ ಕೆಲವು ಕೈಗಾರಿಕಾ ಪಟ್ಟಣ ಪ್ರಾಧಿಕಾರ ರಚನೆ ಮಾಡುವುದಾಗಿ ಪ್ರಕಟಿಸಲಾಗಿದೆ. ಪ್ರಸ್ತುತ ಕೈಗಾರಿಕೆಗಳು ಹೂಟಗಳ್ಳಿ ನಗರಸಭೆಗೆ ಕೆಐಎಡಿಬಿಗೆ ಪಾವತಿಸುತ್ತಿರುವ ನಿರ್ವಹಣಾ ಶುಲ್ಕಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಸ್ತಿ ತೆರಿಗೆ ಪಾವತಿಸುತ್ತಿದ್ದು, ಮೂಲ ಸೌಲಭ್ಯಗಳ ಸೇವೆಯು ಶೂನ್ಯವಾಗಿದೆ ಎಂದು ತಿಳಿಸಿದ್ದಾರೆ



ಸುರೇಶ್ ಕುಮಾರ್‌ಜೈನ್

ಒಂದೂವರೆ ವರ್ಷದ ಅವಧಿಯಲ್ಲಿ 35 ಕೋಟಿಗೂ ಹೆಚ್ಚು ತೆರಿಗೆಯನ್ನು ಕೈಗಾರಿಕೆಗಳು ಹೂಟಗಳ್ಳಿ ನಗರ ಸಭೆಗೆ ಪಾವತಿಸಿದೆ. ಆದರೂ ಈಗಲೂ ಕೆಐಎಡಿಬಿಯಿಂದ ಬೀದಿದೀಪದ ವಿದ್ಯುತ್ ಶುಲ್ಕ ಪಾವತಿ ಕೈಗಾರಿಕಾ ಪ್ರದೇ ಶದ ನಿರ್ವಹಣೆ ನಡೆಯುತ್ತಿದೆ. ಕೆಐಎಡಿಬಿಗೆ ಎಕರೆಗೆ 4 ಸಾವಿರ ರೂ. ನಿರ್ವಹಣಾ ಶುಲ್ಕ ಪಾವತಿಸುತ್ತಿದ್ದೇವೆ. ಕಟ್ಟಡ ನಿರ್ಮಾಣ ನಕ್ಷೆ ಅನುಮೋದನೆಯನ್ನು ಕೆಐಎಡಿಬಿಯಿಂದ ಪಡೆದರೂ ಕಟ್ಟಡ ನಿರ್ಮಾಣ ಪರವಾನಗಿಯನ್ನು ನಗರ ಸಭೆಯಿಂದ ಪಡೆಯಬೇಕಿದೆ. ಘನ ತ್ಯಾಜ್ಯ ವಿಲೇವಾರಿಗೆ ಕೈಗಾರಿಕಾ ಪ್ರದೇಶದಲ್ಲಿ ನಗರಸಭೆಗೆ ನಿವೇಶನ ನೀಡಿದ್ದರೂ ಅಲ್ಲಿ ಕೈಗಾರಿಕಾ ತ್ಯಾಜ್ಯವನ್ನು ಹಾಕಲು ಅವಕಾಶ ನೀಡುತ್ತಿಲ್ಲ. ಬದಲಿಗೆ ಹೋಟೆಲ್ ಮತ್ತು ಮನೆಗಳ ತ್ಯಾಜ್ಯವನ್ನು ಸಂಗ್ರಹಿಸಲಾಗುತ್ತಿದೆ ಈ ಎಲ್ಲಾ ಸಮಸ್ಯೆ ಗಳನ್ನು ಬಗೆಹರಿಸಿ ಬೇಡಿಕೆಗಳನ್ನು ಈಡೇರಿಸದಿದ್ದರೆ, ಮೈಸೂರು ಕೈಗಾರಿಕೆಗಳಿಂದ ಕರ(ಆಸ್ತಿ ತೆರಿಗೆ) ನಿರಾಕರಣೆ ಚಳುವಳಿ ಮಾಡಲಿದ್ದೇವೆ ಎಂದು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ತ್ರಿನೇತ್ರ ಸರ್ಕಲ್‌ನಿಂದ ವಿಜಯನಗರ ಹೈಟೆನ್ಷನ್ ರಸ್ತೆ ಅಭಿವೃದ್ಧಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ



ಮೈಸೂರು,ನ.12–ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿಜಯನಗರ ಹೈಟೆನ್ಷನ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶನಿವಾರ ಚಾಲನೆ ನೀಡಿದರು.

ಗೋಕುಲಂ 3ನೇ ಹಂತದ ತ್ರಿನೇತ್ರ ಸರ್ಕಲ್‌ನಿಂದ ವಿಜಯನಗರ 2ನೇ ಹಂತ ವಾಟರ್ ಟ್ಯಾಂಕ್‌ವರೆಗೆ 3 ಕೋಟಿ ರೂ. ಅಂದಾಜು ಮೊತ್ತದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದ್ದು, ಇಲ್ಲಿನ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಬಳಿ ಶಾಸಕ ಎಲ್.ನಾಗೇಂದ್ರ ಅವರು ಸ್ಥಳೀಯ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಅವರೊಂದಿಗೆ ಶನಿವಾರ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಕುಮಾರ್‌ಗೌಡ, ದಿನೇಶ್‌ಗೌಡ ಸೇರಿದಂತೆ ಬಿಜೆಪಿ ಮುಖಂಡರು, ಸ್ಥಳೀಯರು, ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

ವಿವಿಧ ಬಡಾವಣೆಗಳನ್ನು ಸಂಪರ್ಕಿಸುವ ಪ್ರಮುಖ ರಸ್ತೆ ಇದಾಗಿದೆ. ಅಲ್ಲದೆ ಈ ಭಾಗದಲ್ಲಿ ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಕಚೇರಿಗಳು ಹೆಚ್ಚಿರುವ ಕಾರಣ ನಿರಂತರ ವಾಹನ ಸಂಚಾರವಿರುತ್ತದೆ. ಆದರೆ ಕಾರಣಾಂತರಗಳಿಂದ ಹಲವು ವರ್ಷಗಳಿಂದ ಈ ರಸ್ತೆಗೆ ಅಭಿವೃದ್ಧಿ ಭಾಗ್ಯ ದೊರೆತಿರಲಿಲ್ಲ. ಸದ್ಯ 3 ಕೋಟಿ ರೂ. ವೆಚ್ಚದ ಕಾಮಗಾರಿಗೆ ಚಾಲನೆ ದೊರೆತಿದ್ದು ಈ ಭಾಗದ ಜನರಲ್ಲಿ ಸಂತಸ ಮೂಡಿಸಿದೆ.

ಹ್ಯಾಮ್‌ಫೆಸ್ಟ್ ಇಂಡಿಯಾ ಸಮಾವೇಶಕ್ಕೆ ಚಾಲನೆ

ಮೈಸೂರು,ನ.12(ಜಿಎ)–ಮೈಸೂರಿನ ಎನ್‌ಐಇ ಕಾಲೇಜಿನ ಡೈಮಂಡ್ ಜ್ಯೂಬಿಲಿ ಒಳ ಕ್ರೀಡಾಂಗಣದಲ್ಲಿ ಭಾರತದ ಹವ್ಯಾಸಿ ರೇಡಿಯೋ ಆಪರೇಟರ್‌ಗಳಿಗಾಗಿ ಆಯೋಜಿಸಿರುವ ಎರಡು ದಿನದ 'ಹ್ಯಾಮ್‌ಫೆಸ್ಟ್ ಇಂಡಿಯಾ' ಸಮಾವೇಶಕ್ಕೆ ನ್ಯಾಯಾಮೂರ್ತಿ ಪ್ರಭಾಕರ ಶಾಸ್ತ್ರಿ ಶನಿವಾರ ಚಾಲನೆ ನೀಡಿದರು.

ಈ 2 ದಿನಗಳ ಸಮಾವೇಶದಲ್ಲಿ ರೇಡಿಯೋ ತಂತ್ರಜ್ಞಾನ, ಆಂಟೆನಾ, ತುರ್ತು ಪರಿಸ್ಥಿತಿಯಲ್ಲಿ ಸಂಪರ್ಕ ನಿರ್ವಹಣೆ ಸೇರಿದಂತೆ ಇತರ ತಂತ್ರಜ್ಞಾನ ವಿಷಯಗಳ ಚರ್ಚೆ ಮತ್ತು ಭಾರತದ ಪ್ರತಿಷ್ಠಿತ ರೇಡಿಯೋ ಉದ್ಯಮಿಗಳು ತಮ್ಮ ಸಂಸ್ಥೆಗಳ ಉತ್ಪನ್ನಗಳನ್ನು ಪ್ರದರ್ಶನಕ್ಕೆ ಏರ್ಪಡಿಸಲಾಗಿದ್ದು, ದೇಶದ ವಿವಿಧ ಭಾಗಗಳಿದ 700ಕ್ಕೂ ಅಧಿಕ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗ ವಹಿಸಿದ್ದರು. 'ಹ್ಯಾಮ್‌ಫೆಸ್ಟ್ ಇಂಡಿಯಾ' ಸಮಾವೇಶಕ್ಕೆ ಚಾಲನೆ ನೀಡಿ ಮಾತನಾಡಿದ ನ್ಯಾಯಮೂರ್ತಿ ಡಾ.ಜಸ್ಟೀಸ್ ಪ್ರಭಾಕರ ಶಾಸ್ತ್ರಿ, ನೂತನ ಶಿಕ್ಷಣ ನೀತಿಯಡಿ ಭಾರತದ ಪ್ರತಿಯೊಂದು ಶಾಲೆಗಳಲ್ಲೂ ಹವ್ಯಾಸಿ ರೇಡಿಯೋಗಳನ್ನು ಅಳವಡಿಸಬೇಕು ಹಾಗೂ ಮಲ್ಟಿಸ್ಟೋರೇಜ್ ಕಟ್ಟಡಗಳ ಮೇಲೆ ಆಂಟೆನಾಗಳನ್ನು ಅಳವಡಿಸಲು ವೈರ್‌ಲೆಸ್ ಯೋಜನೆ ಮತ್ತು ಸಮನ್ವಯ ಸಂಸ್ಥೆಯು ಗಮನ ಹರಿಸಬೇಕು. ಈ ಸಂಬಂಧ ಎಲ್ಲರೂ ಸರ್ಕಾರಕ್ಕೆ ಮನವಿ ಮಾಡಿ. ನಾನು ಸಹ ಸರ್ಕಾರದ ಗಮನಕ್ಕೆ ತರುತ್ತೇನೆ. ಇದಕ್ಕೆ ತಕ್ಕಂತೆ ಶಿಕ್ಷಕರು ವೈಜ್ಞಾನಿಕ ವೃತ್ತಿ ಶಿಕ್ಷಣವನ್ನು ವೃದ್ಧಿಸಿಕೊಳ್ಳಬೇಕಿದೆ ಎಂದರು. 'ಹ್ಯಾಮ್‌ಫೆಸ್ಟ್' ಸಮಾವೇಶದಲ್ಲಿ ದೇಶದ ವಿವಿಧ ರೇಡಿಯೋ ಸಂಸ್ಥೆಗಳು ಪ್ರದರ್ಶನ, ಮಾರಾಟ ಮತ್ತು ರೀಪೇರಿಗಳನ್ನು ಮಾಡುತ್ತಿದ್ದು, ರೇಡಿಯೋ ತಂತ್ರಜ್ಞಾನ, ಆಂಟೆನಾ, ತುರ್ತು ಪರಿಸ್ಥಿತಿಯಲ್ಲಿ ಸಂಪರ್ಕ ನಿರ್ವಹಣೆ ಬಗ್ಗೆ ಜನರಿಗೆ ಅರಿವು ಮೂಡಿಸುವ ಕಾರ್ಯಕ್ಕೆ ಮುಂದಾಗಿದ್ದು, ಎಲ್ಲರ ಗಮನ ಸೆಳೆಯುತ್ತಿದೆ. ಎನ್‌ಐಇ ಆಡಳಿತ ಮಂಡಳಿ ಅಧ್ಯಕ್ಷ ಡಾ.ರಂಗನಾಥ್, ಶಂಕರ್‌ಪ್ರಸಾದ್ ಇದ್ದರು.

ರಾಜೀವ್ ಗಾಂಧಿ ಹತ್ಯೆ ಪ್ರಕರಣ

ನಳಿನಿ ಶ್ರೀಹರನ್ ಇತರ ನಾಲ್ವರು ಅಪರಾಧಿಗಳು ಜೈಲಿನಿಂದ ಬಿಡುಗಡೆ

ಚೆನ್ನೈ: ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಅಪರಾಧಿಗಳಾದ ನಳಿನಿ ಶ್ರೀಹರನ್, ಅವರ ಪತಿ ಮತ್ತು ಇತರ ಮೂವರು ಅಪರಾದಿಗಳನ್ನು ಶನಿವಾರ ಸಂಜೆ ತಮಿಳುನಾಡು ಜೈಲಿನಿಂದ ಬಿಡುಗಡೆ ಮಾಡಲಾಗಿದೆ.

ನಳಿನಿ ಶ್ರೀಹರನ್ ಇಂದು ಸಂಜೆ ವೆಲ್ಲೂರಿನ ಮಹಿಳಾ ವಿಶೇಷ ಕಾರಾಗೃಹದಿಂದ ಬಿಡುಗಡೆಯಾದ ತಕ್ಷಣ ವೆಲ್ಲೂರು ಕೇಂದ್ರ ಕಾರಾಗೃಹಕ್ಕೆ ತೆರಳಿದರು. ಅಲ್ಲಿ ಪತಿ ವಿ ಶ್ರೀಹರನ್ ಅಲಿಯಾಸ್ ಮುರುಗನ್ ಬಿಡುಗಡೆಗೊಂಡಿದ್ದು, ಆತನನ್ನು ನೋಡಿ ಭಾವುಕರಾದರು. ಶ್ರೀಲಂಕಾದ ಪ್ರಜೆಗಳಾದ ಸಂತಾನ್ ಮತ್ತು ಮುರುಗನ್ ಅವರನ್ನು ಜೈಲಿನಿಂದ ಬಿಡುಗಡೆ ಮಾಡಿದ ನಂತರ ರಾಜ್ಯದ ತಿರುಚಿರಾಪಳ್ಳಿಯಲ್ಲಿರುವ ವಿಶೇಷ ನಿರಾಶ್ರಿತರ ಶಿಬಿರಕ್ಕೆ ಪೊಲೀಸ್ ವಾಹನದಲ್ಲಿ ಕರೆದೊಯ್ಯಲಾಯಿತು.

ಸುದೀರ್ಘ ಕಾನೂನು ಹೋರಾಟದ ನಂತರ ರಾಜೀವ್ ಗಾಂಧಿ ಹಂತಕರನ್ನು ಬಿಡುಗಡೆ ಮಾಡುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಆದೇಶ ನೀಡಿತ್ತು.

ತಮ್ಮನ್ನು ಜೈಲಿನಿಂದ ಬಿಡುಗಡೆ ಮಾಡಬೇಕೆಂದು ಕೋರಿ ರಾಜೀವ್ ಗಾಂಧಿ ಹಂತಕರು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಗೆ ತಮಿಳುನಾಡು ಸರ್ಕಾರ ಬೆಂಬಲ ನೀಡಿತ್ತು.

ಡಾ. ಎಸ್.ಎಲ್.ಭೈರಪ್ಪ, ಪ್ರೊ. ಕೆ.ಎಸ್.ರಂಗಪ್ಪ, ಪ್ರೊ. ಎಸ್.ಸಡಗೋಪನ್ ಅವರಿಗೆ ಮೈಸೂರು ವಿವಿಯಿಂದ ಭಾರತ ರತ್ನ ಶತಮಾನೋತ್ಸವ ಪದವಿ

ಮೈಸೂರು, ನ.12 (ಎಂಕೆ)– ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ ಹಾಗೂ ಬೆಂಗಳೂರಿನ ಐಐಐಟಿ ಸಂಸ್ಥಾಪಕ ಪ್ರೊ.ಎಸ್.ಸಡಗೋಪನ್ ಅವರಿಗೆ ಮೈಸೂರು ವಿಶ್ವವಿದ್ಯಾಲಯದ ವತಿಯಿಂದ 'ಭಾರತ ರತ್ನ ಶತಮಾನೋತ್ಸವ ಪದವಿ' ನೀಡಲು ನಿರ್ಧರಿಸಲಾಗಿದೆ. 2016ರಲ್ಲಿ ಶತಮಾನೋತ್ಸವ ಆಚರಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯ, ಇದರ ಸವಿನೆನಪಿಗಾಗಿ ವಿಜ್ಞಾನ, ತಂತ್ರಜ್ಞಾನ ಹಾಗೂ ಸಾಮಾಜಿಕ ವಿಜ್ಞಾನದಲ್ಲಿ ಖ್ಯಾತರಾಗಿರುವಂತಹ ಮಹನೀಯರುಗಳಿಗೆ ಮೈಸೂರು ವಿಶ್ವವಿದ್ಯಾನಿಲಯ ಭಾರತ ರತ್ನ ಶತಮಾನೋತ್ಸವ ಪದವಿಯನ್ನು ನೀಡುತ್ತಿದೆ.

ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಅವರಿಗೆ ಭಾರತ ರತ್ನ ಡಾ.ಎಸ್.ರಾಧಾಕೃಷ್ಣನ್ ಸಾಮಾಜಿಕ ವಿಜ್ಞಾನ ಶತಮಾನೋತ್ಸವ ಪದವಿ, ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.



ಎಸ್.ಎಲ್.ಭೈರಪ್ಪ



ಕೆ.ಎಸ್.ರಂಗಪ್ಪ



ಎಸ್.ಸಡಗೋಪನ್

ರಂಗಪ್ಪ ಅವರಿಗೆ ಭಾರತ ರತ್ನ ಪ್ರೊ.ಸಿ.ಎನ್.ಆರ್.ರಾವ್ ವಿಜ್ಞಾನ ಶತಮಾನೋತ್ಸವ ಪದವಿ ಹಾಗೂ ಬೆಂಗಳೂರಿನ ಐಐಐಟಿ ಸಂಸ್ಥಾಪಕ ಪ್ರೊ.ಎಸ್.ಸಡಗೋಪನ್ ಅವರಿಗೆ ಸರ್ ಎಂ. ವಿಶ್ವೇಶ್ವರಯ್ಯ ನಾವೀನ್ಯ ತಂತ್ರಜ್ಞಾನ ಶತಮಾನೋತ್ಸವ ಪದವಿ ನೀಡಲು ನಿರ್ಧರಿಸಲಾಗಿದೆ.


ವಿವಿಧ ತಳಿಯ 60ಕ್ಕೂ ಹೆಚ್ಚು ಶ್ವಾನಗಳಿಗೆ ಮೈಕ್ರೋಚಿಪ್ ಅಳವಡಿಕೆ

ಮೈಸೂರು, ನ.12(ಎಂಟಿವೈ)– ಕೆನ್ನೈನ್ ಕ್ಲಬ್ ಆಫ್ ಮೈಸೂರು ಸಂಸ್ಥೆ ವತಿಯಿಂದ ವಿವಿಧ ತಳಿಯ ಶ್ವಾನಗಳ ನೋಂದಣಿ ಹಾಗೂ ಮೈಕ್ರೋಚಿಪ್ ಅಳವಡಿಸುವ ಒಂದು ದಿನದ ಅಭಿಯಾನ ನಡೆಸಿ, ವಿವಿಧ ತಳಿಯ 60ಕ್ಕೂ ಹೆಚ್ಚು ಶ್ವಾನಗಳಿಗೆ ಮೈಕ್ರೋಚಿಪ್ ಅಳವಡಿಸಲಾಯಿತು.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಪಶು ಆಸ್ಪತ್ರೆಯಲ್ಲಿ ಶನಿವಾರ ಕೆನ್ನೈನ್ ಕ್ಲಬ್ ಆಫ್ ಮೈಸೂರು ಸಂಸ್ಥೆ ಆಯೋ ಜಿಸಿದ್ದ ನೋಂದಣಿ ಅಭಿಯಾನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಗೋಲ್ಡನ್ ರಿಟ್ರೀವರ್, ಜರ್ಮನ್ ಶೆಫರ್ಡ್, ಚೌಚೌ ಸೇರಿದಂತೆ ಬೆಲೆಬಾಳುವ ವಿವಿಧ ತಳಿಗಳ ಶ್ವಾನಗಳನ್ನು ಅವುಗಳ ಮಾಲೀಕರು ಕರೆ ತಂದು ನೋಂದಣಿ ಮಾಡಿಸಿ, ಮೈಕ್ರೋಚಿಪ್ ಅಳವಡಿಸಿಕೊಂಡರು.

ಈ ವೇಳೆ ಕೆನ್ನೈನ್ ಕ್ಲಬ್ ಆಫ್ ಮೈಸೂರು ಅಧ್ಯಕ್ಷ ಬಿ.ಪಿ.ಮಂಜುನಾಥ್ ಮಾತನಾಡಿ, ಶ್ವಾನಗಳ ನೋಂದಣಿ ಹಾಗೂ ಚಿಪ್ ಅಳವಡಿಸುವ ಅಭಿಯಾನ ನಡೆಸಲಾಗುತ್ತಿದೆ. ಮೈಕ್ರೋ ಚಿಪ್ ಅಳವಡಿಸಿದರೆ ಶ್ವಾನಗಳು ಕಳೆದು ಹೋದಾಗ ಹುಡುಕಲು ನೆರವಾಗುತ್ತದೆ. ಸ್ಕ್ಯಾನರ್‌ನಲ್ಲಿ ಸ್ಕ್ಯಾನ್ ಮಾಡಿದಾಗ ಚಿಪ್‌ನ ನಂಬರ್ ಕಾಣುವುದರಿಂದ ಶ್ವಾನಗಳನ್ನು ಸುಲಭವಾಗಿ ಪತ್ತೆ ಮಾಡಬಹುದು. ನೋಂದಣಿ ಮಾಡಿದ ಶ್ವಾನಗಳ ಮಾಲೀಕರಿಗೆ ಕೆನ್ನೈನ್ ಕ್ಲಬ್ ಆಫ್ ಇಂಡಿಯಾ ಘಟಕದಿಂದ 1 ವರ್ಷ ಶ್ವಾನಗಳ ಪಾಲನೆಗೆ ಸಂಬಂಧಿಸಿದ ಮಾಹಿತಿ ಒದಗಿಸ ಲಾಗುತ್ತದೆ. ಜನವರಿಯಲ್ಲಿ ನಡೆಯುವ ಶ್ವಾನ ಪ್ರದರ್ಶನದಲ್ಲಿ ಪಾಲ್ಗೊಳ್ಳಲು ಅರ್ಹತೆ ಪಡೆಯಲಿದೆ. ದೇಶದಲ್ಲಿ ಇತ್ತೀಚೆಗೆ ನಡೆಯುವ 'ಡಾಗ್ ಶೋ'ದಲ್ಲಿ ಪಾಲ್ಗೊಳ್ಳುವ ಶ್ವಾನಗಳಿಗೆ ಮೈಕ್ರೋಚಿಪ್ ಅಳವಡಿಕೆ ಕಡ್ಡಾಯಗೊಳಿಸಿರುವುದರಿಂದ ಈ ಅಭಿಯಾನ ಮಹತ್ವದ ಪಾತ್ರವಹಿಸುತ್ತದೆ ಎಂದರು.



ಈ ಸಂದರ್ಭದಲ್ಲಿ ಪಶುವೈದ್ಯರಾದ ಡಾ.ಸಂಜೀವಮೂರ್ತಿ, ಡಾ.ಅರುಣ್, ಡಾ.ಜಯರಾಮಯ್ಯ, ಕೆನ್ನೈನ್ ಕ್ಲಬ್ ಆಫ್ ಮೈಸೂರು ಸಂಸ್ಥೆಯ ಪದಾಧಿಕಾರಿಗಳಾದ ವಿನೋದ್, ಅಭಿಷೇಕ್ ಹೆಗಡೆ, ಸಂಜಯ್ ಹಾಗೂ ಇನ್ನಿತರರು ಇದ್ದರು.

ನ್ಯಾಯಾಲಯ ನೂತನ ಸಂಕೀರ್ಣ, ಎಡಿಆರ್ ಕೇಂದ್ರ ಉದ್ಘಾಟನೆ

ಜನರ ಸಂಕಷ್ಟಗಳಿಗೆ ಸ್ಪಂದಿಸಿ, ಅವರ ವಿಶ್ವಾಸವನ್ನು ಉಳಿಸಿಕೊಳ್ಳುವ ಜವಾಬ್ದಾರಿ ನ್ಯಾಯಾಂಗದ ಮೇಲಿದೆ: ನ್ಯಾ. ಅಜ್ಜಿಕುಟ್ಟಿರ ಎಸ್.ಬೋಪಣ್ಣ

ಮಡಿಕೇರಿ,ನ.12– ಜನರ ಸಂಕಷ್ಟಗಳಿಗೆ ಸ್ಪಂದಿಸಿ, ಅವರ ವಿಶ್ವಾಸವನ್ನು ಉಳಿಸಿಕೊಳ್ಳುವ ಜವಾಬ್ದಾರಿ ನ್ಯಾಯಾಂಗದ ಮೇಲಿದ್ದು, ಲಭ್ಯ ಸೌಲಭ್ಯಗಳನ್ನು ಬಳಸಿಕೊಂಡು ನ್ಯಾಯ ದಾನ ಮಾಡಬೇಕೆಂದು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಅಜ್ಜಿಕುಟ್ಟಿರ ಎಸ್.ಬೋಪಣ್ಣ ಅಭಿಪ್ರಾಯಿಸಿದರು.

ಮಡಿಕೇರಿ ವಿದ್ಯಾನಗರದಲ್ಲಿ 39.50 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ನೂತನ ನ್ಯಾಯಾಲಯ ಸಂಕೀರ್ಣ ಮತ್ತು ಎಡಿಆರ್ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು, ನ್ಯಾಯಾಂಗ ವ್ಯವಸ್ಥೆಗೆ ಅಗತ್ಯವಿರುವ ಸೌಲಭ್ಯಗಳನ್ನು, ಉತ್ತಮ ಸವಲತ್ತುಗಳನ್ನು ಒದಗಿಸಲು ರಾಜ್ಯ ಸರ್ಕಾರ ಮತ್ತು ಜನಪ್ರತಿನಿಧಿಗಳು ಸದಾ ನೆರವಾಗಿದ್ದಾರೆ. ಅಗತ್ಯ ಸಂದರ್ಭಗಳಲ್ಲಿ ಅನುದಾನವನ್ನು ಒದಗಿಸಿ ಸಹಕರಿಸಿದ್ದಾರೆಂದು ಮೆಚ್ಚುಗೆಯ ನುಡಿಗಳನ್ನಾಡಿದರು.

ನೂತನ ಮತ್ತು ಎಲ್ಲಾ ಸವಲತ್ತು ಹೊಂದಿದ ಹೊಸ ನ್ಯಾಯಾಲಯಗಳ ಉದ್ಘಾಟಿಸುವುದು ಎಂದರೆ ಪ್ರಕರಣಗಳ ಸಂಖ್ಯೆ ಹೆಚ್ಚಲಿ ಎನ್ನುವ ಅನಿಸಿಕೆಯೇ ಎಂದು ಹಾಸ್ಯದ ಧಾಟಿಯಲ್ಲಿ ನುಡಿದ ಬೋಪಣ್ಣ ಅವರು, ನೂತನ ಕಟ್ಟಡ ಮತ್ತು ಅಗತ್ಯ ಸೌಲಭ್ಯಗಳನ್ನು ನ್ಯಾಯಾಂಗ ವ್ಯವಸ್ಥೆ ಪಡೆಯುವ ಮೂಲಕ, ನ್ಯಾಯದಾನ ಪ್ರಕ್ರಿಯೆಯನ್ನು ಮತ್ತಷ್ಟು ವ್ಯವಸ್ಥಿತವಾಗಿ ನಡೆಸಲು ಸಾಧ್ಯವಾಗುತ್ತದೆ ಜನರು ಇಂದಿಗೂ ನ್ಯಾಯಾಂಗ ವ್ಯವಸ್ಥೆಯ ಮೇಲೆ ವಿಶ್ವಾಸ ಇರಿಸಿಕೊಂಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. ಪ್ರಸ್ತುತ ನ್ಯಾಯಾಲಯ ಮೆಟ್ಟಿಲೇರುವ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದು, ಅವರ ಭರವಸೆಗಳನ್ನು, ವಿಶ್ವಾಸವನ್ನು ಉಳಿಸಿಕೊಳ್ಳುವ ಜವಾಬ್ದಾರಿ ನ್ಯಾಯಾಂಗದ ಮೇಲಿದೆ ಎಂದು ನುಡಿದರು.

ನ್ಯಾಯಾಂಗ ಕ್ಷೇತ್ರದಲ್ಲು ಸಾಧನೆ: ಕೊಡಗು ಜಿಲ್ಲೆ ಯೋಧರ ನಾಡು, ಇಬ್ಬರು ಜನರಲ್‌ಗಳನ್ನು ದೇಶಕ್ಕೆ ನೀಡಿದ ಹೆಮ್ಮೆ ಜಿಲ್ಲೆಗಿದೆ. ಸೇನಾ ಕ್ಷೇತ್ರಕ್ಕೆ ಕೊಡಗು ದೊಡ್ಡ ಕೊಡುಗೆಯನ್ನು ನೀಡಿರುವಂತೆಯೇ ನ್ಯಾಯಾಂಗ ಕ್ಷೇತ್ರಕ್ಕೂ ಕೊಡಗು ಜಿಲ್ಲೆ ಸಾಕಷ್ಟು ಮಂದಿಯನ್ನು ಕೊಡುಗೆಯಾಗಿ ನೀಡಿದೆ ಸರ್ವೋಚ್ಚ ನ್ಯಾಯಾಲಯ, ರಾಜ್ಯ ಉಚ್ಚ ನ್ಯಾಯಾಲಯಗಳಲ್ಲು ಜಿಲ್ಲೆಯವರು ತಮ್ಮ ಸೇವೆಯನ್ನು ನೀಡುತ್ತಿದ್ದಾರೆ ಎಂದು ಎ.ಎಸ್.ಬೋಪಣ್ಣ ಹೆಮ್ಮೆಯಿಂದ ನುಡಿದರು.



ಕಣ್ಣೀರು ಒರೆಸುವ ಕಾರ್ಯವಾಗಲಿ: ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಪ್ರಸನ್ನ ಬಿ.ವರಾಳೆ ಮಾತನಾಡಿ, ಸಮಸ್ಯೆ ಮತ್ತು ಸಂಕಷ್ಟಗಳನ್ನು ಹೊತ್ತು ನ್ಯಾಯಾಲಯದ ಮೆಟ್ಟಿಲೇರುವ ಕಕ್ಷಿದಾರರ ಕಣ್ಣೀರು ಒರೆಸುವ ಕಾರ್ಯ ನ್ಯಾಯಾಲಯಗಳ ಮೂಲಕ ನಡೆಯಬೇಕಾಗಿರುವುದು ಅತ್ಯಂತ ಅವಶ್ಯಕ ಎಂದು ಹೇಳಿದರು. ನೂತನ ನ್ಯಾಯಾಲಯ ಸಂಕೀರ್ಣದೊಂದಿಗೆ ಪ್ರಕರಣಗಳ ಸೌಹಾರ್ದ ಇತ್ಯರ್ಥಕ್ಕೆ ಎಡಿಆರ್ ಕೇಂದ್ರವನ್ನು ತೆರೆಯಲಾಗಿದೆ. ಪ್ರಸ್ತುತ ಇರುವ ಈ ಎಲ್ಲಾ ಸೌಲಭ್ಯಗಳನ್ನು ಪ್ರತಿಯೊಬ್ಬರು ಬಳಸಿಕೊಳ್ಳಬೇಕೆಂದು ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ ಕರೆ ನೀಡಿದರು. ನ್ಯಾಯಾಲಯ ಎನ್ನುವುದು ನ್ಯಾಯಾಂಗದ ದೇವಾಲಯವಾಗಿದೆ. ಈ ನ್ಯಾಯ ದೇಗುಲದ ರಥವನ್ನು ನ್ಯಾಯಾಂಗ ಇಲಾಖೆ, ವಕೀಲ ಸಮೂಹದೊಂದಿಗೆ ಪ್ರತಿಯೊಬ್ಬರು ಎಳೆಯುವಂತೆ ಅವರು ಕರೆ ನೀಡಿದರು.

ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಚೆಪ್ಪುಡಿರ.ಎಂ.ಪೂಣಚ್ಚ ಮಾತನಾಡಿ, ನ್ಯಾಯಾಂಗ ವ್ಯವಸ್ಥೆಗೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ನೂತನ ನ್ಯಾಯಾಲಯ ಸಂಕೀರ್ಣದ ಸೌಲಭ್ಯಗಳನ್ನು ಬಳಸಿಕೊಂಡು ನ್ಯಾಯದಾನ ಶೀಘ್ರವಾಗಿ ನಡೆಯುವಂತಾಗಲಿ ಎಂದು ಆಶಿಸಿದರು.

ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಜಿ.ಶುಕುರೆ ಕಮಲ್ ಮಾತನಾಡಿ, ನ್ಯಾಯದಾನ ಮಾಡುವುದಕ್ಕೆ ಪೂರಕವಾದ ಉತ್ತಮವಾದ ಕಟ್ಟಡ ಇಂದು ಉದ್ಘಾಟನೆಯಾಗಿದೆ. ಪ್ರತಿಯೊಬ್ಬರಲ್ಲಿ ಶಾಂತಿ, ಸಮಾಧಾನಗಳು ಇಲ್ಲದಿದ್ದಲ್ಲಿ ಕಟ್ಟಡಗಳಾಗಲಿ, ಅದರ ಸೌಲಭ್ಯಗಳಾಗಲಿ ಪ್ರಯೋಜನಕ್ಕೆ ಬರಲಾರದು ಎಂದು ಮಾರ್ಮಿಕವಾಗಿ ನುಡಿದರು.

ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಇ.ಎಸ್.ಇಂದಿರೇಶ್ ಮಾತನಾಡಿದರು.

ಶಾಸಕ ಕೆ.ಜಿ. ಬೋಪಯ್ಯ ಮಾತನಾಡಿ, ಇಡೀ ರಾಜ್ಯದಲ್ಲೆ ಕಾರ್ಮಿಕ ನ್ಯಾಯಾಲಯ, ಲೋಕ ಅದಾಲತ್ ಒಳಗೊಂಡಂತೆ ನಿರ್ಮಾಣವಾಗಿರುವ ಮೊದಲ ನ್ಯಾಯಾಲಯ ಕಟ್ಟಡ ಇದಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಂವಿಧಾನದ ಪ್ರಮುಖ ಅಂಗಗಳಾದ ಕಾರ್ಯಾಂಗ, ಶಾಸಕಾಂಗಗಳಲ್ಲಿನ ಯಾವುದೇ ತಪ್ಪುಗಳನ್ನು ತಿದ್ದಿ ರಕ್ಷಿಸುವ ಅಂಗವೇ ನ್ಯಾಯಾಂಗವಾಗಿದೆ. ಜನರಿಗೆ ಇಂದು ಒಂದು ವ್ಯವಸ್ಥೆಯ ಮೇಲೆ ನಂಬಿಕೆ ಇದ್ದರೆ ಅದು ನ್ಯಾಯಾಂಗ ವ್ಯವಸ್ಥೆಯ ಮೇಲೆ ಮಾತ್ರವೆಂದು ತಿಳಿಸಿದರು.

ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ಜಿಲ್ಲಾ ನ್ಯಾಯಾಧೀಶರ ವಸತಿ ಗೃಹಗಳ ನಿರ್ಮಾಣಕ್ಕಾಗಿ 5 ಏಕರೆ ಜಾಗವನ್ನು ಮೀಸಲಿಡಲಾಗಿದೆ. ಕುಶಾಲನಗರದಲ್ಲಿ ನೂತನ ನ್ಯಾಯಾಲಯ ಕಟ್ಟಡ ನಿರ್ಮಾಣಕ್ಕೆ ಶೀಘ್ರದಲ್ಲೇ 11 ಕೋಟಿ ರೂಗಳ ಕಾಮಗಾರಿಗೆ ಟೆಂಡರ್ ಕಾರ್ಯ ನಡೆಯಲಿದೆ ಎಂದು ಮಾಹಿತಿ ನೀಡಿದರು.

ನ್ಯಾಯಮೂರ್ತಿಗಳಿಗೆ ಸನ್ಮಾನ

ಭಾರತದ ಸರ್ವೋಚ್ಚ ನ್ಯಾಯಾಲಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಅಜ್ಜಿಕುಟ್ಟಿರ.ಎಸ್.ಬೋಪಣ್ಣ, ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಪ್ರಸನ್ನ ಬಿ.ವರಾಳೆ, ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಕೊಡಗಿನ ಆಡಳಿತಾತ್ಮಕ ನ್ಯಾಯಾಧೀಶರಾದ ಈ.ಎಸ್. ಇಂದಿರೇಶ್, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಾದ ಎಂ.ಜಿ.ಶುಕುರೆ ಕಮಲ್, ಚೆಪ್ಪುಡಿರ.ಎಂ.ಪೂಣಚ್ಚ ಅವರನ್ನು ಮಡಿಕೇರಿ ವಕೀಲರ ಸಂಘದ ಅಧ್ಯಕ್ಷರಾದ ಕೆ.ಡಿ. ದಯಾನಂದ ಮತ್ತು ಪದಾಧಿಕಾರಿಗಳು ಸನ್ಮಾನಿಸಿ ಗೌರವಿಸಿದರು.

ಇದೇ ಸಂದರ್ಭ ಮಡಿಕೇರಿ ವಕೀಲರ ಸಂಘದ ಮಾಜಿ ಅಧ್ಯಕ್ಷರಾದ ಸಿ.ಟಿ. ಜೋಸೆಫ್, ಕೆ.ಎಸ್.ಕವನ್, ಮಾಜಿ ಕಾರ್ಯದರ್ಶಿಗಳಾದ ಭೀಮಯ್ಯ, ಪಿ.ಯು. ಪ್ರೀತಂ, ಪಿ.ಜಿ.ಕಿಶೋರ್, ನ್ಯಾಯಾಲಯ ಸಂಕೀರ್ಣ ನಿರ್ಮಿಸಿದ ಕರ್ನಲ್ ಬೋಪಣ್ಣ, ಪಿಡಬ್ಲ್ಯುಡಿ ಇಂಜಿನಿಯರ್ ನಾಗರಾಜ್ ಅವರನ್ನು ಗೌರವಿಸಲಾಯಿತು.

ರಾಜ್ಯ ಉಚ್ಚ ನ್ಯಾಯಾಲಯದ ವಿಜಿಲೆನ್ಸ್ ವಿಭಾಗದ ರಿಜಿಸ್ಟ್ರಾರ್ ಕೆ.ಎಸ್. ಭರತ್ ಕುಮಾರ್, ಜಿಲ್ಲಾ ನ್ಯಾಯಾಧೀಶರಾದ ಎಂ.ಭೃಂಗೇಶ್, ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ, ಮಡಿಕೇರಿ ವಕೀಲರ ಸಂಘದ ಅಧ್ಯಕ್ಷರಾದ ಕೆ.ಡಿ.ದಯಾನಂದ, ಉಪಾಧ್ಯಕ್ಷರಾದ ಕೆ.ಎಸ್.ತಮ್ಮಯ್ಯ, ಕಾರ್ಯದರ್ಶಿ ಅರುಣ್ ಕುಮಾರ್ ಉಪಸ್ಥಿತರಿದ್ದರು.

ಅಖಿಲ ಕೊಡವ ಸಮಾಜದ ಅಧ್ಯಕ್ಷ ಮಾತಂಡ ಮೊಣ್ಣಪ್ಪ ಸ್ವಯಂ ನಿವೃತ್ತಿ

ವಿರಾಜಪೇಟೆ, ನ.12– ಸುದೀರ್ಘ 49 ವರ್ಷಗಳ ಸೇವೆಯ ಬಳಿಕ ಅಖಿಲ ಕೊಡವ ಸಮಾಜದ ಅಧ್ಯಕ್ಷ ಮಾತಂಡ ಮೊಣ್ಣಪ್ಪ ಸ್ವಯಂ ನಿವೃತ್ತಿ ಘೋಷಿಸಿದ್ದು, ಕೊಡವ ಜನಾಂಗದ ಹಿರಿಯಣ್ಣನಂತಿರುವ ಹಾಗೂ ಸ್ವಾತಂತ್ರ್ಯ ಪೂರ್ವದ ಸಂಸ್ಥೆಯೂ ಆಗಿರುವ ಅಖಿಲ ಕೊಡವ ಸಮಾಜಕ್ಕೆ ಮುಂದಿನ ಅಧ್ಯಕ್ಷರು ಯಾರು ಎನ್ನುವುದು ಸಾರ್ವಜನಿಕ ವಲಯದಲ್ಲಿ ಕುತೂಹಲ ಮೂಡಿಸಿದೆ.



ಶುಕ್ರವಾರ ವಿರಾಜಪೇಟೆಯ ಅಖಿಲ ಕೊಡವ ಸಮಾಜ ಸಭಾಂಗಣದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಅವರು ನಿವೃತ್ತಿ ಘೋಷಿಸಿದ್ದು, ಕೆಲವು ಕ್ಷಣ ಭಾವುಕರಂತೆ ಕಂಡುಬಂದ ಮಾತಂಡ ಮೊಣ್ಣಪ್ಪ ಅವರು ಮಾತನಾಡುತ್ತಾ, ನನ್ನ ಜನಾಂಗ ನನಗೆ ಒಂದು ದೊಡ್ಡ ಜವಬ್ದಾರಿಯನ್ನು 49 ವರ್ಷಗಳ ಹಿಂದೆ ನೀಡಿತ್ತು. ಇದನ್ನು ದೇವರು ಮೆಚ್ಚುವ ರೀತಿ ಮಾಡಿದ್ದೇನೆ ಎಂದರು.

ಬಹುಶಃ ನಾನು ಈ ಸಮಾಜದ ಅಧ್ಯಕ್ಷನಾಗಿ ಆಯ್ಕೆ ಆಗದೆ ಹೋಗದೆ ಇದ್ದಿದ್ದರೆ ಇವತ್ತು ನಾನೂ ಏನೂ ಆಗುತ್ತಿರಲಿಲ್ಲ. ಜನ ಸಾಮಾನ್ಯರಲ್ಲಿ ನಾನೂ ಕೂಡ ಒಬ್ಬನಾಗಿರುತ್ತಿದ್ದೆ ಎಂದ ಅವರು, ನಾನು ಇವತ್ತು ಈ ಸಮಾಜಕ್ಕೆ ಏನೇ ನೀಡಿದ್ದರು ಅದಕ್ಕೆ ಕಾರಣ ನಮ್ಮ ಹಿರಿಯರು ದೂರದೃಷ್ಟಿಯಿಂದ ಕಟ್ಟಿದ ಅಖಿಲ ಕೊಡವ ಸಮಾಜ ಹಾಗೂ ನನ್ನ ಜನಾಂಗ ಬಾಂಧವರು ಎಂದರು.

ನ.19 ರಂದು ಮಕ್ಕಂದೂರು ಗ್ರಾಮದಲ್ಲಿ ತಹಶೀಲ್ದಾರ್ ಗ್ರಾಮ ವಾಸ್ತವ್ಯ

ಮಡಿಕೇರಿ, ನ.12– ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆ ಪ್ರಯುಕ್ತ ಮಡಿಕೇರಿ ತಾಲೂಕಿನ ತಹಶೀಲ್ದಾರರ ನೇತೃತ್ವದಲ್ಲಿ ನ.19 ರಂದು ಬೆಳಗ್ಗೆ 10 ಗಂಟೆಗೆ ಮಕ್ಕಂದೂರು ವಿಎಸ್‌ಎಸ್‌ಎನ್ ಸಭಾಂಗಣದಲ್ಲಿ ಗ್ರಾಮ ವಾಸ್ತವ್ಯ ಕಾರ್ಯಕ್ರಮ ನಡೆಯಲಿದೆ ಎಂದು ತಾಲೂಕು ತಹಶೀಲ್ದಾರ್ ಪಿ.ಎಸ್.ಮಹೇಶ್ ತಿಳಿಸಿದ್ದಾರೆ.

ನ್ಯಾಯಾಂಗ ವ್ಯವಸ್ಥೆಯಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ ಅಗತ್ಯ

ವಿರಾಜಪೇಟೆ ನ.12– ನ್ಯಾಯಾಂಗ ವ್ಯವಸ್ಥೆಯಲ್ಲಿ ಪ್ರಾಮಾಣಿಕತೆ ಹಾಗೂ ಪಾರದರ್ಶಕತೆ ಅತ್ಯಗತ್ಯ, ಇಲ್ಲವಾದಲ್ಲಿ ಸಮಾಜದ ಸ್ವಾಸ್ಥ್ಯ ಕುಸಿಯುವ ಸಾಧ್ಯತೆಯಿದೆ ಎಂದು ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಚೆಪ್ಪುಡಿರ ಎಂ. ಪೂಣಚ್ಚ ತಿಳಿಸಿದರು.

ವಿರಾಜಪೇಟೆ ವಕೀಲರ ಸಂಘದ ವತಿಯಿಂದ ನ್ಯಾಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ಹಿರಿಯ ವಕೀಲರು ಕಿರಿಯ ವಕೀಲರಿಗೆ ಮಾರ್ಗದರ್ಶಕರಾಗಿ ಉತ್ತಮ ಸೇವೆ ಸಲ್ಲಿಸುವಂತೆ ಪ್ರೇರೇಪಣೆ ನೀಡುತ್ತಿರುವುದು ಪ್ರಶಂಸನೀಯ ಎಂದರು.



ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಎಂ.ಜಿ.ಶುಕೂರೆ ಕಮಾಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ, ನಮ್ಮ ಮಾನವೀಯ ಮೌಲ್ಯಗಳನ್ನು ನಾವು ಸದಾ ಉಳಿಸಿಕೊಳ್ಳಬೇಕು. ಭೂ ಮಾತೆ ಎಂದರೆ ಮಹತ್ವದ ಸ್ಥಾನ ಹೊಂದಿರುತ್ತಾಳೆ. ಅಕೆಯನ್ನು ಮಾತೆಗೆ ಹೋಲಿಸುತ್ತಾರೆ. ವ್ಯಕ್ತಿಯ ಯಶಸ್ಸಿಗೆ ತಾಯಿಯ ಪಾತ್ರವು ಮುಖ್ಯವಾಗಿರುತ್ತದೆ. ವಕೀಲರಿಗೂ, ನ್ಯಾಯಾಲಯಕ್ಕೂ ಪರಸ್ಪರ ಅವಿನಾಭಾವ ಸಂಬಂಧ ಇದ್ದು ಪರಸ್ಪರ ಹೊಂದಿಕೊಂಡು ಕಾರ್ಯನಿರ್ವಹಿಸುವಂತಾಗಬೇಕು. ಕಾನೂನು ವೈಫಲ್ಯವಾದರೆ ಜನರ ನಿರೀಕ್ಷೆಯು ಹುಸಿಯಾದಂತಾಗುತ್ತದೆ. ಇಂದಿನ ದಿನದಲ್ಲಿ ಜನರು ನ್ಯಾಯಾಲಯದ ವ್ಯವಸ್ಥೆಯ ಮೇಲೆ ಅತ್ಯಂತ ನಂಬಿಕೆ ಹೊಂದಿದ್ದಾರೆ ಎಂದು ಕೊಡಗು ಆಡಳಿತಾತ್ಮಕ ನ್ಯಾಯಮೂರ್ತಿ ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರು ಸಭೆಯ ಅಧ್ಯಕ್ಷತೆ ವಹಿಸಿ ವಕೀಲರ ಸಂಘದ 60ನೇ ವರ್ಷದ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದ ಬಳಿಕ ಮಾತನಾಡಿ, ಒಂದು ದೀಪ ಉರಿಯಲು ಎಣ್ಣೆ ಬೇಕು. ಅದರಂತೆ ವಕೀಲರು ಬಾಂಧವ್ಯದಿಂದ ಹೊಂದಿಕೊಂಡು ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಮೂಲಕ ಉತ್ತಮ ಸೇವೆ ಸಲ್ಲಿಸುವುದರೊಂದಿಗೆ ಸೂಕ್ತ ರೀತಿಯಲ್ಲಿ ಪ್ರಕರಣಗಳನ್ನು ಅವಲೋಕಿಸಬೇಕು. ನ್ಯಾಯಾಧೀಶರು ಮತ್ತು ವಕೀಲರು ನ್ಯಾಯಾಂಗ ವ್ಯವಸ್ಥೆಯ ಎರಡು ನಕ್ಷತ್ರದಂತೆ, ವಕೀಲರು ಪ್ರಾಮಾಣಿಕತೆ ಮತ್ತು ಮುತುವರ್ಜಿಯಿಂದ ತಮ್ಮ ಕರ್ತವ್ಯ ನಿಭಾಯಿಸುವಂತಾಗಬೇಕು ಎಂದರು.

ರಾಜ್ಯ ಉಚ್ಚ ನ್ಯಾಯಾಲಯದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಎಂ.ಧ್ಯಾನ್ ಚಿಣ್ಣಪ್ಪ ವಿಶೇಷ ಅತಿಥಿಯಾಗಿ ಭಾಗವಹಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ವಕೀಲರ ಸಂಘದ ಅಧ್ಯಕ್ಷ ಐ.ಆರ್.ಪ್ರಮೋದ್ ಪ್ರಾಸ್ತಾವಿಕ ಭಾಷಣ ಮಾಡಿದರು. ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷ ವಕೀಲ ಬಿ.ಎನ್. ಸುಬ್ಬಯ್ಯ, ಕಾರ್ಯದರ್ಶಿ ಎಂ.ಕೆ. ದಿನೇಶ್, ಅತಿಥಿ ಸವಿತಾ ಪೂಣಚ್ಚ ಮತ್ತು ಬಾನು ಶುಕೂರೆ ಕಮಾಲ್, ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಸುಜಾತ, ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಜಿ. ಲೋಕೇಶ್, ಪ್ರಧಾನ ಸಿವಿಲ್ ನ್ಯಾಯಾಧೀಶ ಸಂತೋಷ್ ಕೊಠಾರಿ, ಅಪರ ಸಿವಿಲ್ ನ್ಯಾಯಾಧೀಶೆ ಮಹಾಲಕ್ಷ್ಮಿ, ವಕೀಲರ ಸಂಘದ ಖಜಾಂಚಿ ವಿ.ಜಿ.ರಾಕೇಶ್ ಮುಂತಾದವರು ಉಪಸ್ಥಿತರಿದ್ದರು ಬಿ.ಬಿ.ಮಾದಪ್ಪ ಸ್ವಾಗತಿಸಿದರೆ ರಾಕೇಶ್ ವಂದಿಸಿದರು.

ನೈಋತ್ಯ 'ರೈಲ್ವೆ ಟಿಕೆಟ್ ಬುಕ್ಕಿಂಗ್ ಸೆಂಟರ್' ಪುನರಾರಂಭಿಸಲು ಆಗ್ರಹ

ಮಡಿಕೇರಿ,ನ.12– ಕೊಡಗು ಜಿಲ್ಲೆಯ ಯೋಧರಿಗೆ ಸಹಕಾರಿಯಾಗಿದ್ದ ಮಡಿಕೇರಿಯ 'ನೈಋತ್ಯ ರೈಲ್ವೆ ಟಿಕೆಟ್ ಬುಕ್ಕಿಂಗ್ ಸೆಂಟರ್' ಅನ್ನು ಪುನರಾರಂಭಿಸಬೇಕೆಂದು ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಒತ್ತಾಯಿಸಿದ್ದಾರೆ.

ಸಂಸದ ಪ್ರತಾಪ್ ಸಿಂಹ ಅವರಿಗೆ ಪತ್ರದ ಮೂಲಕ ಮನವಿ ಸಲ್ಲಿಸಿರುವ ಅವರು, ಭಾರತೀಯ ಸೇನೆಯಲ್ಲಿ ಕೊಡಗಿನ ಸಾವಿರಾರು ಮಂದಿ ಸೈನಿಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಾಫಿ ತೋಟಗಳಲ್ಲಿ ದುಡಿಯಲು ವಿವಿಧ ರಾಜ್ಯಗಳ ಅಸಂಖ್ಯಾತ ಕಾರ್ಮಿಕರು ಜಿಲ್ಲೆಗೆ ಬರುತ್ತಾರೆ. ಮಡಿಕೇರಿಯಲ್ಲಿ ರೈಲ್ವೆ ಟಿಕೆಟ್ ಬುಕ್ಕಿಂಗ್ ಸೆಂಟರ್ ಇದ್ದಾಗ ಸೈನಿಕರು ಹಾಗೂ ಕಾರ್ಮಿಕರು ತಾವು ತೆರಳಬೇಕಾದ ಪ್ರದೇಶದ ರೈಲ್ವೆ ಟಿಕೆಟ್‌ಗಳನ್ನು ಮುಂಗಡವಾಗಿ ಬುಕ್ ಮಾಡಿ ಪ್ರಯಾಣ ಬೆಳೆಸುತ್ತಿದ್ದರು. ಇದು ಹೆಚ್ಚು ಅನುಕೂಲಕರ ವ್ಯವಸ್ಥೆಯಾಗಿತ್ತು, ಆದರೆ ಪ್ರಸ್ತುತ ದಿನಗಳಲ್ಲಿ ಟಿಕೆಟ್ ಬುಕ್ಕಿಂಗ್‌ಗೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಗಮನ ಸೆಳೆದಿದ್ದಾರೆ.

ಕಾಂಗ್ರೆಸ್, ಬಿಜೆಪಿ ತೊರೆದು ಜೆಡಿಎಸ್ ಸೇರ್ಪಡೆ



ಹನೂರು, ನ.12– ತಾಲೂಕಿನ ದಿನ್ನಳ್ಳಿ ಗ್ರಾಮದಲ್ಲಿ ಮುಸ್ಲಿಂ ಹಾಗೂ ಲಂಬಾಣಿ ಸಮುದಾಯದ ಜನರು ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷವನ್ನು ತೊರೆದು ಜೆಡಿಎಸ್ ಮುಖಂಡ ಎಂ.ಆರ್. ಮಂಜುನಾಥ್ ಅವರ ನೇತೃತ್ವದಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಪಕ್ಷಕ್ಕೆ ಸೇರ್ಪಡೆಗೊಂಡವರಿಗೆ ಜೆಡಿಎಸ್ ಪಕ್ಷದ ಶಾಲನ್ನು ಹಾಕಿ ಪಕ್ಷಕ್ಕೆ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.ನಂತರ ಮಾತನಾಡಿದ ಮಂಜುನಾಥ್ ಅವರು, ಮುಸ್ಲಿಂ ಹಾಗೂ ಲಂಬಾಣಿ ಸಮುದಾಯದವರು ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿರುವುದು ಪಕ್ಷಕ್ಕೆ ಆನೆ ಬಲ ಬಂದಂತಾಗಿದೆ. ನಮ್ಮ ವರಿಷ್ಠರಾದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ನಾಯಕತ್ವ ಪಕ್ಷದ ಸಿದ್ಧಾಂತದ ಜೊತೆಗೆ ನಾನು ಕಳೆದ ಹಲವಾರು ವರ್ಷಗಳಿಂದ ಕೈಗೊಳ್ಳಲಾಗಿರುವ ಜನಪ್ರಿಯ ಕಾರ್ಯಕ್ರಮಗಳನ್ನು ಮೆಚ್ಚಿ ಪಕ್ಷಕ್ಕೆ ಸಾಗರೋಪಾದಿಯಲ್ಲಿ ಸೇರ್ಪಡೆಯಾಗುತ್ತಿರುವುದು ಸಂತಸದ ವಿಚಾರ ಎಂದರು.

ಗ್ರಾಮದ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರಾದ ಮನ್ಸೂರ್, ಅಪ್ಜಲ್ ಷರೀಫ್, ಹಸನ್ ಶರೀಫ್, ಖಾಸಿಂ ಶರೀಫ್, ಇಮಾಮ್ ಶರೀಫ್, ಆಸಿಫ್ ಶರೀಫ್, ಇಬ್ರಾಹಿಂ ಶರೀಫ್, ರಫಿ ಉಲ್ಲಾ, ಆದಿಲ್ ಪಾಷಾ, ಇಲಿಯಾಸ್ ಪಾಷಾ, ಶಫಿ, ಅಬ್ದುಲ್ ನಸೀಮ್, ಸೈಯದ್ ಜಾನ್, ಅಲ್ಲಾಭಕಾಸ್, ಅಬ್ದುಲ್ ಹ್ಯಾರಿಸ್, ಮುನೀರ್, ಅಬ್ದುಲ್ ಸಿದ್ದಿಕ್, ಸುಭಾನ್, ಸೈಯದ್ ಮುನವರ್, ರಸುಲ್, ಸೈಯದ್ ಮುನೀರ್, ಗೋಪಾಲ, ಕೃಷ್ಣ, ಅನು, ಗುರುಸ್ವಾಮಿ ರಾಜು ನಾಯಕ್ ಇನ್ನಿತರರು ಸೇರ್ಪಡೆಯಾದರು. ಈ ಸಂದರ್ಭದಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಶಿವಮೂರ್ತಿ, ಹನೂರು ಮಂಜೇಶ್, ಜಸ್ಸಿಂ ಪಾಷಾ, ಚಿನ್ನ ವೆಂಕಟ ಸೇರಿದಂತೆ ವಿವಿಧ ಮುಖಂಡರು ಹಾಜರಿದ್ದರು.

ಜಿಲ್ಲೆಯಲ್ಲಿ ಲೋಕ್ ಅದಾಲತ್ ಯಶಸ್ವಿ

300ಕ್ಕೂ ಹೆಚ್ಚು ಪ್ರಕರಣ ಇತ್ಯರ್ಥ

ಯಳಂದೂರು, ನ12– ಸರ್ವೋಚ್ಚನ್ಯಾಯಾಲಯದ ಸೂಚನೆಯ ಮೇರೆಗೆ ಸರ್ವರಿಗೂ ನ್ಯಾಯ ಕಲ್ಪಿಸುವ ಪರಿಕಲ್ಪನೆ ಅಡಿಯಲ್ಲಿ ಜನಸಾಮಾನ್ಯರ ಅನುಕೂಲಕ್ಕಾಗಿ ಶೀಘ್ರ ಹಾಗೂ ತ್ವರಿತವಾಗಿ ಪ್ರಕರಣವನ್ನು ಇತ್ಯರ್ಥಗೊಳಿಸುವ ದಿಶೆಯಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ದೇಶನದ ಮೇರೆಗೆ ಶನಿವಾರ ಪಟ್ಟಣ ಸೇರಿದಂತೆ ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆಯ ನ್ಯಾಯಾಲಯಗಳಲ್ಲಿ ಎಲ್ಲಾ ಬಗೆಯ ಸಿವಿಲ್ ಹಾಗೂ ರಾಜಿಯಾಗಬಲ್ಲ ಕ್ರಿಮಿನಲ್ ಪ್ರಕರಣಗಳು ಹಾಗೂ ಇನ್ನಿತರ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಗೊಳಿಸಲು ಮೆಗಾ–ಲೋಕ್ ಅದಾಲತ್ ನಡೆಸಲಾಯಿತು.



ಯಳಂದೂರು ನ್ಯಾಯಾಲಯದ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಗಳಾದ ಆಕರ್ಷ್ ಮಾತನಾಡಿ, ಮೆಗಾ ಲೋಕ್ ಅದಾಲತ್‌ನಲ್ಲಿ ನ್ಯಾಯಾಧೀಶರು ಹಾಗೂ ಸಂಧಾನಕಾರರ ಮಧ್ಯಸ್ಥಿಕೆಯಲ್ಲಿ ನ್ಯಾಯಾಲಯದಲ್ಲಿ ಬಾಕಿ ಇರುವ ರಾಜಿಯಾಗಬಲ್ಲ ಸಿವಿಲ್ ಹಾಗೂ ಅಪರಾಧಿಕ ಪ್ರಕರಣಗಳು ಸೇರಿದಂತೆ ಒಟ್ಟು 300 ಕ್ಕೂ ಹೆಚ್ಚು ವಿವಿಧ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಯಿತೆಂದು ಮಾಹಿತಿ ನೀಡಿದರು.

ವಕೀಲರಾದ ಯರಿಯೂರಿನ ಕುಮಾರಸ್ವಾಮಿ ಮಾತನಾಡಿ, ಕಕ್ಷಿದಾರರು ಮೆಗಾ ಲೋಕ್ ಅದಾಲತ್‌ನ ಮೂಲಕ ಪರಸ್ಪರ ಒಪ್ಪಿಗೆಯ ಮೇರೆಗೆ ತಮ್ಮ ದಾವೆಗಳನ್ನು ಇತ್ಯರ್ಥಪಡಿಸಿಕೊಂಡರೆ ಶಾಂತಿ ಹಾಗೂ ನೆಮ್ಮದಿಯ ಜೀವನ ಸಾಗಿಸಬಹುದಾಗಿದೆ. ಇದರಿಂದ ಕಕ್ಷಿದಾರರಿಗೆ ಶೀಘ್ರ ನ್ಯಾಯ ದೊರಕಿ, ಅವರಿಗೆ ಸಮಯ ಉಳಿತಾಯವಾಗುವುದರ ಜೊತೆಗೆ ಪದೇ ಪದೇ ನ್ಯಾಯಾಲಯಕ್ಕೆ ಅಲೆಯುವ ಖರ್ಚು ಉಳಿತಾಯವಾಗುತ್ತದೆ ಜೊತೆಗೆ ನ್ಯಾಯಾಲಯದಲ್ಲಿನ ಪ್ರಕರಣಗಳ ಒತ್ತಡವು ಕೂಡ ತಗ್ಗುತ್ತದೆ ಎಂದರು. ಕಕ್ಷಿದಾರರಾದ ಜನ್ನೂರು ಗ್ರಾಮದ ಮಹೇಶ್ ಮಾತನಾಡಿ, ಕಳೆದೆರಡು ವಾರಗಳ ಹಿಂದೆ ತಮ್ಮ ಮನೆಯಲ್ಲಿ ಸಾಕಿದ್ದ ಎರಡು ಆಡು ಮರಿಗಳು ಕಳ್ಳತನವಾಗಿದ್ದವು. ಈ ಬಗ್ಗೆ ಕುದೇರು ಪೊಲೀಸ್ ಠಾಣೆಯಲ್ಲಿ ದೂರು ನೀಡಿ ಪ್ರಕರಣ ದಾಖಲಾಗಿತ್ತು. ಈಗ ನ್ಯಾಯಾಧೀಶರು ಲೋಕ ಅದಾಲತ್ ಮೂಲಕ ಪ್ರಕರಣ ಇತ್ಯರ್ಥಗೊಳಿಸುವುದರ ಜೊತೆಗೆ ನಮ್ಮ ಮನೆಗೆ ಕುರಿಗಳು ತಲುಪುವುದರ ಜೊತೆಗೆ 6 ಸಾವಿರ ರೂ. ಪರಿಹಾರ ನೀಡಿ ಶೀಘ್ರವಾಗಿ ನ್ಯಾಯ ಇತ್ಯರ್ಥ ಮಾಡಿದ್ದಾರೆ. ಇದರಿಂದ ನಾವು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗಿದೆ ಎಂದರು.

ಮತ್ತೋರ್ವ ಕಕ್ಷಿದಾರರಾದ ಹೊಸಮಾಲಂಗಿ ಗ್ರಾಮದ ಮಹದೇವ ಮಾತನಾಡಿ, ತಮ್ಮ ಸಂಬಂಧಿಕರೊಬ್ಬರ ನಡುವೆ ಜಮೀನು ಹಾಗೂ ಹಣದ ವಿಷಯವಾಗಿ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿತ್ತು ಲೋಕ್ ಅದಾಲತ್‌ನ ಮೂಲಕ ಮಾನ್ಯ ನ್ಯಾಯಾಧೀಶರು ನಮ್ಮ ನಡುವೆ ರಾಜಿ ಸಂಧಾನ ಮಾಡಿರುವುದರಿಂದ ಪ್ರಕರಣ ಸುಖಾಂತ್ಯ ಕಂಡಿದೆ. ಇದರಿಂದ ನಮಗೆ ನ್ಯಾಯಾಲಯದ ಖರ್ಚು ಸಮಯ ಉಳಿತಾಯವಾಗಿದೆ ಎಂದರು.

ನ್ಯಾ. ರವಿ ವೆಂಕಪ್ಪ ಹೊಸಮನಿ ಅವರಿಗೆ ಗೌರವ ಸಮರ್ಪಣೆ



ಚಾಮರಾಜನಗರ, ನ.12– ಜಿಲ್ಲಾ ವಕೀಲರ ಸಂಘಕ್ಕೆ ಭೇಟಿ ನೀಡಿದ್ದ ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಚಾಮರಾಜನಗರ ಜಿಲ್ಲೆಯ ಆಡಳಿತಾತ್ಮಕ ನ್ಯಾಯಮೂರ್ತಿಗಳಾದ ರವಿ ವೆಂಕಪ್ಪ ಹೊಸಮನಿ ಅವರನ್ನು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಗೌರವಿಸಿ ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನ್ಯಾ. ರವಿ ಹೊಸಮನಿ ಅವರು ವಕೀಲರು ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಪ್ರಮುಖ ಪಾತ್ರ ವಹಿಸಲಿದ್ದೀರಿ. ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಿಮ್ಮದೇ ಪ್ರಮುಖ ಜವಾಬ್ದಾರಿ. ನಿಮ್ಮಲ್ಲಿ ಯಾವುದೇ ಸಮಸ್ಯೆಗಳು ಬರಬಾರದು. ನ್ಯಾಯಾಧೀಶರು ಮತ್ತು ವಕೀಲರ ನಡುವೆ ಉತ್ತಮ ಬಾಂಧವ್ಯ ಇರಬೇಕು ಎಂದರು.

ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಮಾತನಾಡಿ, ನ್ಯಾಯಾಲಯ ಸಂಕೀರ್ಣಕ್ಕೆ ಮತ್ತು ವಕೀಲರ ಸಂಘಕ್ಕೆ ಮೂಲ ಸೌಕರ್ಯಗಳನ್ನು ಕಲ್ಪಿಸುವಂತೆ ನ್ಯಾಯಮೂರ್ತಿಗಳಿಗೆ ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ನ್ಯಾಯಮೂರ್ತಿಗಳು ಸಮಸ್ಯೆಗಳು ಏನೇ ಇದ್ದರೂ ಬಗೆಹರಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಎನ್. ಕೆ.ವಿರೂಪಾಕ್ಷ ಸ್ವಾಮಿ, ಜಂಟಿ ಕಾರ್ಯದರ್ಶಿ ಮಲ್ಲು, ಖಜಾಂಚಿ ಆರ್.ಗಿರೀಶ್ ಹಿರಿಯ ವಕೀಲರಾದ ಪುಟ್ಟರಾಜು, ಎಂ.ಶಿವಲಿಂಗಗೌಡ,ಎಂ.ಚಿನ್ನಸ್ವಾಮಿ ಇದ್ದರು.

ಹಿಂದುಳಿದ ವರ್ಗಗಳ ಒಗ್ಗೂಡಿಸಲು ಪ್ರವಾಸ

ಚಾಮರಾಜನಗರ ನ.12– ರಾಜ್ಯಾದ್ಯಂತ ಹಿಂದುಳಿದ ವರ್ಗಗಳನ್ನು ಒಗ್ಗೂಡಿಸಿ, ಅವರಲ್ಲಿ ಸಂಘಟನಾತ್ಮಕ ಶಕ್ತಿ ಹೆಚ್ಚಿಸಲು ರಾಜ್ಯದ 31 ಜಿಲ್ಲೆಗಳಲ್ಲೂ ಪ್ರವಾಸ ಹಮ್ಮಿಕೊಂಡಿರುವುದಾಗಿ ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಘಟಕದ ಅಧ್ಯಕ್ಷ ಮಧು ಬಂಗಾರಪ್ಪ ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಗೆ ಶನಿವಾರ ಭೇಟಿ ನೀಡಿ, ಹಾಲಿ ಶಾಸಕರು, ಮಾಜಿ ಶಾಸಕರು, ಜಿಲ್ಲಾ ಕಾಂಗ್ರೆಸ್ ಮುಖಂಡರ ಜತೆ ಹಿಂದುಳಿದ ವರ್ಗಗಳ ಬಗ್ಗೆ ಸಮಾಲೋಚನೆ ನಡೆಸಿ ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರ ನಡೆಸುತ್ತಿದ್ದ ಸಂದರ್ಭದಲ್ಲಿ ತಂದ ಜನಪರ ಯೋಜನೆಗಳು, ಪಕ್ಷದ ತತ್ವ ಸಿದ್ಧಾಂತದ ಕುರಿತು ಯುವಕರಿಗೆ ತಿಳಿಸಿ ಕೊಡಬೇಕು, ಪಕ್ಷದ ಸಂಘಟನೆ ದೃಷ್ಟಿಯಿಂದ ಅವರಿಗೆ ಉನ್ನತ ಸ್ಥಾನ ನೀಡುವ ನಿಟ್ಟಿನಲ್ಲಿ ಪಕ್ಷದ ವರಿಷ್ಠರು ಚಿಂತನೆ ನಡೆಸಬೇಕಿದೆ ಎಂದರು.

ಹಿಂದುಳಿದ ವರ್ಗಗಳನ್ನು ಒಂದು ಗೂಡಿಸುವ ಮೂಲಕ ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಬೃಹತ್ ಹಿಂದುಳಿದ ವರ್ಗಗಳ ಸಮಾವೇಶವನ್ನು ಹಮ್ಮಿಕೊಳ್ಳಲಾಗುವುದು. ತಮ್ಮ ತಂದೆ ದಿ.ಎಸ್.ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದಾಗ ರೈತರಿಗೆ ಉಚಿತ ವಿದ್ಯುತ್ ಸೇರಿದಂತೆ ಹಲ ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದರು. ಅವರ ಹಾದಿಯಲ್ಲೇ ತಾವು ಮುನ್ನಡೆಯುವುದಾಗಿ ತಿಳಿಸಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಹಲವಾರು ಯೋಜನೆ ಜಾರಿ ಮಾಡಿದ ಮುಖ್ಯಮಂತ್ರಿಗಳಲ್ಲಿ ದೇವರಾಜ ಅರಸು ಬಿಟ್ಟರೆ ಬಂಗಾರಪ್ಪ ಮುಂಚೂಣಿಯಲ್ಲಿದ್ದಾರೆ. ಹಿಂದುಳಿದ ವರ್ಗದವರ ಸಂಘಟನೆ ಸಂಬಂಧ ರಾಜ್ಯಾದ್ಯಂತ ಪ್ರವಾಸ ಮಾಡಲು ಮುಂದಾಗಿರುವ ಮಧು ಬಂಗಾರಪ್ಪ ಅವರ ಜತೆ ಕಾಳಜಿ ಪಕ್ಷದ ಜತೆ ಕೈಜೋಡಿಸುವುದಾಗಿ ತಿಳಿಸಿದರು.

ಒಬಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎ. ಮಹದೇವಶೆಟ್ಟಿ ಮಾತನಾಡಿದರು. ಇದೇ ವೇಳೆ ಪಕ್ಷದ ಕಚೇರಿಗೆ ಆಗಮಿಸಿದ ಕೆಪಿಸಿಸಿ ಒಬಿಸಿ ರಾಜ್ಯಾಧ್ಯಕ್ಷರನ್ನು ಅದ್ದೂರಿಯಾಗಿ ಬರಮಾಡಿಕೊಂಡು, ಜಿಲ್ಲಾಘಟಕ ಸೇರಿದಂತೆ ಮುಂಚೂಣಿ ಘಟಕದ ಮುಖಂಡರು, ಕಾರ್ಯಕರ್ತರು ಸನ್ಮಾನಿಸಿ ಅಭಿನಂದಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಮಾಜಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಜಯಣ್ಣ ಎಸ್.ಬಾಲರಾಜು, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹಾದೇವ, ಆರ್.ಮಹದೇವ, ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.



ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಆಗಮಿಸಿದ ಕೆಪಿಸಿಸಿ ಒಬಿಸಿ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ಅವರನ್ನು ಜಿಲ್ಲಾ ಘಟಕ ಸೇರಿದಂತೆ ಪಕ್ಷದ ಮುಂಚೂಣಿ ಘಟಕದ ಮುಖಂಡರು ಅಭಿನಂದಿಸಿದರು.

ಜಾತ್ರೆ, ಸಂತೆಗಳಿಗೆ ಜಾನುವಾರುಗಳ ನಿಷೇಧ

ಚಾಮರಾಜನಗರ, ನ.12– ಜಾನುವಾರುಗಳಿಗೆ ಚರ್ಮ ಗಂಟು ರೋಗ ಹರಡುವಿಕೆಯನ್ನು ನಿಯಂತ್ರಿಸುವ ಸಲುವಾಗಿ ಚರ್ಮಗಂಟು ರೋಗ ನಿಯಂತ್ರಣಕ್ಕೆ ಬರುವವರೆಗೆ ಜಿಲ್ಲೆಯಾದ್ಯಂತ ನಡೆಯುವ ಜಾತ್ರೆ ಹಾಗೂ ಸಂತೆಗಳಿಗೆ ಜಾನುವಾರುಗಳನ್ನು ಕರೆತರುವುದನ್ನು, ಮತ್ತು ರೋಗ ಪೀಡಿತ ಜಾನುವಾರುಗಳ ಸಾಗಾಣಿಕೆಯನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಆದೇಶ ಹೊರಡಿಸಿದ್ದಾರೆ. ಈ ಆದೇಶವನ್ನು ಉಲ್ಲಂಘಿಸಿದವರ ವಿರುದ್ಧ ಭಾರತೀಯ ದಂಡ ಸಂಹಿತೆಯಲ್ಲಿ ಅನ್ವಯವಾಗಬಹುದಾದ ಕಾನೂನು ರೀತ್ಯಾ ಕ್ರಮವನ್ನು ಜರುಗಿಸಲಾಗುವುದು ಎಂದು ಅವರು ಆದೇಶದಲ್ಲಿ ಎಚ್ಚರಿಸಿದ್ದಾರೆ.

ಜಿಲ್ಲೆಯಾದ್ಯಂತ ಮುಂದುವರೆದ ಜಿಟಿ–ಜಿಟಿ ಮಳೆ

ಚಾಮರಾಜನಗರ ನ.12– ಜಿಲ್ಲೆಯಾದ್ಯಂತ ಶನಿವಾರವೂ ಸಹ ದಿನವಿಡೀ ಮೋಡ ಕವಿದ ವಾತಾವರಣ ಮುಂದುವರೆದು, ಜಿಟಿ–ಜಿಟಿ ಮಳೆ ಸುರಿಯಿತು.

ಜಿಲ್ಲೆಯಾದ್ಯಂತ ಶುಕ್ರವಾರ ದಿನವಿಡೀ ಮಳೆ ಸುರಿದು ಜನ ಜೀವನ ಅಸ್ತವ್ಯಸ್ತಗೊಂಡಿತ್ತು. ಇದು ಶನಿವಾರವೂ ಸಹ ಮುಂದುವರೆಯಿತು.



ಬೆಳಗ್ಗೆಯಿಂದ ಸಂಜೆ ತನಕವೂ ಸಹ ಆಗಾಗ್ಗೆ ಮಳೆ ಸುರಿಯಿತು. ದಿನದ ಪೂರ್ತಿ ಮೋಡ ಕವಿದ ವಾತಾವರಣ ಇತ್ತು. ಬಿಸಿಲೇ ಕಂಡು ಬರಲಿಲ್ಲ. ನಾಗರಿಕರು ಛತ್ರಿ, ಜರ್ಕಿನ್, ಸ್ವೆಟರ್, ಟೋಪಿ ಮೊರೆ ಹೋದರು. ಜಿಲ್ಲಾ ಕೇಂದ್ರವಾದ ಚಾಮರಾಜನಗರದಲ್ಲಿ ಬಹುತೇಕ ರಸ್ತೆಗಳು ಸರಿ ಇಲ್ಲದ ಕಾರಣ ಅಂತಹ ರಸ್ತೆಗಳು ಕೆಸರುಮಯವಾಗಿತ್ತು. ಇದರಿಂದ ಜನರು ಓಡಾಡಲು ಸಾಧ್ಯವಾಗದೆ, ಪರದಾಡುತ್ತಿದ್ದ ದೃಶ್ಯ ಸರ್ವೇ ಸಾಮಾನ್ಯವಾಗಿತ್ತು.

ದಿನವಿಡೀ ಮಳೆ ಸುರಿದ ಕಾರಣ ಬೀದಿ ಬದಿ ವ್ಯಾಪಾರಿಗಳು, ತಳ್ಳುಗಾಡಿಗಳ ವ್ಯಾಪಾರಸ್ಥರ ಪರಿಸ್ಥಿತಿ ಹೇಳತೀರದಂತಾಗಿತ್ತು. ಜನರ ಓಡಾಟ ಕಡಿಮೆ ಇತ್ತು.

ಒಂದನೇ ಪುಟದಿಂದ

ಉರುಳಿಗೆ ಹೆಣ್ಣುಲಿ ಬಲಿ

ಅಂತರಸಂತೆ ವಲಯದ ನಾಯಂಜಿ ಕಟ್ಟೆ ಸುತ್ತಮುತ್ತ ಸಂಚರಿಸುತ್ತಿದ್ದ ಈ ಹುಲಿ ಕಳೆದ 8 ತಿಂಗಳ ಹಿಂದೆ ಮೂರು ಮರಿಗಳಿಗೆ ಜನ್ಮ ನೀಡಿತ್ತು. 'ನಾಯಂಜಿ ಕಟ್ಟೆ ಫೀಮೇಲ್' ಎಂದೇ ಕರೆಯಲ್ಪಡುತ್ತಿದ್ದ ಈ ಹುಲಿಯು ಇತರ ಹುಲಿಗಳಿಂದ ತನ್ನ ಮರಿಗಳನ್ನು ರಕ್ಷಿಸಿಕೊಳ್ಳುವ ಸಲುವಾಗಿ ತಾರಕ ವಲಯದತ್ತ ನೆಲೆ ಸ್ಥಳಾಂತರಿಸಿತ್ತು. ಕಳೆದ ಮೂರು ತಿಂಗಳ ಹಿಂದೆ ತಾರಕ ಹಳ್ಳದ ಸುತ್ತಮುತ್ತ ಕಾಣಿಸಿಕೊಳ್ಳುತ್ತಿತ್ತು. ತನ್ನ ಮರಿಗಳ ರಕ್ಷಣೆಗಾಗಿಯೇ ಈ ಪ್ರದೇಶಕ್ಕೆ ಹುಲಿ ಬಂದಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಎಚ್ಚರ ವಹಿಸಿದ್ದರು. ಆದರೆ ಇಂದು ತಾರಕದ ಪವಿತ್ರ ಹಾಗೂ ಅಸ್ಲಾಂ ಎಂಬುವರ ಜಮೀನಿನ ನಡುವೆ ಹಾದು ಹೋಗಿರುವ ಹಳ್ಳದಲ್ಲಿ ಕೊಳೆತ ಸ್ಥಿತಿಯಲ್ಲಿ ಹುಲಿಯ ಕಳೇಬರ ಪತ್ತೆಯಾಗಿದೆ. 12 ವರ್ಷದ ಈ ಹೆಣ್ಣು ಹುಲಿ ಕಾಡು ಹಂದಿ ಬೇಟೆಗಾಗಿ ಅಳವಡಿಸಿದ್ದ ಉರುಳಿಗೆ ಸಿಲುಕಿ ಮೃತಪಟ್ಟಿದೆ. ಇದು ನಾಯಂಜಿ ಕಟ್ಟೆ ಸುತ್ತಮುತ್ತ ಓಡಾಡುತ್ತಿದ್ದ ಹುಲಿಯೇ ಎಂಬುದನ್ನು ಅರಣ್ಯಾಧಿಕಾರಿಗಳು ಖಚಿತಪಡಿಸಿಕೊಂಡಿದ್ದಾರೆ. ಈ ಹೆಣ್ಣು ಹುಲಿ 7 ಅಥವಾ 8 ದಿನಗಳ ಹಿಂದೆ ಸಾವನ್ನಪ್ಪಿರಬಹುದು ಎಂದು ಅರಣ್ಯ ಇಲಾಖೆಯ ಪಶು ವೈದ್ಯಾಧಿಕಾರಿಗಳು ಅಂದಾಜಿಸಿದ್ದಾರೆ. ಹುಲಿಯ ಕಳೇಬರ ಕೊಳೆತ ಸ್ಥಿತಿಯಲ್ಲಿದೆ. ಸ್ಥಳದಲ್ಲಿ ಅದರ ಮರಿಗಳ ಚಲನ-ವಲನದ ಕುರುಹುಗಳು ಪತ್ತೆಯಾಗಿವೆ.

ಅರಣ್ಯ ಇಲಾಖೆಯ ಅಧಿಕಾರಿಗಳು ಹುಲಿ ಕಳೇಬರವನ್ನು ಅರಣ್ಯ ಪ್ರದೇಶದಲ್ಲಿ ಹೂತಿದ್ದಾರೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ನರಗುಂದ, ಎಸಿಎಫ್ ರಂಗಸ್ವಾಮಿ, ವೈಲ್ಡ್ ಲೈಫ್ ವಾರ್ಡನ್‌ಗಳಾದ ಕೃತಿಕಾ ಆಲನಹಳ್ಳಿ, ಕೃಷ್ಣಪ್ಪ, ಎನ್‌ಟಿಸಿಎ ಪ್ರತಿನಿಧಿ ವೆಂಕಟೇಶ್, ಅಂತರಸಂತೆ ಆರ್‌ಎಫ್‌ಓ ಸಿದ್ದರಾಜು, ಡಿ.ಬಿ.ಕುಪ್ಪೆ ಆರ್‌ಎಫ್‌ಓ ಮಧು, ಮೇಟಿಕುಪ್ಪೆ ಆರ್‌ಎಫ್‌ಓ ಹರ್ಷಿತ್, ಪಶು ವೈದ್ಯಾಧಿಕಾರಿ ಡಾ. ರಮೇಶ್ ಇನ್ನಿತರರು ಸ್ಥಳಕ್ಕೆ ಭೇಟಿ ನೀಡಿದ್ದರು. ತಾಯಿ ಹುಲಿ ಸಾವನ್ನಪ್ಪಿರುವುದರಿಂದ ಆಹಾರವಿಲ್ಲದೆ, ಮೇಲಾಗಿ ತಾಯಿಯ ಆಸರೆ ಇಲ್ಲದೇ ತಬ್ಬಲಿಯಾಗಿರುವ ಮರಿಗಳ ಆರೋಗ್ಯ ಸ್ಥಿತಿ ಗಂಭೀರವಾಗಿರಬಹುದು ಎಂದು ಅರಣ್ಯಾಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಸ್ವತಂತ್ರವಾಗಿ ಬೇಟೆಯಾಡಲು ಇನ್ನೂ ಸಾಮರ್ಥ್ಯವಿಲ್ಲದ 8 ತಿಂಗಳ ಈ ಮರಿಗಳು, ಆದರೂ ತಕ್ಕ ಮಟ್ಟಿಗೆ ಸಣ್ಣಪುಟ್ಟ ಪ್ರಾಣಿಗಳನ್ನು ಬೇಟೆಯಾಡುವ ಸಾಮರ್ಥ್ಯವನ್ನು ಹೊಂದಿವೆ. ಆದರೆ ಈ ಮರಿಗಳಿಗೆ ಸಣ್ಣ ಪ್ರಾಣಿಗಳು ದೊರೆತಿವೆಯೇ? ಎಂಬ ಪ್ರಶ್ನೆ ಕಾಡುತ್ತಿದೆ. ಅಲ್ಲದೇ ಬೇರೆ ಹುಲಿಗಳು ಈ ಮರಿಗಳ ಕಂಡರೆ ಅವರುಗಳ ಪ್ರಾಣಕ್ಕೆ ಸಂಚಕಾರವಿದೆ ಎಂಬ ಕಾರಣಕ್ಕೆ ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಮರಿಗಳ ರಕ್ಷಣೆಗಾಗಿ ಹುಡುಕಾಟ ನಡೆಸಿದ್ದಾರೆ.

ಹೆಗಲುಕೊಟ್ಟ ಮುಸ್ಲಿಂ ಬಾಂಧವರು...!

ವೇಳೆಯಲ್ಲಿ ಮೃತಪಟ್ಟಿದ್ದಾರೆ. ಈ ವಿಷಯ ತಿಳಿಯುತ್ತಿದ್ದಂತೆಯೇ ಇಸ್ಲಾಮಿಯಾ ಅಂಜುಮಾನ್ ಕಮಿಟಿಯವರು ಆಕೆಯ ಮನೆಯವರನ್ನು ಹುಡುಕಿ ಕರೆತಂದಿದ್ದಾರೆ. ಶಿವಮ್ಮ ಅವರ ಪಾರ್ಥಿವ ಶರೀರವನ್ನು ಕೊಂಡೊಯ್ದು ಅಂತ್ಯಕ್ರಿಯೆ ನೆರವೇರಿಸುವಂತೆ ಕಮಿಟಿಯವರು ಹೇಳಿದಾಗ ಅದಕ್ಕೆ ಅಸಹಾಯಕತೆ ವ್ಯಕ್ತಪಡಿಸಿದ ಮಗ ಮತ್ತು ಮಗಳು, ನಾವು ನಮ್ಮ ಮನೆಗೆ ದೇಹವನ್ನು ಕೊಂಡೊಯ್ಯುವುದಿಲ್ಲ. ಆಕೆ 30 ವರ್ಷದಿಂದ ನಿಮ್ಮ ನಡುವೆಯೇ ಇದ್ದುದ್ದರಿಂದ ನೀವೇ ಅಂತ್ಯಕ್ರಿಯೆ ನೆರವೇರಿಸಿ ಎಂದು ಮುಸ್ಲಿಂ ಬಾಂಧವರಲ್ಲಿ ಮನವಿ ಮಾಡಿದರಂತೆ. ಎಷ್ಟೇ ತಿಳಿ ಹೇಳಿದರೂ, ಅಂತ್ಯಕ್ರಿಯೆ ನೆರವೇರಿಸಲು ಶಿವಮ್ಮಳ ಮಗ ಹಾಗೂ ಮಗಳು ಒಪ್ಪದಿದ್ದಾಗ ಮುಸ್ಲಿಂ ಬಾಂಧವರು ಶಿವಮ್ಮಳ ಗುಡಿಸಲ ಮುಂದೆ ಪೆಂಡಾಲ್ ಹಾಗೂ ಚೇರ್‌ಗಳನ್ನು ಹಾಕಿ ರಾತ್ರಿಯಿಡೀ ಸುಮಾರು 50ಕ್ಕೂ ಹೆಚ್ಚು ಮುಸ್ಲಿಂ ಬಾಂಧವರು ಕಾವಲಿದ್ದರು. ರಾತ್ರಿ ಶಿವಮ್ಮಳ ಮಗ, ಮಗಳು, ಸೊಸೆ ಹಾಗೂ ಮೊಮ್ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಿ, ಅಲ್ಲೇ ಇರಿಸಿಕೊಂಡಿದ್ದಾರೆ. ಅಂತ್ಯ ಸಂಸ್ಕಾರದ ವಿಧಿ ವಿಧಾನಗಳನ್ನು ಹಿಂದೂ ಸಂಪ್ರದಾಯದಂತೆ ಹೇಗೆ ಮಾಡಬೇಕು ಎಂಬುದರ ಬಗ್ಗೆ ತಮ್ಮ ಹಿಂದೂ ಸ್ನೇಹಿತರಿಂದ ಮಾಹಿತಿ ಪಡೆದು ಅಚ್ಚುಕಟ್ಟಾಗಿ ಎಲ್ಲಾ ವ್ಯವಸ್ಥೆಯನ್ನು ಮಾಡಿದ ಮುಸ್ಲಿಂ ಬಾಂಧವರು, ಸುನ್ನಿಚೌಕ್‌ನಿಂದ ಜೋಡಿ ತೆಂಗಿನಮರ ರುದ್ರಭೂಮಿಗೆ ಪಾರ್ಥಿವ ಶರೀರವನ್ನು ತಂದಿದ್ದಾರೆ. ಈ ವೇಳೆ ಮುಸ್ಲಿಂ ಬಾಂಧವರೇ ಶವಕ್ಕೆ ಹೆಗಲು ಕೊಟ್ಟು ಹೊತ್ತು ಸಾಗಿದರು. ರುದ್ರಭೂಮಿಯಲ್ಲಿ ಶಿವಮ್ಮಳ ಮಗ, ಮಗಳು, ಸೊಸೆ ಹಾಗೂ ಮೊಮ್ಮಕ್ಕಳು ವಿಧಿವತ್ತಾಗಿ ಪೂಜೆ ಸಲ್ಲಿಸಿದ ನಂತರ ಅಂತ್ಯಕ್ರಿಯೆ ನೆರವೇರಿಸಲಾಯಿತು. ಕೊನೆಯವರೆಗೂ ಅಲ್ಲೇ ಇದ್ದ 60 ಕ್ಕೂ ಹೆಚ್ಚು ಮುಸ್ಲಿಂ ಬಾಂಧವರು ನಂತರ ಸುನ್ನಿಚೌಕ್‌ನಲ್ಲಿ ಊಟದ ವ್ಯವಸ್ಥೆಯನ್ನು ಮಾಡಿದ್ದರು.

ಶಿವಮ್ಮರ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿದ್ದ ಮಾಜಿ ಕಾರ್ಪೋರೇಟರ್ ಸುಹೇಲ್ ಬೇಗ್ ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಶಿವಮ್ಮ ಕಳೆದ 30 ವರ್ಷಗಳಿಂದ ಸುನ್ನಿಚೌಕ್‌ನ ಇಸ್ಲಾಮಿಯಾ ಅಂಜುಮಾನ್ ಕಮಿಟಿ ಮುಂಭಾಗ ಗುಡಿಲಲ್ಲಿ ವಾಸವಿದ್ದರು. ಅಲ್ಲಿನ ಎಲ್ಲಾ ಮುಸ್ಲಿಂ ಕುಟುಂಬದವರಿಗೂ ಅವರು ಅಚ್ಚುಮೆಚ್ಚು. ಯಾವುದೇ ಮನೆಯಲ್ಲಿ ಸಮಾರಂಭ ನಡೆದರೂ, ಕುಳ್ಳಿಯನ್ನು ಕರೆಯಿರಿ ಎಂದು ಆಕೆಯನ್ನು ಆಹ್ವಾನಿಸುತ್ತಿದ್ದರು. ಶಿವಮ್ಮ ಇಲ್ಲದಿದ್ದರೆ ಕುಳ್ಳಿ ಯಾಕೆ ಬರಲಿಲ್ಲ ಎಂದು ಮಹಿಳೆಯರು, ಮಕ್ಕಳಾದಿಯಾಗಿ ಕೇಳುತ್ತಿದ್ದರು. ಆಕೆ ಯಾಕೆ ಮಗ ಹಾಗೂ ಮಗಳ ಮನೆಗೆ ಹೋಗದೇ ಇಲ್ಲೆ ಉಳಿದುಬಿಟ್ಟರು ಎಂಬುದು ಗೊತ್ತಿಲ್ಲ. ಆದರೆ ಅವರ ಮಗ ಆಗಿಂದಾಗ್ಗೆ ಬಂದು ತಾಯಿಯನ್ನು ಮಾತನಾಡಿಸಿಕೊಂಡು ಹೋಗುತ್ತಿದ್ದ. ಟಿಪ್ಪು ಜಯಂತಿ ಸೇರಿದಂತೆ ಮುಸ್ಲಿಂಮರ ಎಲ್ಲಾ ಹಬ್ಬಗಳಲ್ಲೂ ಶಿವಮ್ಮ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಸ್ವಚ್ಛತಾ ಕಾರ್ಯವನ್ನು ಮಾಡುತ್ತಿದ್ದರು. ಅವರ ಅಂತ್ಯಸಂಸ್ಕಾರವನ್ನು ನಾವೇ (ಮುಸ್ಲಿಂ ಬಾಂಧವರು) ಮಾಡಬೇಕು ಎಂದು ಆಕೆಯ ಕುಟುಂಬದವರು ಯಾಕೆ ನಿರ್ಧರಿಸಿದರೋ ಗೊತ್ತಿಲ್ಲ. 30 ವರ್ಷದಿಂದ ನಮ್ಮ ನಡುವೆಯೇ ಬದುಕಿದ್ದರಿಂದ ಈ ಬಾಂಧವ್ಯದ ಕಾರಣದಿಂದಾಗಿ ನಾವೇ ಅಂತ್ಯಸಂಸ್ಕಾರ ಮಾಡಲಿ ಎಂದು ಕುಟುಂಬದವರು ನಿರ್ಧರಿಸಿರಬಹುದು ಎಂಬುದು ನಮ್ಮ ಭಾವನೆ ಎಂದರು. ಮಾಜಿ ಕಾರ್ಪೊರೇಟರ್ ಸುಹೇಲ್ ಬೇಗ್ ಜೊತೆಗೆ ಅಬ್ದುಲ್ ಜಮೀರ್, ಅಬ್ದುಲ್ ಸಲಾಂ, ವಾಜಿದ್ ಸಲ್ಮಾನ್, ಶಮೀಲ್ ಖಾನ್, ಅಜೀಜ್ ಇನ್ನಿತರರು ಮುಂದಾಳತ್ವ ವಹಿಸಿದ್ದರು.

ಮಳೆಗಾಲದ ಮಲೆನಾಡಾಯ್ತು ಮೈಸೂರು!

ಇದರಿಂದ ವಾಹನ ಸಂಚಾರದಲ್ಲೂ ವ್ಯತ್ಯಯವಾಗಿತ್ತು. ಕೆಲ ವೇಳೆ ಮಂಜಿನಲ್ಲಿ ಸ್ಪಷ್ಟವಾಗಿ ದಾರಿ ಕಾಣಿಸದಂತಾಗಿ ದ್ವಿಚಕ್ರ ವಾಹನ, ಕಾರು, ಆಟೋ ಚಾಲಕರು ವಾಹನದ ಹೆಡ್‌ಲೈಟ್ ಆನ್ ಮಾಡಿ, ಚಾಲಿಸಿದ್ದು ಕಂಡು ಬಂದಿತು. ಮಿರರ್‌ಗಳ ಮೇಲೆ ಮಂಜಿನ ಹನಿ ಮುತ್ತುತ್ತಿದ್ದ ಕಾರಣ ಹಿಂದಿನಿಂದ ಬರುವ ವಾಹನಗಳನ್ನು ಗಮನಿಸಲಾರದ ಆಗಾಗ್ಗೆ ಮಿರರ್‌ಗಳನ್ನು ಒರೆಸಿ ಸ್ವಚ್ಛಗೊಳಿಸುತ್ತಿದ್ದರು. ವಾರಾಂತ್ಯ ಹಿನ್ನೆಲೆಯಲ್ಲಿ ವಾಹನಗಳ ಸಂಚಾರ ಎಂದಿಗಿಂತ ಹೆಚ್ಚಾಗಿದ್ದಾದರೂ ಸುಗಮ ಸಂಚಾರಕ್ಕೆ ಮಳೆಯಿಂದಾಗಿ ಅಡ್ಡಿಯಾಯಿತು. ಸಯ್ಯಾಜಿರಾವ್ ರಸ್ತೆ, ಕೃಷ್ಣರಾಜ ವೃತ್ತ, ಚಾಮರಾಜ ವೃತ್ತ, ಜಯಚಾಮರಾಜೇಂದ್ರ ವೃತ್ತ ಸೇರಿದಂತೆ ಹಲವೆಡೆ ವಾಹನ ದಟ್ಟಣೆ ವಿಪರೀತವಾಗಿದ್ದು ಕನಿಷ್ಠ 10-15 ನಿಮಿಷ ಸಾಲುಗಟ್ಟಿ ನಿಲ್ಲುವಂತಾಗಿತ್ತು.

ಮುನ್ನೆಚ್ಚರಿಕೆ ವಹಿಸಿದ್ದ ಜನ: ನಿನ್ನೆ ಬೆಳಿಗ್ಗೆ 11.30ರ ನಂತರ ಶುರುವಾದ ಮಳೆ, ಒಂದೆರಡು ಬಾರಿ ಬಿರುಸಾಗಿ ಸುರಿದಿತ್ತು. ಹಾಗೆಯೇ ಸಂಜೆವರೆಗೂ ಮೋಡ ಕವಿದ ವಾತಾವರಣವಿತ್ತು. ಅಲ್ಲದೆ ಕೆಲ ದಿನಗಳ ಕಾಲ ಜಡಿ ಮಳೆಯ ಮುನ್ಸೂಚನೆ ಯಿದ್ದ ಕಾರಣ ಜನ ಮುನ್ನೆಚ್ಚರಿಕೆ ವಹಿಸಿದ್ದರು. ಮನೆಯಿಂದ ಹೊರಡುವಾಗಲೇ ಮಳೆಯಿಂದ ರಕ್ಷಿಸಿಕೊಳ್ಳಲು ಬೇಕಾದ ಪರಿಕರಗಳನ್ನು ಜೊಡಿಸಿಕೊಂಡಿದ್ದರು. ಹಾಗಾಗಿ ಮಳೆ ಸುರಿಯುವಾಗ ಪಾದಚಾರಿಗಳ ಕೈಯ್ಯಲ್ಲಿದ್ದ ಛತ್ರಿಗಳು ಗರಿ ಬಿಚ್ಚಿದ್ದವು. ಹಲವರು ಜರ್ಕಿನ್ ಹಾಗೂ ತಲೆಗೆ ಕ್ಯಾಪ್ ಧರಿಸಿ ಓಡಾಡುತ್ತಿದ್ದರು. ಜುಮು ಜುಮು ಚಳಿಯಿಂದಾಗಿ ಕೆಲವರು ಸ್ವೆಟರ್, ಟೋಪಿಗೆ ಮೊರೆ ಹೋಗಿದ್ದರು. ವ್ಯಾಪಾರಿಗಳು ವಿಶಾಲವಾಗಿ ತೆರೆದುಕೊಳ್ಳುವ ಛತ್ರಿಯ ಆಸರೆಯಲ್ಲೇ ವ್ಯಾಪಾರ ಮುಂದುವರೆಸಿದರು.

ಮಳೆಯಲ್ಲಿ 'ಗುಂಡಿ ಗಂಡಾಂತರ': ಮೈಸೂರಲ್ಲಿ 'ಗುಂಡಿ ಗಂಡಾಂತರ' ಇನ್ನೂ ತಪ್ಪಿಲ್ಲ. ರಸ್ತೆ ಅಭಿವೃದ್ಧಿ ಮಾತಿರಲಿ ಅಪಾಯಕಾರಿಯಾದ ಗುಂಡಿಗಳನ್ನಾದರೂ ಮುಚ್ಚುವ ಕಳಕಳಿ ನಗರ ಪಾಲಿಕೆಗೆ ಇದ್ದಂತಿಲ್ಲ. ಜನ ಪ್ರತಿಭಟನೆ ಮಾಡಿದರು, ಮಾಧ್ಯಮಗಳಲ್ಲಿ ಪ್ರಕಟವಾದರೂ ದಪ್ಪಚರ್ಮದ ಕೆಲ ಅಧಿಕಾರಿಗಳು ತಲೆ ಕೆಡಿಸಿಕೊಳ್ಳುವಂತಿಲ್ಲ. ಬಹುತೇಕ ಎಲ್ಲಾ ರಸ್ತೆಗಳೂ ಗುಂಡಿಮಯವಾಗಿದ್ದು ಸಾರ್ವಜನಿಕರು ಪರಿತಪಿಸುವಂತಾಗಿದೆ. ಅದರಲ್ಲೂ ಮಳೆಯ ವೇಳೆ ನರಕವಾಗಿಬಿಟ್ಟಿದ್ದವು. ಗುಂಡಿಗಳಲ್ಲಿ ನೀರು ತುಂಬುವುದರಿಂದ ಅದರ ಆಳ-ಅಗಲ ತಿಳಿಯುವುದಿಲ್ಲ. ಅದೆಷ್ಟೋ ದ್ವಿಚಕ್ರ ವಾಹನ ಸವಾರರು ಮಳೆಯಲ್ಲಿ ರಸ್ತೆ ಗುಂಡಿಯಿಂದ ನೆಲಕ್ಕುರುಳಿ ಗಾಯಗೊಂಡಿದ್ದಾರೆ. ಕಾರು ಇತರೆ ವಾಹನಗಳು ಮಳೆ ನೀರು ತುಂಬಿದ ಗುಂಡಿಗಿಳಿದು ಚಾಲಕನ ನಿಯಂತ್ರಣ ತಪ್ಪಿ ಅಪಘಾತವಾಗುವ ಸಾಧ್ಯತೆಯೂ ಇದೆ. ಮಳೆಯಲ್ಲಿ ಗುಂಡಿ ತಪ್ಪಿಸಿಯಾದ ಸಂಚರಿಸುವಾಗ ವಾಹನಗಳು ಅದುರುವುದರಿಂದ ಸವಾರರು ಬೆನ್ನುಹುರಿ ಸಮಸ್ಯೆಗೆ ತುತ್ತಾಗುವಂತಾಗಿದೆ.

ಮೂರ್ನಾಲ್ಕು ದಿನ ಮಳೆ: ಭಾರತೀಯ ಹವಾಮಾನ ಇಲಾಖೆಯ ಮಾಹಿತಿ ಅನ್ವಯ ಮೈಸೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ಇನ್ನೂ ಮೂರ್ನಾಲ್ಕು ದಿನ ಮೋಡ ಕವಿದ ವಾತಾವರಣದೊಂದಿಗೆ ತುಂತುರು ಮಳೆಯಾಗುವ ಸಾಧ್ಯತೆ ಇದೆ.

ಸೆಣಸಾಡಲು ಸಿದ್ದರಾಮಯ್ಯ ನಿರ್ಧಾರ

ಈ ಬಾರಿ ಸುರಕ್ಷಿತ ಕ್ಷೇತ್ರಕ್ಕಾಗಿ ನಿರಂತರ ಹುಡುಕಾಟ ನಡೆಸುತ್ತಿದ್ದ ಇದ್ದರು. ಕೋಲಾರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಉದ್ದೇಶದಿಂದ ನಾಳೆ ಆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ದೇವಾಲಯ, ಚರ್ಚ್, ಮಸೀದಿಗಳು ಹಾಗೂ ಸಂಘ-ಸಂಸ್ಥೆಗಳಿಗೆ ಇಡೀ ದಿನ ಭೇಟಿ ನೀಡಲಿದ್ದಾರೆ. ಕೋಲಾರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಸಂಬಂಧ ಕಳೆದ ಎರಡು ದಿನಗಳಿಂದ ಸಿದ್ದರಾಮಯ್ಯ ಜಿಲ್ಲೆಯ ಹಿರಿಯ ಮುಖಂಡರು ಹಾಗೂ ಸಂಘ-ಸಂಸ್ಥೆಗಳೊಟ್ಟಿಗೆ ನಿರಂತರ ಸಮಾಲೋಚನೆ ನಡೆಸಿದ್ದಾರೆ. ನಾಳೆ ಬೆಳಿಗ್ಗೆ ಕೋಲಾರಕ್ಕೆ ತೆರಳುವ ಸಿದ್ದರಾಮಯ್ಯ ಅಲ್ಲಿನ ಕೋಲಾರಮ್ಮ ದೇವಾಲಯ, ಮೆಥೋಡಿಸ್ಟ್ ಚರ್ಚ್, ಮಹರ್ಷಿ ವಾಲ್ಮೀಕಿ ಪ್ರತಿಮೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಮಹಾತ್ಮಗಾಂಧಿ ಹಾಗೂ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ಕಲಾ ಮಂದಿರ, ದರ್ಗಾ, ನಾರಾಯಣ ಯತೀಂದ್ರ ಪ್ರತಿಮೆ ಹಾಗೂ ನರಸಾಪುರ ಕೆರೆ ವೀಕ್ಷಣೆ ಮಾಡಲಿದ್ದಾರೆ.

ಧನ-ಕನಕ ತೊರೆದ ಕನಕದಾಸರದ್ದು ಚಿನ್ನದ ಗುಣ

● ಸಾಹಿತಿ-ಅಂಕಣಕಾರ ಬನ್ನೂರು ರಾಜು ಅಭಿಮತ ● ಕನಕ ಗುರುಪೀಠದಿಂದ ಆಚರಣೆ ● ಎಲ್ಲರ ಹಿತ ಬಯಸಿದ ಕನಕದಾಸರು ಶ್ರೇಷ್ಠರು: ತನ್ವೀರ್



ಮೈಸೂರಿನ ಕಾಗಿನೆಲೆ ಕನಕ ಗುರುಪೀಠದ ಶಾಖಾ ಮಠದ ಕನಕಭವನದಲ್ಲಿ ಆಯೋಜಿಸಿದ್ದ ಕನಕದಾಸರ ಜಯಂತಿ ಮಹೋತ್ಸವದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಆತ್ಮೀಯವಾಗಿ ಸನ್ಮಾನಿಸಿ, ಅಭಿನಂದಿಸಲಾಯಿತು.

ಮೈಸೂರು,ನ.12(ಎಂಟಿವೈ)-ಚಿನ್ನದಂತಹ ಮನಸ್ಸುಳ್ಳ ಭಕ್ತ ಕನಕದಾಸರ ವ್ಯಕ್ತಿತ್ವವನ್ನು ಎಲ್ಲರೂ ಅರ್ಥ ಮಾಡಿಕೊಂಡಾಗ ಮಾತ್ರ ಶಾಂತಿಯುತ, ಸಾಮರಸ್ಯ ಸಮಾಜ ನಿರ್ಮಿಸಬಹುದು ಎಂದು ಸಾಹಿತಿ ಹಾಗೂ ಅಂಕಣಕಾರ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದ ಕಾಗಿನೆಲೆ ಕನಕ ಗುರುಪೀಠದ ಶಾಖಾ ಮಠದ ಆವರಣದಲ್ಲಿರುವ ಕನಕಭವನದಲ್ಲಿ ಶನಿವಾರ ಸಂತ ಶ್ರೀ ಕನಕದಾಸರ ಜಯಂತೋತ್ಸವ ಸಮಿತಿ ಆಯೋಜಿಸಿದ್ದ ಭಕ್ತ ಕನಕದಾಸರ 535ನೇ ಜಯಂತಿ ಮಹೋತ್ಸವದಲ್ಲಿ ಪ್ರಧಾನ ಭಾಷಣ ಮಾಡಿದ ಅವರು, ದೇಶದಲ್ಲಿ ಅನೇಕ ಮಹಾನ್ ನಾಯಕರು ಬಂದು ಹೋಗಿದ್ದಾರೆ. ಆದರೆ, ಕನಕದಾಸರಂತಹ ದಾರ್ಶನಿಕರು ಸರಳ ಭಾಷೆಯಲ್ಲಿ ಕೀರ್ತನೆಗಳ ಮೂಲಕ ಜನರಿಗೆ ಸುಲಭವಾಗಿ ಅರ್ಥವಾಗುವಂತೆ ತಿಳಿ ಹೇಳುವ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸಿದರು. ಅವರ ಕೀರ್ತನೆಗಳಲ್ಲಿದ್ದ ಗೂಢಾರ್ಥಗಳನ್ನು ಬೇರೆ ಯಾರಿಂದಲೂ ನಿರೀಕ್ಷಿಸಲು ಸಾಧ್ಯವಿಲ್ಲ. 'ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ', 'ಯಮ ಸುತನ ರಾಣಿ' ಹೀಗೆ ಅನೇಕ ಗೂಢಾರ್ಥಗಳ ಮೂಲಕ ಸಮಾಜವನ್ನು ಜಾಗೃತಗೊಳಿಸಿದರು.

ಕನಕದಾಸರು ತಮಗೆ ಸಿಕ್ಕ ಚಿನ್ನದ ಕೊಪ್ಪರಿಕೆಯನ್ನು ತಮ್ಮ ವೈಯಕ್ತಿಕ ಬದುಕಿಗೆ ಬಳಸಿಕೊಳ್ಳಲಿಲ್ಲ. ಎಲ್ಲವನ್ನೂ ಸಮಾಜಕ್ಕೆ ಧಾರೆ ಎರೆದರು. ಕೊನೆಯಲ್ಲಿ ಒಂದು ತಂಬೂರಿಯನ್ನು ತಮ್ಮ ಜೊತೆಯಲ್ಲಿಟ್ಟುಕೊಂಡರು. ಕನಕ ಎಂದರೆ ಚಿನ್ನ ಎಂದರ್ಥ. ಹೆಸರಿಗೆ ತಕ್ಕಂತೆ ಕನಕದಾಸರದ್ದು ಚಿನ್ನದಂತಹ ಗುಣ. ಆದರೆ, ಬಹುತೇಕರು ಕನಕದಾಸರನ್ನು ಅರ್ಥ ಮಾಡಿಕೊಂಡಿಲ್ಲ. ಈ ಸಂತಶ್ರೇಷ್ಠರನ್ನು ಅರ್ಥ ಮಾಡಿಕೊಂಡರೆ ಮಾನವ ಕುಲದ ಪಾತ ಕಲಿತಂತೆ ಆಗುತ್ತದೆ. ಈ ಹಿನ್ನೆಲೆಯಲ್ಲಿ 'ಭಕ್ತ ಕನಕದಾಸ' ಚಲನಚಿತ್ರವನ್ನು ಯುವಜನರಿಗೆ ತೋರಿಸುವ ಕೆಲಸವಾಗಬೇಕು. ಮುಂಬರುವ ವರ್ಷಗಳಲ್ಲಿ ಕನಕದಾಸರ ಜಯಂತಿ ಅಂಗವಾಗಿ ಕನಿಷ್ಠ ಒಂದು ವಾರವಾದರೂ ಕನಕದಾಸರ ಚಲನಚಿತ್ರೋತ್ಸವ ಆಯೋಜಿಸುವ ಮೂಲಕ ಅವರ ವಿಚಾರಧಾರೆ ಜಗತ್ತಿಗೆ ಪರಿಚಯಿಸುವ ಕೆಲಸವಾಗಬೇಕು. ಚಲನಚಿತ್ರ ಮಾಧ್ಯಮ ಪರಿಣಾಮಕಾರಿಯಾಗಿರುವುದರಿಂದ ಕನಕದಾಸರ ಜಯಂತ್ಯೋತ್ಸವ ಸಮಿತಿ ವತಿಯಿಂದಲಾದರೂ ಕನಕದಾಸರ ಚಲನಚಿತ್ರೋತ್ಸವ ಆಯೋಜಿಸುವುದು ಸೂಕ್ತ ಎಂದು ಸಲಹೆ ನೀಡಿದರು.

> “ಭಕ್ತಿ ಮೂಲಕ ದೇವರನ್ನು ಒಲಿಸಿಕೊಳ್ಳಬಹುದು ಎಂದು ಕನಕದಾಸರು ಸಂದೇಶ ಸಾರಿದರು. ಜಗತ್ತಿನಲ್ಲಿರುವ ಯಾವುದೇ ಜಾತಿ, ಜನಾಂಗ, ಧರ್ಮದ ಜನರು ದೇವರನ್ನು ನೇರವಾಗಿ ನೋಡಿಲ್ಲ. ಆದರೆ, ದೇವರು ಇದ್ದಾನೆ ಎಂಬ ನಂಬಿಕೆ ಮೇಲೆ ಸಮಾಜ ಮುನ್ನಡೆಯುತ್ತಿದೆ. ಯಾರೂ ನೋಡದ ಕಡೆ ಬಾಳೆಹಣ್ಣು ತಿನ್ನುವಂತೆ ಗುರುಗಳು ಹೇಳಿದಾಗ ಎಲ್ಲಾ ಮಕ್ಕಳು ಯಾವುದೋ ಮೂಲೆಯಲ್ಲಿ ಬಾಳೆಹಣ್ಣು ತಿಂದು ಬಂದರೆ, ಕನಕದಾಸರು ಮಾತ್ರ ಹಣ್ಣನ್ನು ತಿನ್ನದೇ ಹಾಗೆ ವಾಪಸ್ಸಾಗಿದ್ದರು. ಇದನ್ನು ಪ್ರಶ್ನಿಸಿದ ಗುರುಗಳಿಗೆ ಎಲ್ಲೆಡೆ ದೇವರಿದ್ದಾನೆ ಎಂಬ ದಿಟ ಸತ್ಯ ಸಂದೇಶವನ್ನು ಕನಕದಾಸರು ತಮ್ಮ ಬಾಲ್ಯಾವಸ್ಥೆಯಲ್ಲಿದ್ದಾಗಲೇ ಮನವರಿಕೆ ಮಾಡಿಕೊಡುವಂತಹ ದೊಡ್ಡ ಗುಣವನ್ನು ಕನಕದಾಸರು ಹೊಂದಿದ್ದರು.
> **-ಬನ್ನೂರು ಕೆ.ರಾಜು, ಸಾಹಿತಿ**

ಶಾಸಕ ತನ್ವೀರ್ ಸೇಠ್ ಮಾತನಾಡಿ, ಸಮಾಜದಲ್ಲಿ ಬಹಳ ದಿನದಿಂದಲೂ ವ್ಯತ್ಯಾಸಗಳು, ವೈರುಧ್ಯಗಳು ನೆಲೆ ನಿಂತಿವೆ. ಇದನ್ನು ಗಮನಿಸಿ 500 ವರ್ಷಗಳ ಹಿಂದೆಯೇ ಸಂತಶ್ರೇಷ್ಠ ಭಕ್ತ ಕನಕದಾಸರು 'ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆ ಏನಾದರೂ ಬಲ್ಲಿರಾ' ಎಂದು ಸೂಚ್ಯವಾಗಿ ಹೇಳುವ ಮೂಲಕ ಜಾತಿ ವ್ಯವಸ್ಥೆಯನ್ನು ತಮ್ಮದೇ ಧಾಟಿಯಲ್ಲಿ ಟೀಕಿಸಿದ್ದರು. ನಾವು ಯಾರು ಇಂತದ್ದೇ ಜಾತಿ ಹಾಗೂ ಕುಟುಂಬದಲ್ಲಿ ಹುಟ್ಟಬೇಕು ಎಂದು ಬಯಸಿರುವುದಿಲ್ಲ. 'ನೀ ತಂದೆ, ನಾ ಬಂದೆ, ನೀನೆ ನನ್ನ ತಂದೆ' ಎನ್ನುವ ಕಲ್ಪನೆಯಲ್ಲಿ ನಾವು ಜೀವಿಸುತ್ತಿದ್ದೇವೆ ಎಂದರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಕನಕದಾಸರ ತತ್ವ-ಸಿದ್ಧಾಂತಗಳು ಸರ್ವಕಾಲಕ್ಕೂ ಪ್ರಸ್ತುತ. ಅವರ ಆದರ್ಶ ಅನುಸರಿಸಿ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳುವುದರಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಭಕ್ತಿಯಿಂದ ದೇವರನ್ನು ಒಲಿಸಿಕೊಳ್ಳಬಹುದು ಎಂದು ತೋರಿಸಿಕೊಟ್ಟ ಮಹಾನುಭಾವ ಕನಕದಾಸರು. ಉಡುಪಿಯಲ್ಲಿ ಮೇಲ್ವರ್ಗದವರು ಕನಕದಾಸರಿಗೆ ದೇವಾಲಯ ಪ್ರವೇಶಕ್ಕೆ ಅಡ್ಡಿಪಡಿಸುತ್ತಾರೆ. ಆದರೆ, ಕನಕದಾಸರ ಶ್ರೇಷ್ಠ ಭಕ್ತಿಗೆ ಶ್ರೀಕೃಷ್ಣನೇ ಮಾರುಹೋಗಿ, ಪೂರ್ವದಿಂದ ಪಶ್ಚಿಮಕ್ಕೆ ತಿರುಗಿ ದರ್ಶನ ಕೊಡುವ ಮೂಲಕ ಭಕ್ತಿಗೆ ಒಲಿದು ಜಗತ್ತಿಗೆ ಕನಕದಾಸರ ಪರಿಚಯವಾಯಿತು ಎಂದರು.

> “500 ವರ್ಷದ ಹಿಂದೆಯೇ ಸುಖ ಜೀವನವನ್ನು ತ್ಯಜಿಸಿದ ಮಹಾನುಭಾವ ಕನಕದಾಸರಾಗಿದ್ದರು. ಇತರರು ಸುಖವಾಗಿರಲಿ ಎಂಬ ಆಶಯ ಅವರದ್ದಾಗಿತ್ತು. ಆದರೆ, ಪ್ರಸ್ತುತ ಸಂದರ್ಭದಲ್ಲಿ ನಾನೊಬ್ಬ ಚೆನ್ನಾಗಿರಬೇಕು, ಸುಖವಾಗಿ ಬಾಳಬೇಕು ಎಂದು ಅನೇಕರು ಬಯಸುತ್ತಾರೆ. ಇಂತಹ ಮನೋಭಾವಕ್ಕೆ ಕನಕದಾಸರು ತದ್ವಿರುದ್ಧ ಎನಿಸಿದ್ದರು. ಸಾಕಷ್ಟು ಅತ್ಯುತ್ತಮವಾದ ಆದರ್ಶವನ್ನು ಬಿಟ್ಟು ಹೋಗಿದ್ದಾರೆ. ಅವುಗಳಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಜೀವನದಲ್ಲಿ ಅಳವಡಿಸಿಕೊಂಡು ಕೆಲಸ ಮಾಡಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಮಾಡಬಹುದು. **-ತನ್ವೀರ್ ಸೇಠ್, ಶಾಸಕ**

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಪಾಲಿಕೆ ಸದಸ್ಯರಾದ ಜೆ.ಗೋಪಿ, ರಮೇಶ್, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, 'ಮೈಸೂರು ಮಿತ್ರ' ವರದಿಗಾರ ಎಂ.ಟಿ.ಯೋಗೇಶ್‌ಕುಮಾರ್, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಕಾಳೇಗೌಡ, ಕಂಸಾಳೆ ಸಿದ್ದರಾಮು, ಬಸಪ್ಪ, ರೇವಣ್ಣ ಸೇರಿದಂತೆ ಇನ್ನಿತರರನ್ನು ಸನ್ಮಾನಿಸಲಾಯಿತು. ಇದೇ ವೇಳೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಉಪಮೇಯರ್ ಡಾ.ರೂಪಾ, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಮಾಜಿ ಮೇಯರ್ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಮುಖಂಡರಾದ ಬ್ಯಾಂಕ್ ಪುಟ್ಟಸ್ವಾಮಿ, ಎಂ.ಶಿವಣ್ಣ, ಸೋಮಶೇಖರ್, ಎಂ.ಕೆ.ಶಂಕರ್, ವಿಶ್ವ, ಕುರುಬಾರಹಳ್ಳಿ ಪ್ರಕಾಶ್, ಎಂ.ಎ.ಕಮಲಾ ಅನಂತ್‌ರಾಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯ ಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಶಿಪ್ ವಿಜೇತರು



ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನದಲ್ಲಿ ಶನಿವಾರ ಬೆಳಗ್ಗೆ ನಡೆದ 42ನೇ ರಾಜ್ಯ ಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ 'ಮೈಸೂರು ಮಿತ್ರ' ರೇಸಿಂಗ್ ಕರೆಸ್ಪಾಂಡೆಂಟ್ ಪಿ.ಜಿ.ಚಂದ್ರಶೇಖರ್ ಅವರು 5 ಕಿಮೀ ಬಿರುಸಿನ ನಡಿಗೆಯಲ್ಲಿ (75+ ವಯೋಮಾನದ ವಿಭಾಗ) ಚಿನ್ನ, ಕಲಾ ಸತೀಶ್ (45+ ವಯಸ್ಸಿನ ವಿಭಾಗ) ಬೆಳ್ಳಿ ಪದಕ, ಡಾ.ಕೆ.ಎಸ್.ರಘುನಂದನ್ (35+ ವಯೋಮಾನದ ವಿಭಾಗ) ಚಿನ್ನ, ಸುಬ್ಬಶೆಟ್ಟಿ (70+ ವಯೋಮಾನದ ವಿಭಾಗ) ಚಿನ್ನ ಪದಕ ಪಡೆದಿದ್ದಾರೆ.

ಭಗವದ್ಗೀತೆಯ ಪ್ರಥಮ ಅಧ್ಯಾಯದ ಪ್ರವಚನ

ಮೈಸೂರು,ನ.12-ಮೈಸೂರಿನ ಜಯಲಕ್ಷ್ಮಿಪುರಂನ ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ನ.15ರಿಂದ 21ರವರೆಗೆ ಪ್ರತಿದಿನ ಸಂಜೆ 5ರಿಂದ 6.15ರವರೆಗೆ ದೂರದರ್ಶನದ ಹಿರಿಯ ಕಲಾವಿದ ಹಾಗೂ ಹುಬ್ಬಳ್ಳಿಯ ಮಹಾಚಾರ್ಯ ವಿದ್ಯಾಲಯದ ವಿದ್ವಾಂಸರಾದ ಪಂಡಿತ್ ಶ್ರೀ ಪ್ರದ್ಯುಮ್ನಾಚಾರ್ ಜೋಷಿ ಅವರಿಂದ ಭಗವದ್ಗೀತೆಯ ಪ್ರಥಮ ಅಧ್ಯಾಯದ ಪ್ರವಚನ ಏರ್ಪಡಿಸಿದೆ.

ನ.15ರಂದು ಉಚಿತ ಹೃದಯ ಆರೋಗ್ಯ ತಪಾಸಣೆ ಶಿಬಿರ

ಮೈಸೂರು,ನ.12-ಎನ್.ಜೆ.ಎಸ್. ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ನ.15ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ರವರೆಗೆ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಹೃದಯ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 99161 55453.

ಕೆಂಪೇಗೌಡರ ಪ್ರತಿಮೆ ಅನಾವರಣ ಸಮಾರಂಭಕ್ಕೆ ಮಾಜಿ ಪ್ರಧಾನಿ ದೇವೇಗೌಡರ ಆಹ್ವಾನಿಸದ ವಿಚಾರವಾಗಿ ಜೆಡಿಎಸ್-ಬಿಜೆಪಿ ವಾಕ್ಸಮರ

ಬೆಂಗಳೂರು, ನ.12(ಕೆಎಂಶಿ)-ನಾಡಪ್ರಭು ಕೆಂಪೇಗೌಡರ ಬೃಹತ್ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರಿಗೆ ಆಹ್ವಾನ ನೀಡಲಾಗಿಲ್ಲ ಎಂಬ ವಿಚಾರ ಬಿಜೆಪಿ ಮತ್ತು ಜೆಡಿಎಸ್ ನಡುವೆ ವಾಕ್ಸಮರಕ್ಕೆ ಎಡೆಮಾಡಿಕೊಟ್ಟಿದೆ. ದೇವೇಗೌಡರಿಗೆ ಆಹ್ವಾನ ನೀಡಲಾಗಿತ್ತೆಂದು ಬಿಜೆಪಿ ನೀಡಿರುವ ಹೇಳಿಕೆ ಬಗ್ಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಟ್ವೀಟ್ ಮೂಲಕ ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.




ಮಾಡಿದ ತಪ್ಪನ್ನೇ ಲಜ್ಜೆಗೆಟ್ಟು ಸಮರ್ಥಿಸಿಕೊಳ್ಳುವುದು ಕಮಲ ಪಕ್ಷಕ್ಕೆ ಸಿದ್ಧಿಸಿರುವ ಕಲೆ. ಅಧಿಕೃತ ಆಹ್ವಾನ ಪತ್ರಿಕೆಯಲ್ಲಿ ಹೆಸರಿಲ್ಲ! ಆದರೆ, ಮುಖ್ಯಮಂತ್ರಿಗಳೇ ಪತ್ರ ಬರೆದು ಆಹ್ವಾನಿಸಿದ್ದಾರೆಂದು ಜನರ ದಿಕ್ಕು ತಪ್ಪಿಸುತ್ತಿರುವ ರಾಜ್ಯದ ಮುಖ್ಯಮಂತ್ರಿಗಳು, ಮಾಜಿ ಪ್ರಧಾನ ಮಂತ್ರಿಗಳಿಗೆ ಕರೆ ಮಾಡಿ ಕೆಂಪೇಗೌಡರ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಆಹ್ವಾನಿಸಿ ಪತ್ರ ಬರೆದಿದ್ದಾರೆ ಎಂದು ಬಿಜೆಪಿ ಟ್ವೀಟಿಸಿದೆ.

ಪೌರಕಾರ್ಮಿಕರ ಖಾಯಂಗೆ ಸರ್ಕಾರ ನಿರ್ಧಾರ

ಸಫಾಯಿ ಕರ್ಮಚಾರಿ ಮೇಲುಸ್ತುವಾರಿ ಸಮಿತಿ ಸದಸ್ಯ ಎಂ.ವಿ.ವೆಂಕಟೇಶ್ ಮಾಹಿತಿ

ಮೈಸೂರು, ನ.12 (ಪಿಎಂ)- ಇಡೀ ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳ 11,133 ಪೌರಕಾರ್ಮಿಕರ ಖಾಯಂಗೆ ಸರ್ಕಾರ ನಿರ್ಧರಿಸಿದೆ ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಮೇಲುಸ್ತುವಾರಿ ಸಮಿತಿ ಸದಸ್ಯ ಎಂ.ವಿ.ವೆಂಕಟೇಶ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಬಿಎಂಪಿಯ 3,673 ಪೌರಕಾರ್ಮಿಕರು ಸೇರಿದಂತೆ ರಾಜ್ಯದ ಸ್ಥಳೀಯ ಸಂಸ್ಥೆಗಳ 11,133 ಪೌರಕಾರ್ಮಿಕರನ್ನು ಖಾಯಂಗೊಳಿಸಲು ಮುಖ್ಯಮಂತ್ರಿಗಳು ನಿರ್ಣಯಿಸಿದ್ದಾರೆ. ಇದಕ್ಕಾಗಿ ಸರ್ಕಾರ ಹಾಗೂ ಮುಖ್ಯಮಂತ್ರಿಗಳಿಗೆ ಧನ್ಯವಾದ ಅರ್ಪಿಸುವುದಾಗಿ ಹೇಳಿದರು.

ನಾಳೆಯಿಂದ 61ನೇ ರಾಷ್ಟ್ರೀಯ ಔಷಧ ಸಪ್ತಾಹ

ಮೈಸೂರು,ನ.12(ಪಿಎಂ)- ಭಾರತೀಯ ಔಷಧ ವಿಜ್ಞಾನ ಸಂಘ (ಐಪಿಎ) ಮೈಸೂರು ಘಟಕ, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಜಂಟಿ ಆಶ್ರಯದಲ್ಲಿ ನ.14ರಿಂದ 19ರವರೆಗೆ 61ನೇ ರಾಷ್ಟ್ರೀಯ ಔಷಧ ಸಪ್ತಾಹ ಹಮ್ಮಿಕೊಳ್ಳಲಾಗಿದೆ ಎಂದು ಐಪಿಎ ಮೈಸೂರು ಘಟಕದ ಉಪಾಧ್ಯಕ್ಷ ಡಾ.ಎಂ.ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ನ.14ರಂದು ಬೆಳಗ್ಗೆ 11ಕ್ಕೆ ಸಪ್ತಾಹಕ್ಕೆ ಸಂಸದ ವಿ.ಶ್ರೀನಿವಾಸಪ್ರಸಾದ್ ಚಾಲನೆ ನೀಡಲಿದ್ದಾರೆ. ಮಣಿಪಾಲ್ ಆಸ್ಪತ್ರೆಯ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಉಪೇಂದ್ರ ಶೆಣೈ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಐಪಿಎ ಮೈಸೂರು ಘಟಕ ಅಧ್ಯಕ್ಷ ಡಾ.ಟಿ.ಎಂ.ಪ್ರಮೋದ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿವರಿಸಿದರು.


ನ.15ರಂದು ಬೆಳಗ್ಗೆ 10ಕ್ಕೆ ಜೆಎಸ್‌ಎಸ್ ಫಾರ್ಮಸಿ ಕಾಲೇಜಲ್ಲಿ ರಕ್ತದಾನ ಶಿಬಿರ ಆಯೋಜಿಸಿದೆ. ನ.16ರಂದು ಲಲಿತಮಹಲ್, ಬನ್ನಿಮಂಟಪ ಬಡಾವಣೆ ಮತ್ತು ಆಕಾಶವಾಣಿ ವೃತ್ತದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ನ.17ರಂದು ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಆವರಣದಲ್ಲಿ ಬೆಳಗ್ಗೆ 10.30ಕ್ಕೆ 61 ಸಸಿಗಳನ್ನು ನೆಡಲಾಗುವುದು. ಅಲ್ಲದೆ, ಮೈಸೂರಿನ ಬನ್ನಿಮಂಟಪ, ಶ್ರೀ ಶಿವರಾತ್ರೀಶ್ವರನಗರ ಮತ್ತು ಹನುಮಂತನಗರದಲ್ಲಿ 'ಔಷಧ ಸುರಕ್ಷಿತ ಬಳಕೆ' ಕುರಿತು ಜಾಗೃತಿ ಮೂಡಿಸಲಾಗುವುದು ಎಂದರು.



ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ನ.18ರಂದು ಮಧ್ಯಾಹ್ನ 2ಕ್ಕೆ 'ಇನಿಶಿಯಮ್' ಶೀರ್ಷಿಕೆಯಡಿ ಅಂತರ ಕಾಲೇಜು ಸಾಂಸ್ಕೃತಿಕ ಮತ್ತು ಸಾಹಿತ್ಯಕ ಸ್ಪರ್ಧೆ ಆಯೋಜಿಸಲಾಗಿದೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ವಿವಿಧ ಫಾರ್ಮಸಿ ಕಾಲೇಜುಗಳ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ನ.19ರಂದು ಬೆಳಗ್ಗೆ 11ಕ್ಕೆ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಸಪ್ತಾಹದ ಸಮಾರೋಪ ಸಮಾರಂಭ ನಡೆಯಲಿದೆ. ಸೆಂಟ್ರಲ್ ಡ್ರಗ್ಸ್ ಸ್ಟ್ಯಾಂಡರ್ಡ್ ಕಂಟ್ರೋಲ್ ಆರ್ಗನೈಸೇಷನ್‌ನ ಹೈದರಾಬಾದಿನ ವಲಯ ಕಚೇರಿಯ ಡೆಪ್ಯೂಟಿ ಡ್ರಗ್ಸ್ ಕಂಟ್ರೋಲರ್ ಡಾ.ಎ.ರಾಮ್‌ಕಿಶನ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಐಪಿಎ ಮೈಸೂರು ಘಟಕದ ಕಾರ್ಯದರ್ಶಿ ಡಾ.ಆರ್.ಎಸ್.ಚಂದನ್, ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಧ್ಯಾಪಕ ಡಾ.ಕೆ.ಎಲ್.ಕೃಷ್ಣ ಸುದ್ದಿಗೋಷ್ಠಿಯಲ್ಲಿದ್ದರು.

ನ.14ರಂದು ಡಯಾ ವಾಕ್ ರ‍್ಯಾಲಿ

ಮೈಸೂರು,ನ.12(ಪಿಎಂ)-ವಿಶ್ವ ಮಧುಮೇಹ ದಿನದ ಅಂಗವಾಗಿ ಎಎಸ್‌ಜಿ ಕಣ್ಣಿನ ಆಸ್ಪತ್ರೆ ವತಿಯಿಂದ ನ.14ರಂದು ಬೆಳಗ್ಗೆ 8ಕ್ಕೆ 'ಡಯಾ ವಾಕ್ ರ‍್ಯಾಲಿ' ಶೀರ್ಷಿಕೆಯಡಿ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಆಸ್ಪತ್ರೆ ವೈದ್ಯ ಡಾ.ಮಹೇಶ್‌ಕುಮಾರ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಥಾಗೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಚಾಲನೆ ನೀಡಲಿದ್ದಾರೆ. ಆಸ್ಪತ್ರೆ ಆವರಣದಿಂದ ಆರಂಭಗೊಂಡು ವಿವಿಧ ರಸ್ತೆಗಳಲ್ಲಿ ಜಾಥಾ ಸಂಚರಿಸಲಿದೆ. ಅಲ್ಲದೆ, ನ.14ರಿಂದ 29ರವರೆಗೆ ಬೆಳಗ್ಗೆ 9ರಿಂದ ರಾತ್ರಿ 8ರವರೆಗೆ ಆಸ್ಪತ್ರೆಯಲ್ಲಿ ಉಚಿತ ಡಯಾಬಿಟಿಕ್ ರೆಟಿನೋಪತಿ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದರು. ಆಸ್ಪತ್ರೆ ವೈದ್ಯರಾದ ಡಾ.ವಿನಿಬದ್ಲಾನಿ, ಡಾ.ಪವನ್ ವಿ.ಜೋಷಿ ಸುದ್ದಿಗೋಷ್ಠಿಯಲ್ಲಿದ್ದರು.

ವೈದ್ಯಕೀಯ ವೃತ್ತಿಯಲ್ಲಿ ಸೇವಾ ಮನೋಭಾವ ಮುಖ್ಯ

ಮೈಸೂರು, ನ.12(ಆರ್‌ಕೆ)- ವೈದ್ಯಕೀಯ ವೃತ್ತಿಯಲ್ಲಿ ಸೇವಾ ಮನೋಭಾವ ಇರುವುದು ಅತೀ ಮುಖ್ಯ ಎಂದು ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬೃಂದಾವನ ಬಡಾವಣೆಯಲ್ಲಿರುವ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ 7ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ 'ಕರ್ಮ ನೈಪುಣ್ಯ' ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯವೃತ್ತಿಯನ್ನು ಉದ್ದಿಮೆಯನ್ನಾಗಿ ಮಾಡಿಕೊಳ್ಳದೇ ಸೇವೆಯೆಂದು ತಿಳಿದು ಚಿಕಿತ್ಸೆ ನೀಡಿದರೆ ರೋಗಿ ಪಾಲಿಗೆ ವೈದ್ಯರು ದೇವರಾಗುತ್ತಾರೆ ಎಂದರು.

ಆಯುರ್ವೇದ ಚಿಕಿತ್ಸಾ ಪದ್ಧತಿಯು ಭಾರತೀಯ ಋಷಿಪ್ರಣೀತವಾಗಿದೆ. ಈ ಹಿಂದೆ ಪ್ರಾಚೀನ ಕಾಲದಲ್ಲಿ ಇದು ಪರಂಪರಾಗತವಾಗಿ ಖ್ಯಾತಿಯಲ್ಲಿದ್ದು, ನಮ್ಮ ಸುತ್ತಮುತ್ತಲಿನ ಪರಿಸರದಲ್ಲೇ ಸಿಗುವ ನೈಸರ್ಗಿಕ ಗಿಡಮೂಲಿಕಗಳ ಔಷಧ ಪದ್ಧತಿಯಾಗಿತ್ತು ಎಂದರು.



ಮೈಸೂರಿನ ಬೃಂದಾವನ ಬಡಾವಣೆಯಲ್ಲಿರುವ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಅವರನ್ನು ಆರ್ಕ ಧಾಮದ ಸಂಸ್ಥಾಪಕ ಶ್ರೀನಿವಾಸ ಆರ್ಕ ಗುರೂಜಿ ಅಭಿನಂದಿಸಿದರು. ಈ ವೇಳೆ ಮಾತನಾಡಿದ ಅವರು, ಸರಳ-ಸಜ್ಜನಿಕೆಗೆ ಹೆಸರಾದ ಪ್ರೊ.ಹೇಮಂತಕುಮಾರ್ ಅವರ ಆಡಳಿತಾವಧಿಯಲ್ಲಿ ಮೈಸೂರು ವಿವಿ ಉತ್ತಮ ಕಾರ್ಯವನ್ನು ಸ್ಮರಿಸಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಮುಂದುವರಿದಿರುವ ಈ ಸಂದರ್ಭದಲ್ಲಿ ಆಯುರ್ವೇದವನ್ನು ಹೇಗೆ ಬಳಸಿಕೊಳ್ಳಬಹುದೆಂಬುದರ ಕುರಿತು ಗುರೂಜಿ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರಲ್ಲದೆ, ಅದರ ಮಹತ್ವ ಹಾಗೂ ಪಾಶ್ಚಿಮಾತ್ಯ ದೇಶಗಳಲ್ಲಿ ಭಾರತೀಯ ವಿದ್ಯೆಗಳ ಬಗ್ಗೆ ಇರುವ ಗೌರವದ ಬಗ್ಗೆ ವಿವರಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆ, ಆಯುಷ್ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಎನ್.ಆಂಜನೇಯ ಮೂರ್ತಿ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ, ಡ್ರಗ್ ಇನ್ಸ್‌ಪೆಕ್ಟರ್ ಡಾ.ವೇದಾವತಿ, ಬೆಂಗಳೂರಿನ ಆಯುರ್ವೇದ ಅಕಾಡೆಮಿ ಜಂಟಿ ಕಾರ್ಯದರ್ಶಿ ಡಾ.ಪ್ರಶಾಂತ್ ಗೋಖಲೆ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ, ನಾರಾಯಣ ಹೆಗ್ಗಡೆ, ರೋಡ್ರಿಗಸ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಹಿರೀಕ್ಯಾತನಹಳ್ಳಿಯಲ್ಲಿ ಶ್ರೀ ಚಿಕ್ಕಮ್ಮ ತಾಯಿ ದೇವಸ್ಥಾನ ಉದ್ಘಾಟನೆ

ಒಗ್ಗಟ್ಟಿನಿಂದ ಗ್ರಾಮಾಭಿವೃದ್ಧಿ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯ



ಹಿರೀಕ್ಯಾತನಹಳ್ಳಿ, ನ. 12– ಗ್ರಾಮದ ಅಭಿವೃದ್ಧಿಗೆ ಒಗ್ಗಟ್ಟು ಮುಖ್ಯ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ. ಹರೀಶ್‌ಗೌಡ ಅಭಿಪ್ರಾಯಪಟ್ಟರು.

ಹುಣಸೂರು ತಾಲೂಕಿನ ಹಿರೀಕ್ಯಾತನ ಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿ ರುವ ಶ್ರೀ ಚಿಕ್ಕಮ್ಮ ತಾಯಿ ದೇವಸ್ಥಾನ ಉದ್ಘಾಟಿಸಿ ಮಾತನಾಡಿದ ಅವರು, ಚಿಕ್ಕಮ್ಮ ತಾಯಿ ದರ್ಶನ ಪಡೆಯಲು ಚಿಕ್ಕದೇವಮ್ಮನ ಬೆಟ್ಟಕ್ಕೆ ಹೋಗಬೇಕಾಗಿತ್ತು. ಆದರೆ ಇದೀಗ ಸರ್ವ ಜನಾಂಗದ ಸಹಕಾರದೊಂದಿಗೆ ನಾಯಕ ಸಮಾಜದ ಬಂಧುಗಳು ಗ್ರಾಮದಲ್ಲಿ ಶ್ರೀ ಚಿಕ್ಕಮ್ಮ ತಾಯಿ ದೇವಸ್ಥಾನ ನಿರ್ಮಿಸಿರುವುದು ಸಂತೋಷದ ವಿಚಾರ ಎಂದರು.

ದಿನನಿತ್ಯದ ಜಂಜಾಟದ ನಡುವೆ ಜನರಿಗೆ ನೆಮ್ಮದಿ ದೊರೆತು ಸಾಮರಸ್ಯದಿಂದ ಬದು ಕಲು ಗ್ರಾಮಗಳಲ್ಲಿ ದೇವಸ್ಥಾನ ನಿರ್ಮಿಸ ಬೇಕು ಎಂದ ಅವರು, ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಮಹದೇಶ್ವರ ದೇವಾಲಯಕ್ಕೆ ನಮ್ಮ ಕುಟುಂಬದಿಂದ ಕೈಲಾದಷ್ಟು ಸಹಾಯ ಮಾಡುತ್ತೇವೆ. ನಮ್ಮ ಆಸೆ ಏನೇ ಇದ್ದರೂ, ಅದು ನೆರ ವೇರಲು ದೇವರ ಪಾದಕ್ಕೆ ಶರಣಾಗ ಬೇಕು. ಅಲ್ಲದೇ ನಾವು ಮಾಡುವ ದಾನ ಧರ್ಮ ನೋಡಿ ದೇವರು ಫಲ ನೀಡು ತ್ತಾನೆ. ಹೀಗಾಗಿ ಪ್ರತಿಯೊಬ್ಬರೂ ಸಾಧ್ಯ ವಾದಷ್ಟು ದಾನಧರ್ಮ ಮಾಡಿ ಎಂದರು.

ಗ್ರಾಮದ ಮತದಾರರು ದಿ.ಎಸ್.ಚಿಕ್ಕ ಮಾದು ಹಾಗೂ ಜಿ.ಟಿ.ದೇವೇಗೌಡರನ್ನು ಬೆಂಬಲಿಸಿ ಶಾಸಕರನ್ನಾಗಿ ಆಯ್ಕೆ ಮಾಡಿದ್ದು, ಗ್ರಾಮದ ಸಹಕಾರ ಗ್ರಾಮದ ಒಗ್ಗಟ್ಟು ಅಭಿವೃದ್ಧಿಗೆ ಕಾರಣವಾಯಿತು ಎಂದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತ ನಾಡಿ, ಬಯಸಿದ್ದನ್ನು ದೇವರ ಬಳಿ ಕೇಳು ವುದು ಭಕ್ತರ ಕೆಲಸ. ದೇವರು ಯಾರಿಗೂ ಕೆಟ್ಟದನ್ನು ಮಾಡುವುದಿಲ್ಲ. ನಾವು ಕೇಳುವ ವರು ಒಳ್ಳೆಯವರಾಗಿದ್ದರೆ ಎಲ್ಲರಿಗೂ ದೇವರು ಅಸ್ತು ಎನ್ನುತ್ತಾರೆ ಎಂದರು.

ಮನುಷ್ಯನಲ್ಲಿ ಮಾನವೀಯ ಮೌಲ್ಯವಿರ ಬೇಕು. ಯಾರು ಜನರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಾನೋ ಅಂತಹ ವ್ಯಕ್ತಿ ಬೆನ್ನಿಗೆ ಭಗವಂತ ನಿಲ್ಲುತ್ತಾನೆ ಎಂದ ಶಾಸಕರು, ಮೈಸೂರಿನ ಚಾಮುಂಡಿಬೆಟ್ಟ ಬಿಟ್ಟರೇ, ಹೆಚ್.ಡಿ.ಕೋಟೆ ತಾಲೂಕಿನ ಚಿಕ್ಕದೇವಮ್ಮನ ಬೆಟ್ಟ ಪ್ರವಾಸಿ ತಾಣದ ಜೊತೆಗೆ ಭಕ್ತಿ ಕೇಂದ್ರವಾಗಿದೆ. ಚಿಕ್ಕದೇವಮ್ಮನ ಬೆಟ್ಟವನ್ನು ದಿ.ಎಸ್.ಚಿಕ್ಕಮಾದು ಅವರು ಸಮಗ್ರವಾಗಿ ಅಭಿವೃದ್ಧಿಪಡಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ದಿ.ಎಸ್.ಚಿಕ್ಕಮಾದು ಪುತ್ರಿ ರಂಜಿತಾ, ಗ್ರಾಪಂ ಅಧ್ಯಕ್ಷ ಜವರೇ ಗೌಡ, ಉಪಾಧ್ಯಕ್ಷೆ ವತ್ಸಲ, ಯಜಮಾನ ರಾದ ಜಗದೀಶ್, ಪಾಪೇಗೌಡ, ವೇಣು ಗೋಪಾಲ ವಿದ್ಯಾಸಂಸ್ಥೆ ಅಧ್ಯಕ್ಷ ವಿಶ್ವೇಶ್ವರಯ್ಯ, ಕಾರ್ಯದರ್ಶಿ ಮಹೇಶ್, ರೈತ ವ್ಯವಸಾಯ ಸಹಕಾರ ಸಂಘದ ಅಧ್ಯಕ್ಷ ಮಂಜು, ಜಿಪಂ ಮಾಜಿ ಸದಸ್ಯ ದೇವರಾಜ್, ಡೈರಿ ಅಧ್ಯಕ್ಷ ಮಹೇಶ್, ಸಮಾಜ ಸೇವಕ ಶ್ರೀಧರ್, ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ರಮೇಶ್‌ಕುಮಾರ್, ನಿವೃತ್ತ ಉಪ ತಹಸೀಲ್ದಾರ್ ಚೌಡನಾಯಕ, ತಾಪಂ ಮಾಜಿ ಸದಸ್ಯ ಶಿವಣ್ಣ, ಗ್ರಾಪಂ ಸದಸ್ಯ ಶ್ರೀಧರ್, ಸಣ್ಣಶೆಟ್ಟಿ, ಮುಖಂಡರಾದ ನಾಗೇಶ್, ಪುಟ್ಟರಾಜ್, ಲೋಕೇಶ್, ಬಸವ ರಾಜ್, ಬಿ.ನಾಗರಾಜ್, ಸುರೇಶ್, ಹರೀಶ್, ಶಿವಪ್ಪ, ಪುಟ್ಟರಾಜು, ಶಿವರಾಜ್ ಹಾಗೂ ದೇವಸ್ಥಾನ ಟ್ರಸ್ಟ್‌ನ ಪದಾಧಿಕಾರಿಗಳು ಹಾಜರಿದ್ದರು.

ಹಳ್ಳಿ ಹಳ್ಳಿಯಲ್ಲೂ ಕನಕದಾಸರ ಜಯಂತಿ ಆಚರಿಸಿ



ತಿ.ನರಸೀಪುರ, ನ.12– ಕನಕದಾಸರ ಕೀರ್ತನೆ ಮತ್ತು ಸಾಮಾಜಿಕ ಚಿಂತನೆಗಳು ಜನಸಾಮಾನ್ಯರನ್ನು ತಲುಪಲು ಗ್ರಾಮೀಣ ಮಟ್ಟದಲ್ಲಿ ಜಯಂತೋತ್ಸವ ಆಯೋಜಿಸ ಬೇಕು ಎಂದು ಕೆಎಸ್‌ಐಸಿ ಒಕ್ಕೂಟದ ಮುಖಂಡ ಅವಿನಾಶ್ ತಿಳಿಸಿದರು.

ಪಟ್ಟಣದ ಕೆಎಸ್‌ಐಸಿಯಲ್ಲಿ ಯುವಕ ಮಿತ್ರರ ವತಿಯಿಂದ ಹಮ್ಮಿಕೊಂಡಿದ್ದ ಕನಕದಾಸರ ಜಯಂತೋತ್ಸವದಲ್ಲಿ ಮಾತ ನಾಡಿದ ಅವರು, ಶಿಕ್ಷಣ ಕಲಿಯುವ ಅವಕಾಶ ನಿರಾಕರಿಸುವ ಪ್ರತಿಯೊಂದು ಹಂತದಲ್ಲೂ ಕಠಿಣ ಸವಾಲನ್ನು ಎದುರಿಸಿ ಅಕ್ಷರ ಕಲಿತ ಕನಕದಾಸರು ಪ್ರತಿಯೊಬ್ಬ ವ್ಯಕ್ತಿ ತಲುಪಲು ಪ್ರತಿ ಹಳ್ಳಿಯಲ್ಲೂ ಜಯಂತೋತ್ಸವ ಆಚರಣೆಯಾಗಬೇಕು ಎಂದರು.

ಮುಖಂಡ ಪ್ರಸಾದ್ ಮಾತನಾಡಿದರು. ಇದೇ ವೇಳೆ ಸಿಹಿ ವಿತರಿಸಲಾಯಿತು. ಬಸವ ರಾಜು, ಮಹೇಶ್, ಹೆಳವರಹುಂಡಿ ನಾಗ ರಾಜು, ನಂದಕುಮಾರ್, ನವೀನ್, ಚಂದ್ರು, ಪ್ರಸಾದ್, ಹರ್ಷ, ಮನು, ವಿಜಯ್, ಅವಿನಾಶ್, ರಾಕೇಶ್, ಶಾಂತಕುಮಾರ್, ನಂದಿ, ಮಾಕಣ್ಣ, ಪ್ರವೀಣ್ ದೀಪು ಹಾಜರಿದ್ದರು.

ಕನಕದಾಸರ ಚಿಂತನೆಗಳು ಒಂದು ಮೈಲಿಗಲ್ಲು



ಕೆ.ಆರ್.ನಗರ, ನ.12– ಸಮ ಸಮಾಜ ನಿರ್ಮಾಣಕ್ಕೆ ಕನಕದಾಸರ ಕೊಡುಗೆ ಅಪಾರ ಎಂದು ತಹಸೀಲ್ದಾರ್ ಎಸ್. ಸಂತೋಷ್ ತಿಳಿಸಿದರು.

ಪಟ್ಟಣದ ಆಡಳಿತಸೌಧದ ಸಭಾಂಗಣ ದಲ್ಲಿ ನಡೆದ ಕನಕದಾಸ ಜಯಂತಿಯಲ್ಲಿ ಮಾತನಾಡಿದ ಅವರು, ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಕನಕದಾಸರ ಚಿಂತನೆಗಳು ಒಂದು ಮೈಲಿಗಲ್ಲು. ಅವರ ವೈಚಾರಿಕ ಚಿಂತನೆ, ಸಾಮಾಜಿಕ ಕಾಳಜಿ, ಭಕ್ತಿ ಆಶಯ, ಸಮಾಜದ ಅಂಕು–ಡೊಂಕು ಗಳನ್ನು ತಿದ್ದುವಲ್ಲಿ ತೋರಿದ ಮಾರ್ಗ ಗಳು ಸದಾ ಪ್ರಸ್ತುತ ಎಂದರು.

ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಾಜಿ ಪುರಸಭಾಧ್ಯಕ್ಷ ವೈ.ಆರ್.ಪ್ರಕಾಶ್, ಹಿರಿಯ ವೈದ್ಯರಾದ ಡಾ.ಜಗನ್ನಾಥ್, ಡಾ.ದೇವು, ಡಾ.ಮಹೇಂದ್ರಪ್ಪರನ್ನು ಗೌರವಿಸಲಾಯಿತು. ಚಿರತೆ ಸೆರೆ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದ ಪರಶಿವನಿಗೆ ಶೌರ್ಯ ಪ್ರಶಸ್ತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಪುರಸಭಾ ಅಧ್ಯಕ್ಷ ಪ್ರಕಾಶ್ ಮಾತನಾಡಿದರು. ತಾಪಂ ಇಓ ಹೆಚ್.ಕೆ. ಸತೀಶ್, ಪುರಸಭಾ ಮುಖ್ಯಾಧಿಕಾರಿ ಡಾ.ಜಯಣ್ಣ, ಸದಸ್ಯರಾದ ಸಂತೋಷ್‌ಗೌಡ, ನಟರಾಜ, ತೋಂಟ ದಾರ್ಯ, ಬಿಇಓ ಗಾಯಿತ್ರಿ, ಸಿಪಿಐ ಎಂ.ಆರ್.ಲವ, ಡಾ.ಮಾಲೇಗೌಡ, ಕುರುಬ ಸಮುದಾಯದ ಮುಖಂಡರಾದ ಗರಡು ಗಂಭದಸ್ವಾಮಿ, ಬಿ.ಎಂ.ನಾಗರಾಜ್, ಕೃಷ್ಣೇಗೌಡ, ಬುಡಿಗೌಡ, ಗಿರೀಶ್, ರಾಘವೇಂದ್ರ, ಹೇಮಂತ ಸೇರಿದಂತೆ ಅಧಿಕಾರಿಗಳು ಮತ್ತು ಕುರುಬ ಸಮು ದಾಯದ ಮುಖಂಡರಿದ್ದರು.

ವಿವಿಧೆಡೆ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ




ಬೆಟ್ಟದಪುರ, ನ.12– ಮುಖ್ಯಮಂತ್ರಿ ಸೇರಿದಂತೆ ಎಲ್ಲಾ ಮಂತ್ರಿಗಳನ್ನು ಭೇಟಿ ಮಾಡಿ ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸ ಲಾಗುತ್ತಿದೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ನನ್ನನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ತಾಲೂಕಿನ ಕಳ್ಳಿಕೊಪ್ಪಲು, ಮಾಳೆಗೌಡನ ಕೊಪ್ಪಲು, ತಮ್ಮಡಹಳ್ಳಿ, ಕಾಳೇಗೌಡನ ಕೊಪ್ಪಲು ಸೇರಿದಂತೆ ವಿವಿಧೆಡೆ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ನನ್ನ ಅಧಿಕಾರಾವಧಿ ಯಲ್ಲಿ ಕ್ಷೇತ್ರದ ಎಲ್ಲಾ ಹಳ್ಳಿಗಳ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಮತ್ತೊಂದು ಅವಕಾಶ ನೀಡುವಂತೆ ಮನವಿ ಮಾಡಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ನನ್ನ ಗುರುಗಳು. ನನ್ನ ಮೇಲೆ ಅವರ ಆಶೀರ್ವಾದ ಇರುವುದರಿಂದ ತಾಲೂಕಿನ ಕುರುಬ ಸಮಾಜದವರು ನನ್ನ ಕೈ ಬಿಡುವುದಿಲ್ಲ ಎಂದ ಅವರು, ಎಲ್ಲಾ ಸಮಾಜಕ್ಕೂ ಕೊಡುಗೆ ನೀಡಿದ್ದೇನೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ನನ್ನನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಧೈರ್ಯವಾಗಿ ಹೇಳು ತ್ತೇನೆ ಎಂದರು.

ಇದೇ ವೇಳೆ ಹಲವು ಮುಖಂಡರು ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆ ಗೊಂಡರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಮುಖಂಡರಾದ ಗಗನ್, ಚಿಕ್ಕೇಗೌಡ, ಮಾದೇಗೌಡ, ಬಿ.ಜೆ. ದೇವರಾಜ್, ಪುಟ್ಟರಾಜು, ಗುತ್ತಿಗೆದಾರ ಅಶ್ವತ್ಥ್, ಮಾಜಿ ಗ್ರಾಪಂ ಅಧ್ಯಕ್ಷ ರಾಮ ಚಂದ್ರು, ರಾಜೇಶ್, ಸಿರಿಯಾಳಶೆಟ್ಟಿ, ಮಾದೇಶ್, ಜಿಪಂ ಸಹಾಯಕ ಕಾರ್ಯ ಪಾಲಕ ಮಲ್ಲಿಕಾರ್ಜುನ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಸರಗೂರು: ರಸ್ತೆ ಅಭಿವೃದ್ಧಿಗೆ ಒತ್ತಾಯ



ಸರಗೂರು, ನ.12– ಪಟ್ಟಣದ 11ನೇ ವಾರ್ಡ್ ಬಿಡುಗಲಿಯಿಂದ ಕಪಿಲಾ ನದಿಗೆ ತೆರಳುವ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಅಭಿವೃದ್ಧಿಪಡಿಸುವಂತೆ ಡಿಎಸ್‌ಎಸ್ ಮುಖಂಡ ಶಿವಣ್ಣ ಒತ್ತಾಯಿಸಿದ್ದಾರೆ.

ನಿತ್ಯ ಈ ರಸ್ತೆಯಲ್ಲಿ ನೂರಾರು ಮಂದಿ ಸಾರ್ವಜನಿಕರು, ಜನಜಾನುವಾರು ಸಂಚರಿಸ ಲಿದ್ದು, ಹಳ್ಳ ಕೊಳ್ಳಗಳಿಂದ ಸಂಪೂರ್ಣ ಹದಗೆಟ್ಟಿದೆ. ಮಳೆ ಬಂದರೆ ಈ ರಸ್ತೆಯಲ್ಲಿ ತಿರುಗಾಡುವುದೇ ದುಸ್ತರವಾಗಿದೆ. ಯಾರಾ ದರೂ ಸಾವನ್ನಪ್ಪಿದರೇ ಶವಸಂಸ್ಕಾರಕ್ಕೆ ಹೋಗಲು ಅಸಾಧ್ಯವಾಗಿದೆ. ಹೀಗಾಗಿ ಶಾಸಕ ಅನಿಲ್ ಚಿಕ್ಕಮಾದು ಅವರು ಇತ್ತ ಗಮನ ಹರಿಸಿ ತಮ್ಮ ಅನುದಾನದಲ್ಲಿ ಈ ರಸ್ತೆ ಅಭಿವೃದ್ಧಿಪಡಿಸಿಕೊಡಬೇಕು ಎಂದು ಶಿವಣ್ಣ ಒತ್ತಾಯಿಸಿದ್ದಾರೆ.

ಇಂದು ಕಾರ್ತಿಕ ಪೂಜೆ

ಮೈಸೂರು, ನ.12– ಮೈಸೂರಿನ ಚಾಮುಂಡಿಬೆಟ್ಟ–ಉತ್ತನಹಳ್ಳಿ ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಯ ಋಷಿಗಳ ಆಶ್ರಮ ಹಾಗೂ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ 22ನೇ ವರ್ಷದ ಪೂಜಾ ಮಹೋತ್ಸವ ಭಾನುವಾರ (ನ.13) ನೆರವೇರಲಿದೆ. ಬೆಳಗ್ಗೆ 11ಕ್ಕೆ ರುದ್ರಾಭಿಷೇಕ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, 1 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ವಿವಿ ಮಟ್ಟದ ಕಿಕ್ ಬಾಕ್ಸಿಂಗ್, ಕರಾಟೆ ಸ್ಪರ್ಧೆ

ಹುಣಸೂರು ಸರ್ಕಾರಿ ಮಹಿಳಾ ಕಾಲೇಜು ಅತ್ಯುತ್ತಮ ಸಾಧನೆ



ಹುಣಸೂರು, ನ.12– ಮೈಸೂರು ವಿಶ್ವವಿದ್ಯಾನಿಲಯ ಮಟ್ಟದ ಕಿಕ್ ಬಾಕ್ಸಿಂಗ್ ಮತ್ತು ಕರಾಟೆ ಸ್ಪರ್ಧೆಯಲ್ಲಿ ನಗರದ ಸರ್ಕಾರಿ ಮಹಿಳಾ ಕಾಲೇಜು ಅತ್ಯುತ್ತಮ ಸಾಧನೆ ಮಾಡಿದೆ

ನ.10 ಮತ್ತು 11ರಂದು ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್ ನಲ್ಲಿ ನಡೆದ ಅಂತರ ಕಾಲೇಜುಗಳ ಮಹಿಳೆ ಯರ ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಹುಣ ಸೂರು ನಗರದ ಸರ್ಕಾರಿ ಮಹಿಳಾ ಕಾಲೇಜು ವಿದ್ಯಾರ್ಥಿನಿಯರಾದ ಅಮೂಲ್ಯ ಹಾಗೂ ಚೈತ್ರ ಚಿನ್ನದ ಪದಕ ಪಡೆದರೆ, ರಾಜೇಶ್ವರಿ ಬೆಳ್ಳಿ ಮತ್ತು ಸರಸ್ವತಿ ಕಂಚಿನ ಪದಕ ಪಡೆದು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ. ಕರಾಟೆ ಸ್ಪರ್ಧೆಯಲ್ಲಿ ಅಮೂಲ್ಯ ಮತ್ತು ಚೈತ್ರ ಬೆಳ್ಳಿ ಪದಕ ಪಡೆದಿದ್ದು, ಪ್ರಾಂಶುಪಾಲ ಜ್ಞಾನಪ್ರಕಾಶ್, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಭಾಸ್ಕರ್ ಕೆ.ಎಸ್, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ನಟರಾಜ್, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ, ಕಾಲೇಜಿನ ವಿದ್ಯಾರ್ಥಿನಿಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಎಸ್.ರಾಜೀವ್‌ಗೆ ಪಿಹೆಚ್.ಡಿ



ಮೈಸೂರು,ನ.12–ಡಾ.ಲ್ಯಾನ್ಸಿ ಡಿಸೋಜಾ ಅವರ ಮಾರ್ಗದರ್ಶನ ದಲ್ಲಿ ಎಸ್.ರಾಜೀವ್ ಅವರು ಕ್ರಿಮಿನಾಲಜಿ ಮತ್ತು ಫೊರೆನ್ಸಿಕ್ ಸೈನ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧ ವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕನ್ನಡ ಸಾಹಿತ್ಯಕ್ಕೆ ಕನಕದಾಸರ ಕೊಡುಗೆ ಅಪಾರ



ಹೆಚ್.ಡಿ.ಕೋಟೆ, ನ.12– ಕನಕದಾಸರು ಹರಿದಾಸ ಸಾಹಿತ್ಯಕ್ಕೆ ಸೀಮಿತವಾಗದೆ, ಸಮಗ್ರ ಕನ್ನಡ ಸಾಹಿತ್ಯಕ್ಕೂ ಅಪಾರ ಕೊಡುಗೆ ನೀಡಿ ದ್ದಾರೆ ಎಂದು ಸಾಹಿತಿ ಡಿ.ಎಂ.ಕೃಷ್ಣ ಮೂರ್ತಿ ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತಸೌಧದಲ್ಲಿ ತಾಲೂಕು ಆಡಳಿತದಿಂದ ಹಮ್ಮಿಕೊಂಡಿದ್ದ 535ನೇ ಕನಕದಾಸ ಜಯಂತಿಯಲ್ಲಿ ಮಾತ ನಾಡಿದ ಅವರು, ಕನಕದಾಸರು ಸಮಾಜ ದಲ್ಲಿದ್ದ ಮೇಲು–ಕೀಳೆಂಬ ಅಸಮಾನತೆ ಯನ್ನು ತಮ್ಮ ಕೀರ್ತನೆಗಳ ಮೂಲಕ ಹೋಗ ಲಾಡಿಸಿ ಸಮಾಜ ಸುಧಾರಕರಾದರು. ದೇವರು ಎಲ್ಲಾ ಕಡೆ ಇದ್ದು, ಎಲ್ಲಾ ಪ್ರಾಣಿ ಗಳಲ್ಲೂ ಇದ್ದಾನೆ ಎಂದು ಕೇವಲ ಮಾತಿನಲ್ಲಿ ಹೇಳದೆ ದೃಢವಾಗಿ ನಂಬಿದ್ದರು. ಹಾಗಾಗಿ ಅವರೇ ದೇವರ ಸಾಕ್ಷಾತ್ಕಾರ ಮಾಡಿಕೊಂಡಿ ದ್ದರು. ಅಲ್ಲದೇ ಗುರುಗಳಿಗೆ ತಮ್ಮ ಆರಾಧನಾ ದೈವದ ದರ್ಶನ ಮಾಡಿಸಿದ ಕೀರ್ತಿ ಕನಕದಾಸರಿಗೆ ಸಲ್ಲುತ್ತದೆ ಎಂದರು.

ಕನಕದಾಸರ ಸರಳ ಭಕ್ತಿ ತುಂಬಿದ ಬದುಕು, ಅತ್ಯುತ್ತಮ ಆಲೋಚನೆ ಅವರ ಜೀವನದ ಆದರ್ಶ ಗುಣಗಳು ಆಗಿದ್ದವು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು ದಾವಣಗೆರೆ, ಧಾರವಾಡ ಸೇರಿದಂತೆ ಹಾವೇರಿ ಭಾಗದಲ್ಲಿ ಮಹ ನೀಯರ ಗುರುಪೀಠ ಸೇರಿದಂತೆ ಅನೇಕ ಮಠಗಳಿದ್ದು, ದಾರ್ಶನಿಕರ ನೆಲೆ ಬೀಡಾ ಗಿದೆ ಎಂದರು. ಯಾವುದೇ ಜಿಲ್ಲಾ ಕೇಂದ್ರ ದಲ್ಲೂ ನಿರ್ಮಾಣವಾಗದ ಕನಕ ಭವನ ಹೆಚ್.ಡಿ.ಕೋಟೆ ಪಟ್ಟಣದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿ ಸಾರ್ವಜನಿಕರಿಗೆ ಉಪಯೋಗವಾಗುತ್ತಿರು ವುದು ಹೆಮ್ಮೆಯ ವಿಚಾರ ಎಂದರು.

ಕಾರ್ಯಕ್ರಮದಲ್ಲಿ ಪ್ರಭಾರ ತಹಸೀ ಲ್ದಾರ್ ಸಣ್ಣರಾಮಪ್ಪ, ಇಓ ರಾಜೇಶ್ ಜೆರಾಲ್ಡ್, ಉಪ ತಹಸೀಲ್ದಾರ್ ಮಹೇಶ್, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಎಂ.ಬಿ.ಆನಂದ್, ಜಿಪಂ ಮಾಜಿ ಸದಸ್ಯ ಎಚ್.ಸಿ.ಮಂಜುನಾಥ್, ಬೋವಿ ನಿಗಮದ ಮಾಜಿ ಅಧ್ಯಕ್ಷ ಸೀತಾರಾಂ, ಜಿಲ್ಲಾ ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಪ್ರಕಾಶ್, ಮುಖಂಡರಾದ ಚನ್ನೇಗೌಡ, ಕೋಮಾರೇ ಗೌಡ, ಮಂಜು, ಚಂದ್ರೇಗೌಡ, ದೇವರಾಜು, ಮಾದೇವು, ಶಿವಮಲ್ಲಪ್ಪ, ರಾಜೇಗೌಡ, ನಾಗರಾಜು, ಪಟ್ಟಣ ಪಂಚಾಯತಿ ಸದಸ್ಯ ಶ್ರೀನಿವಾಸ್, ಬೀರೇಗೌಡ ಇದ್ದರು.

ಡಿ.6, ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶ



ತಿ.ನರಸೀಪುರ, ನ.12– ದೇಶದಲ್ಲಿ ಸ್ವಾತಂತ್ರ್ಯ, ಸಮಾನತೆ, ಸಹೋದರತೆ, ಸಾಮಾಜಿಕ ನ್ಯಾಯ ಮತ್ತು ಮೀಸಲಾತಿ ಆಶಯಗಳನ್ನು ನಾಶಗೊಳಿಸು ತ್ತಿರುವ ಆರ್‌ಎಸ್‌ಎಸ್, ಬಿಜೆಪಿ ದುರಾಡಳಿತದ ವಿರುದ್ಧ ಜಾಗೃತಗೊಂಡಿರುವ ದಲಿತ ಸಂಘರ್ಷ ಸಮಿತಿಗಳು 80ರ ದಶಕದ ಶಕ್ತಿ ಪ್ರದರ್ಶಿಸಲು ಡಾ.ಬಿ.ಆರ್. ಅಂಬೇಡ್ಕರ್ ಅವರ 66ನೇ ಪರಿನಿಬ್ಬಾಣ ದಿನವಾದ ಡಿ.6 ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ 'ದಲಿತರ ಸಾಂಸ್ಕೃತಿಕ ಪ್ರತಿರೋಧ' ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶ ಆಯೋಜಿಸಿದೆ

ಸಮಾವೇಶ ಹಿನ್ನೆಲೆಯಲ್ಲಿ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ ಶನಿವಾರ ಪೂರ್ವಭಾವಿ ಸಭೆ ನಡೆಸಿದ ದಲಿತ ಸಂಘರ್ಷ ಸಮಿತಿ ಗಳ ಐಕ್ಯತಾ ಹೋರಾಟ ಸಮಿತಿ ಪದಾಧಿಕಾರಿಗಳು, ಜಿಲ್ಲೆಯಿಂದ 15 ಸಾವಿರ ಹಾಗೂ ತಾಲೂಕಿನಿಂದ 3 ಸಾವಿರ ಮಂದಿ ಭಾಗವಹಿಸುವ ರೂಪರೇಷೆಗಳ ಬಗ್ಗೆ ಚರ್ಚೆ ನಡೆಸಿದರು.

ಸಮನ್ವಯ ಸಮಿತಿ ಸದಸ್ಯ ಆಲಗೂಡು ಶಿವ ಕುಮಾರ್ ಮಾತನಾಡಿ, ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವುದರಿಂದ ಸಂವಿಧಾನ, ಪ್ರಜಾಪ್ರಭುತ್ವ ಸೇರಿದಂತೆ ದಲಿತರು, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ಸಮುದಾಯ ಗಳ ಜನರ ಬದುಕು ಅಪಾಯದಲ್ಲಿದೆ. ಕೋಮು ವಿಷದ ಗೂಡ್ಸೆ, ಸಾವರ್ಕರ್‌ಗಳು ಮುನ್ನೆಲೆಗೆ ಬರು ತ್ತಿದ್ದಾರೆ. ದೇಶವೇ ಕೋಮು ನಂಜಿನ ಮಾಯಾ ಜಾಲದೊಳಗೆ ಸಿಲುಕಿ, ಮತಿಭ್ರಮಣೆಗೆ ಒಳಗಾದಂತೆ ವರ್ತಿಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನ ರಕ್ಷಣೆ ಮಾಡಲೇಬೇಕಾದ ಜವಾಬ್ದಾರಿ ಪ್ರಗತಿಪರ ಸಂಘಟನೆಗಳ ಮೇಲಿದೆ. ಕೆಲವು ಕಾರಣಗಳಿಗಾಗಿ ಚದುರಿ ಹೋಗಿರುವ ದಸಂಸ ಬಣಗಳು ಒಗ್ಗೂಡಿ ರಾಜ್ಯ ಮಟ್ಟದ ಐಕ್ಯತಾ ಸಮಾವೇಶ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಮಾತನಾಡಿ, ದೇಶ ಹಾಗೂ ರಾಜ್ಯದಲ್ಲಿ ದಲಿತರ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯ ತಡೆಗಟ್ಟಲು ಒಗ್ಗಟ್ಟಿನ ಅಗತ್ಯವಿದೆ. ಈ ಹಿಂದಿನ ಸರ್ಕಾರಗಳು ದಲಿತರ ಮತಕ್ಕಾದರೂ ಸಮುದಾಯದ ಅನ್ಯಾಯಕ್ಕೆ ಮಿಡಿಯುತ್ತಿದ್ದವು. ಕಾನೂನು ಕ್ರಮ ತೆಗೆದುಕೊಳ್ಳುತ್ತಿದ್ದವು. ಮತಯಂತ್ರದ ಮೂಲಕವೇ ಅಧಿಕಾರ ಹಿಡಿಯುವ ಹುನ್ನಾರ ಕಂಡುಕೊಂಡಿರುವ ಈಗಿನ ಸರ್ಕಾರ ದಲಿತರನ್ನು ತೀವ್ರ ತಾತ್ಸಾರದಿಂದ ನೋಡುತ್ತಿದೆ. ಇಂತಹ ಧೋರಣೆ ವಿರುದ್ಧ ಜಾಗತಿಕ ಮಟ್ಟದ ಹೋರಾಟಕ್ಕೆ ಅಣಿಯಾಗಲು ನಾವೆಲ್ಲರೂ ಬೃಹತ್ ಐಕ್ಯದ ಸಮಾವೇಶ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಸಮನ್ವಯ ಸಮಿತಿ ಸಂಚಾಲಕ ಶಿವಲಿಂಗಯ್ಯ, ಸದಸ್ಯರಾದ ದೇವನೂರು ಬಸವರಾಜು, ಆರ್.ಎಸ್.ದೊಡ್ಡಣ್ಣ, ವರದಯ್ಯ, ಮಲ್ಲೇಶ್ ಚುಂಚನ ಹಳ್ಳಿ, ಕಾರ್ಯ ಬಸವಣ್ಣ, ಭುಗತಗಹಳ್ಳಿ ಮಣಿಯಯ್ಯ, ಬನ್ನಹಳ್ಳಿ ಸೋಮಣ್ಣ, ಮಾಜಿ ಉಪ ಪ್ರಧಾನ ಡಿ.ಆರ್. ಮೂರ್ತಿ, ಗ್ರಾಪಂ ಮಾಜಿ ಸದಸ್ಯರಾದ ಉಕ್ಕಲಗೆರೆ ರಾಜು, ಹೊನ್ನಯ್ಯ ದಸಂಸ ಜಿಲ್ಲಾ ಸಂಚಾಲಕರಾದ ಎಸ್.ಆರ್.ಶಶಿಕಾಂತ್, ಸೋಸಲೆ ರಾಜಶೇಖರಮೂರ್ತಿ, ಸಂಘಟನಾ ಸಂಚಾಲಕರಾದ ಶಂಭುಲಿಂಗಸ್ವಾಮಿ, ಆಲಗೂಡು ಶಿವಣ್ಣ, ಯರಗನಹಳ್ಳಿ ಸುರೇಶ್, ಸಿದ್ದ ರಾಜು, ತಾಲೂಕು ಸಂಚಾಲಕರಾದ ಯಾಚೇನಹಳ್ಳಿ ಸೋಮಶೇಖರ, ಕುಕ್ಕುರು ರಾಜು, ಎಸ್.ನಂಜುಂಡಯ್ಯ, ಬನ್ನಹಳ್ಳಿ ಬಸವರಾಜು, ಸಂಘಟನಾ ಸಂಚಾಲಕರಾದ ಯಾಕನೂರು ಮಹದೇವಸ್ವಾಮಿ, ಮಂಜುನಾಥ್ ಕೊಳತ್ತೂರು, ಮಹದೇವಸ್ವಾಮಿ, ವಾಟಾಳು ನಾಗರಾಜು, ಚೆನ್ನಮಲ್ಲು, ಚಂದ್ರು, ಕೃಷ್ಣ, ವೈ.ಎಸ್. ರಾಘವೇಂದ್ರ, ರಂಗಸಮುದ್ರ ನಂಜುಂಡ, ರಂಗಸ್ವಾಮಿ, ಕರೋಹಟ್ಟಿ ನಾಗೇಶ, ಬನ್ನಳ್ಳಿಹುಂಡಿ ಉಮೇಶ, ಹಿರಿಯೂರು ಸೋಮಣ್ಣ, ನೀಲಸೋಗೆ ಸಿದ್ದರಾಜು ಇನ್ನಿತರರಿದ್ದರು.

ಕೊಂಗಳ್ಳಿ ಬೆಟ್ಟದಲ್ಲಿ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವ



ತಿ.ನರಸೀಪುರ, ನ.12– ತಾಲೂಕಿನ ಹೆಳವರಹುಂಡಿ ಗ್ರಾಮದವರಿಂದ ಚಾಮರಾಜ ನಗರ ಜಿಲ್ಲಾ ಗಡಿ ವ್ಯಾಪ್ತಿಯ ತಾಳವಾಡಿ ತಾಲೂಕಿನ ಕೊಂಗಳ್ಳಿಬೆಟ್ಟದಲ್ಲಿ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವ, ಹುಲಿ ವಾಹನೋತ್ಸವ ಹಾಗೂ ದೊಡ್ಡಪರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಬೆಟ್ಟದಲ್ಲಿರುವ ಕೊಂಗಳ್ಳಿ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಲ್ಲಿ ನಡೆಯಲಿರುವ ಕಾರ್ತಿಕ ಉತ್ಸವದ ಅಂಗವಾಗಿ ನ.12ರಂದು ರಾತ್ರಿ 8 ಗಂಟೆಗೆ ಹೆಳವರಹುಂಡಿ ಗ್ರಾಮದಿಂದ ಬಸವಗಳು ಹೊರಡಲಿದೆ. ನ.14 ರಂದು ಬೆಳಗ್ಗೆ 10 ಗಂಟೆಗೆ ಬೆಟ್ಟಕ್ಕೆ ಬಸವಗಳು ಆಗಮಿಸಲಿದ್ದು, ಪೂಜಾ ಕೈಂಕರ್ಯ ನಡೆಯ ಲಿದೆ. ಬಳಿಕ ರಾತ್ರಿ 8 ಗಂಟೆಗೆ ಚಿಕ್ಕಪರ ನಡೆಯಲಿದೆ. ನ.15 ರಂದು ಮಧ್ಯಾಹ್ನ 3 ಗಂಟೆಗೆ ಶ್ರೀಸ್ವಾಮಿಯವರ ಹುಲಿವಾಹನೋತ್ಸವ ಹಾಗೂ ಸಂಜೆ 6 ಗಂಟೆಗೆ ದೊಡ್ಡಪರ (ಅನ್ನ ಸಂತರ್ಪಣೆ) ನಡೆಯಲಿದೆ.

ಈ ಬೆಟ್ಟವು ಹುಲಿ ಸಂರಕ್ಷಣಾ ವಲಯ ವಾಗಿರುವುದರಿಂದ ದೇವರ ದರ್ಶನಕ್ಕೆ ಪ್ರತಿದಿನ ಬೆಳಗ್ಗೆ 6 ರಿಂದ ಸಂಜೆ 5 ಗಂಟೆ ವರೆಗೆ ಮಾತ್ರ ಅವಕಾಶ ನೀಡಲಾಗಿದ್ದು, ನಂತರ ಪ್ರವೇಶ ನಿರ್ಬಂಧಿಸಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗುವಂತೆ ಹೆಳವರಹುಂಡಿ ಗ್ರಾಮಸ್ಥರು ಪ್ರಕಟಣೆಯಲ್ಲಿ ಕೋರಿದ್ದಾರೆ.



ನಂಜನಗೂಡು ತಾಲೂಕಿನ ನಗರ್ಲೆ ಗ್ರಾಪಂ ವತಿಯಿಂದ ಭಕ್ತ ಕನಕದಾಸರ ಜಯಂತಿ ಆಚರಿಸಲಾಯಿತು. ಗ್ರಾಪಂ ಅಧ್ಯಕ್ಷ ಸುಮನ್‌ರಾಜ್, ಸದಸ್ಯರಾದ ಪ್ರಭಾಕರ, ಜಯಶಂಕರ್, ಸಿದ್ದಾರ್ಥ, ಸಂಧ್ಯಾ, ಪಿಡಿಓ ಈಶಕುಮಾರ್, ದ್ವಿತೀಯ ದರ್ಜೆ ಸಹಾಯಕ ಶ್ರೀನಿವಾಸಮೂರ್ತಿ, ಸಿಬ್ಬಂದಿಗಳಾದ ಕುಮಾರ್, ಮುಖಂಡರಾದ ಸೋಮಣ್ಣ ಇತರರಿದ್ದರು.

ಎಸ್‌ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ರಮೇಶ್ ನಂದಿನಿ

ಹುಣಸೂರು, ನ.12– ನಗರದ ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆ ನೂತನ ಎಸ್‌ಡಿಎಂಸಿ ಅಧ್ಯಕ್ಷರಾಗಿ ತಾಲೂಕು ಪತ್ರಿಕಾ ವಿತರಕರ ಸಂಘದ ನಿರ್ದೇಶಕ ರಮೇಶ್, ಉಪಾಧ್ಯಕ್ಷರಾಗಿ ನಂದಿನಿ ಆಯ್ಕೆಯಾಗಿದ್ದಾರೆ.

ಸದಸ್ಯರಾಗಿ ಹರೀಶ್, ಉಮಾಶಂಕರ್, ಬಿಂದು, ರಾಜೇಶ್ವರಿ, ಪರಮೇಶ್, ಚಂದ್ರ ನಾಯಕ, ಲಕ್ಷ್ಮಿ, ನಜ್ಮಾನಜೀರ್, ನಾಗ ರಾಜು, ವಸೀಂ ಅಹಮ್ಮದ್, ಕುಮಾರ್, ನಂದಿನಿ, ಸುಮಾ, ನಾಗರಾಜು, ಶಿಲ್ಪ ಹಾಗೂ ಲಕ್ಷ್ಮಮ್ಮ ಆಯ್ಕೆಯಾಗಿದ್ದಾರೆ ಎಂದು ಮುಖ್ಯ ಶಿಕ್ಷಕ ಡಾ.ಮಾಧುಪ್ರಸಾದ್ ತಿಳಿಸಿದ್ದಾರೆ.

ರಾಜೀ ಸಂಧಾನದಲ್ಲಿ ಮತ್ತೆ ಒಂದಾದ 29 ಜೋಡಿಗಳು

ವರ್ಷದ ಕೊನೆಯ ಲೋಕ ಅದಾಲತ್‌ನಲ್ಲಿ 3,500 ಪ್ರಕರಣ ಇತ್ಯರ್ಥ



ಮೈಸೂರು, ನ.12 (ಆರ್‌ಕೆ)–ಸಣ್ಣಪುಟ್ಟ ಸಾಂಸಾರಿಕ ಕಲಹಗಳಿಂದ ವಿಚ್ಛೇಧನ ಬಯಸಿ ನ್ಯಾಯಾಲಯದ ಮೆಟ್ಟಿಲೇರಿದ್ದ 29 ಜೋಡಿಗಳು ಇಂದು ನಡೆದ ವರ್ಷದ ಕಡೇ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ರಾಜೀ ಸಂಧಾನದ ಮೂಲಕ ಮತ್ತೆ ಒಂದಾಗಿ ಜೀವನ ನಡೆಸಲು ಸಮ್ಮತಿಸಿದ್ದಾರೆ.

ಮೈಸೂರಿನ ಮಳಲವಾಡಿ ನ್ಯಾಯಾಲಯ ಸಮುಚ್ಛಯ ಸಭಾಂಗಣದಲ್ಲಿ ಈ ಸಂಬಂಧ ಇಂದು ಸುದ್ದಿಗೋಷ್ಠಿ ನಡೆಸಿದ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಎಲ್.ರಘುನಾಥ್ ಅವರ ಮುಂದೆ 29 ಜೋಡಿ ನ್ಯಾಯಾಲಯದ ಮಧ್ಯಸ್ಥಿಕೆಯಲ್ಲಿ ಒಂದಾದರು.

ಈ ಸಂದರ್ಭ ಮಾತನಾಡಿದ ನ್ಯಾಯಾಧೀಶರು, 'ಗಂಡ–ಹೆಂಡಿರ ಜಗಳ ಉಂಡು ಮಲಗುವ ತನಕ' ಎನ್ನುವ ಗಾದೆಯಂತೆ ಕೆಲವು ದಂಪತಿ ಕ್ಷುಲ್ಲಕ ಕಾರಣಕ್ಕಾಗಿ ಜಗಳವಾಡಿಕೊಂಡು ಕ್ಷಣಾರ್ಧದಲ್ಲಿ ಒಂದಾಗುತ್ತಾರೆ. ಆದರೆ ಕೆಲವರು ಪ್ರತಿಷ್ಠೆಯಾಗಿ ಪರಿಗಣಿಸಿ, ವಿಚ್ಛೇಧನಕ್ಕೆ ಅರ್ಜಿ ಸಲ್ಲಿಸುತ್ತಾರೆ ಎಂದರು.

ಮೈಸೂರು ಜಿಲ್ಲೆಯ ನ್ಯಾಯಾಲಯಗಳಲ್ಲಿ ಇಂದು ನಡೆದ ಲೋಕ ಅದಾಲತ್‌ನಲ್ಲಿ 29 ಜೋಡಿಗಳು ತಮ್ಮೆಲ್ಲಾ ವೈಮನಸ್ಸು ದೂರ ಮಾಡಿ, ಮತ್ತೆ ಜೊತೆಯಾಗಿ ಸಂಸಾರದ ಬಂಡಿ ಎಳೆಯಲು ಸಮ್ಮತಿಸಿದ್ದಾರೆ. ಹಲವು ತಿಂಗಳಿಂದ ಪರಸ್ಪರ ಮಾತನಾಡದೇ ದೂರ ಉಳಿದಿದ್ದ ಅವರು ನ್ಯಾಯಾಲಯದ ಮಧ್ಯಸ್ಥಿಕೆಯಲ್ಲಿ ಒಂದಾಗಿದ್ದಾರೆ ಎಂದು ರಘುನಾಥ್ ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಆಯೋಜಿಸಿದ್ದ ವರ್ಷದ ಕೊನೆಯ ಲೋಕ ಅದಾಲತ್‌ನಲ್ಲಿ ಮೈಸೂರು ಜಿಲ್ಲೆಯ ವಿವಿಧ ನ್ಯಾಯಾಲಯಗಳ 3,500 ಪ್ರಕರಣಗಳು ರಾಜೀ–ಸಂಧಾನದ ಮೂಲಕ ಇತ್ಯರ್ಥವಾಗಿವೆ. ಒಟ್ಟು 1,12,756 ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇದ್ದವು. ಆ ಪೈಕಿ 20,800 ಅರ್ಜಿ ಲೋಕ ಅದಾಲತ್‌ಗೆ ಬಂದಿದ್ದು, 3,500 ಪ್ರಕರಣಗಳು ಇತ್ಯರ್ಥವಾಗಿವೆ ಎಂದು ನ್ಯಾಯಾಧೀಶರು ತಿಳಿಸಿದರು.

ಇಂದಿನ ಲೋಕ ಅದಾಲತ್‌ನಲ್ಲಿ ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದ 16,746 ಪ್ರಕರಣಗಳಲ್ಲಿ ಸಾರ್ವಜನಿಕರು 77,42,100 ರೂ. ದಂಡ ಪಾವತಿಸಿದ್ದಾರೆ. ಅದೇ ರೀತಿ ಬ್ಯಾಂಕ್ ವ್ಯವಹಾರಗಳಿಗೆ ಸಂಬಂಧಿಸಿದ 246 ಪ್ರಕರಣಗಳ ಪೈಕಿ 1,85,42,722 ರೂ., ಬಿಎಸ್‌ಎನ್‌ಎಲ್‌ನ 62 ಪ್ರಕರಣಗಳಲ್ಲಿ 1,51,942 ರೂ.ಗಳನ್ನು ಸಂಬಂಧಿಸಿದ ಗ್ರಾಹಕರಿಗೆ ಪಾವತಿಸಿ ಇತ್ಯರ್ಥಪಡಿಸಲಾಗಿದೆ ಎಂದು ನ್ಯಾಯಾಧೀಶರು ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆಗೆ ನೀರಿನ ಬಿಲ್ ಪಾವತಿಸದ 37,762 ಪ್ರಕರಣಗಳಲ್ಲಿ 4,25,50,053 ರೂ.ಗಳನ್ನು ಗ್ರಾಹಕರು ಪಾವತಿಸಿದ್ದಾರೆ. ದಂಪತಿ ಮೃತಪಟ್ಟ ನಂತರ ಅವರ 13 ವರ್ಷದ ಮಗ, ತಮಗೆ ಸೇರಬೇಕೆಂದು ಎರಡೂ ಕಡೆಯವರೂ ಹಠ ಹಿಡಿದಿದ್ದರು. ಲೋಕ ಅದಾಲತ್‌ನಲ್ಲಿ ಉಭಯತ್ರರನ್ನೂ ಕರೆಸಿ ಮಾತನಾಡಿ, ಆತ ಎರಡೂ ಕುಟುಂಬಗಳ ಪೋಷಣೆಯಲ್ಲೂ ಬೆಳೆಯಲು ಅವಕಾಶ ಕಲ್ಪಿಸಿಕೊಡಲಾಗಿದ್ದು, ಎರಡೂ ಕುಟುಂಬದವರೂ ಮೊಮ್ಮಗನನ್ನು ಅಪ್ಪಿ ಮುದ್ದಾಡಿದರು. ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ವೇಲಾಕೋಡೆ, ರೊಡಾಲ್ಫ್ ಫೆರೇರಾ, ಗಿರೀಶ್ ಭಟ್, ರಮೇಶ್, ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಲೋಕ ಅದಾಲತ್‌ನಲ್ಲಿ ಈವರೆಗೆ 64,672 ಪ್ರಕರಣ ಇತ್ಯರ್ಥ

ಮೈಸೂರು: ಈವರೆಗೆ ನಡೆದ ರಾಷ್ಟ್ರೀಯ ಲೋಕ ಅದಾಲತ್‌ಗಳಲ್ಲಿ ಒಟ್ಟು 64,672 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಎಂ.ಎಲ್.ರಘುನಾಥ್ ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲಾ 69 ನ್ಯಾಯಾಲಯಗಳಲ್ಲಿ ಬಾಕಿ ಇದ್ದ ಹಾಗೂ ರಾಜೀ–ಸಂಧಾನಕ್ಕೆ ಗುರುತಿಸಲಾಗಿದ್ದ 39,879 ಪ್ರಕರಣಗಳ ಪೈಕಿ 4,282 ಹಾಗೂ 60,390 ವ್ಯಾಜ್ಯ ಪೂರ್ವ ಪ್ರಕರಣ ಸೇರಿ ಈವರೆಗೆ 64,672 ಪ್ರಕರಣಗಳನ್ನು ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗಿದೆ ಎಂದು ತಿಳಿಸಿದ್ದಾರೆ. ಅದೇ ರೀತಿ ಲೋಕ ಅದಾಲತ್‌ನಲ್ಲಿ ತೀರ್ಮಾನವಾದ ಪ್ರಕರಣಗಳಲ್ಲಿ ಇಲ್ಲಿಯವರೆಗೆ ಒಟ್ಟು 81,50,20, 722 ರೂ. ಪರಿಹಾರ ನೀಡಲು ಆದೇಶಿಸಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ನ.12–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2022–23ನೇ ಸಾಲಿಗೆ ನೀಡಲಾಗುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, 2022ರ ಡಿಸೆಂಬರ್ 31ಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ.

1–10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು https://ssp.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ https://bcwd.karnataka.gov.in ವೆಬ್‌ಸೈಟ್ ಅಥವಾ ದೂ.ಸಂ: 8050 770005 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ರಾಷ್ಟ್ರೀಯ ನೃತ್ಯೋತ್ಸವಕ್ಕೆ ಚಾಲನೆ



ಮೈಸೂರು, ನ.12(ಎಸ್‌ಪಿಎನ್)– ಭಾರತೀಯ ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆ ಜಗತ್ತಿನಾದ್ಯಂತ ಗುರುತಿಸಲ್ಪಟ್ಟಿವೆ. ಇದು ದೇಶದ ಬೆಳವಣಿಗೆಯ ಮುನ್ನುಡಿ ಎಂದು ಗೊಂಬೆ ಮನೆ ರೂವಾರಿ ಆರ್.ಜಿ.ಸಿಂಗ್ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದಲ್ಲಿರುವ ರಮಾಗೋವಿಂಧ ಸಭಾಂಗಣದಲ್ಲಿ 'ಭೂಷಣ ಪ್ರದರ್ಶಕ ಕಲೆಗಳು ಮತ್ತು ದೃಶ್ಯ ಪ್ರಸ್ತುತಿ ಕೇಂದ್ರ'ದ ವತಿಯಿಂದ ಆಯೋಜಿಸಿದ್ದ ಇಂದಿನಿಂದ ನವೆಂಬರ್ 14ರವರೆಗೆ ನಡೆಯುವ ಮೂರು ದಿನಗಳ ರಾಷ್ಟ್ರೀಯ ನೃತ್ಯೋತ್ಸವವನ್ನು ಉದ್ಘಾಟಿಸಿ ಅವರು, ಮಾತನಾಡಿದರು.

ಭಾರತೀಯ ಕಲೆ, ಸಾಹಿತ್ಯ ಹಾಗೂ ಪ್ರದರ್ಶಕ ಕಲೆಗಳು ಜಗತ್ತಿನಾದ್ಯಂತ ವಿವಿಧ ಕಲಾವಿದರು ಪ್ರದರ್ಶನ ನೀಡಿ, ಇಂದು ದೇಶಕ್ಕೆ ಗೌರವ ತಂದುಕೊಂಡಿದ್ದಾರೆ. ಅದೇ ರೀತಿ ಅಂತರರಾಷ್ಟ್ರೀಯ ಕಲಾವಿದರಾದ ಬದರಿ ದಿವ್ಯಾ ಭೂಷಣ್, ಆಡಿ ಅಂಜನ್ ಭೂಷಣ್ ಅವರು ಕರ್ನಾಟಕ ಸೇರಿದಂತೆ ದೇಶ–ವಿದೇಶದ ನಾನಾ ಭಾಗದಲ್ಲಿ ನೃತ್ಯ ಪ್ರದರ್ಶನ ನೀಡಿ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ್ದಾರೆ. ಇಂದು ಮೈಸೂರಿನಲ್ಲಿ ನೃತ್ಯ ಪ್ರದರ್ಶನ ನೀಡುತ್ತಿರುವುದು ಸಂತೋಷದ ಸಂಗತಿ ಎಂದರು.

ವೇದಿಕೆ ಕಾರ್ಯಕ್ರಮದ ನಂತರ ಚೆನ್ನೈನ ಕಲಾವಿದೆ ರೋಜಾ ಕಣ್ಣನ್ ತಂಡದ ಕಲಾವಿದರು 'ತ್ಯಾಗ ರಹಸ್ಯ' ನೃತ್ಯ ರೂಪಕ ಪ್ರಸ್ತುತ ಪಡಿಸಿದರು. ನಂತರ ಬಾಲಕರಾದ ಅಭ್ಯುದಯ ಧ್ಯಾನ್ ಭೂಷಣ್, ಅಭಿಜ್ಞಾನ ವೇದಾಂತ ಭೂಷಣ್ ಹಾಗೂ ಹಿರಿಯ ಕಲಾವಿದೆ ಅಂಜನಾ ನೃತ್ಯ ಪ್ರದರ್ಶನಕ್ಕೆ ಪ್ರೇಕ್ಷಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು. ನಂತರ ದೀಪ ಶಶಿಂದ್ರ ಅವರ 'ನಂದನಾರ್ ಚರಿತಂ' ಕೂಚಿಪುಡಿ ಶೈಲಿ ನೋಡಗರನ್ನು ಮನಸೂರೆಗೊಂಡಿತು. ನ.13ರಂದು ಕಲಾವಿದರಾದ ರಂಜನಿ ಗಣೇಶನ್ ಮತ್ತು ಮಾಲಿಕ ಪಣಿಕ್ಕರ್ ಅವರ ದ್ವಂದ್ವ 'ದೇವನೃತ್ಯ' ಮತ್ತು 'ಮೋಹಿನಿಯಾಟ್ಟಮ್' ನೃತ್ಯ ಪ್ರದರ್ಶನಗೊಳ್ಳಲಿದೆ. ನಂತರ ಕಲಾವಿ ಭೂಷಣ್‌ರವರ ನೇತೃತ್ವದಲ್ಲಿ ಶ್ರೀ ರಾಮಾನುಜ 'ಧನುರ್ದಾಸ ನೃತ್ಯ ವೈಭವ' ಪ್ರಸ್ತುತಗೊಳ್ಳಲಿದೆ. ನಂತರ ಪುಣೆ ಕಲಾವಿದರಾದ ರುಜುತ ಸೋಮನ್ ಮತ್ತು ಸಂಪದ ಪಿಳ್ಳೈರವರ ಕಥಕ್ ನೃತ್ಯ ಪ್ರದರ್ಶನ ಜರುಗಲಿದೆ. ನ.14ರಂದು ಖ್ಯಾತ ನೃತ್ಯಪಟು ಡಾ.ವಸುಂಧರಾ ದೊರೆಸ್ವಾಮಿ ಅವರ 'ಅಮ್ಮ' ನೃತ್ಯ ಪ್ರಸ್ತುತಿ ಹಾಗೂ ಕೆ.ಸತ್ಯನಾರಾಯಣ ರಾಜು ಅವರ ಏಕವ್ಯಕ್ತಿ ಭರತನಾಟ್ಯ ಕಾರ್ಯಕ್ರಮ ಜರುಗಲಿದೆ.

ಮತ್ತೊಂದು ಹನಿಟ್ರ್ಯಾಪ್ ಪ್ರಕರಣ

ಐಪಿಎಸ್ ಅಧಿಕಾರಿ ಹೆಸರು ಹೇಳಿ 15 ಲಕ್ಷ ಸುಲಿಗೆ

ಬೆಂಗಳೂರು: ಬೆಂಗಳೂರಲ್ಲಿ ಮತ್ತೊಂದು ಹನಿಟ್ರ್ಯಾಪ್ ಜಾಲ ಪ್ರಕರಣ ವರದಿಯಾಗಿದೆ. ಬಲೆಗೆ ಸಿಲುಕಿದ್ದ ಯುವಕ 15.6 ಲಕ್ಷ ರೂಪಾಯಿ ಕಳೆದುಕೊಂಡಿದ್ದಾನೆ.

ಚಾಮರಾಜನಗರದ ನಿವಾಸಿಗೆ ಇನ್‌ಸ್ಟಾಗ್ರಾಂನಲ್ಲಿ ಯುವತಿಯೊಬ್ಬಳ ಪರಿಚಯವಾಗಿತ್ತು ಯುವತಿ ತನ್ನನ್ನು ಚಾಂದಿನಿ ಎಂದು ಪರಿಚಯ ಮಾಡಿಕೊಂಡಿದ್ದಳು. ಬಳಿಕ ಅತ್ಯಂತ ಸಲುಗೆಯಿಂದ ದೂರವಾಣಿ ಮಾತುಕತೆ ನಡೆಸುತ್ತಿದ್ದರು. ಬೆತ್ತಲಾಗಿ ಮಾತುಕತೆ ನಡೆಸುವಂತೆ ಯುವತಿ ಪ್ರಚೋದಿಸುತ್ತಿದ್ದಳು. ಅದರಂತೆ ಯುವಕ ಬೆತ್ತಲಾಗಿ ಮಾತುಕತೆ ಕೂಡ ನಡೆಸಿದ್ದ. ಇದನ್ನು ಯುವತಿ ವಿಡಿಯೋ ರೆಕಾರ್ಡ್ ಮಾಡಿದ್ದಳು. 2 ದಿನಗಳ ಬಳಿಕ ಯುವತಿಯ ಸ್ನೇಹಿತ ನೊಬ್ಬ ತಾನು ಐಪಿಎಸ್ ಅಧಿಕಾರಿ ಎಂದು ಆತನಿಗೆ ಕರೆ ಮಾಡಿದ್ದಾನೆ, ಬೆತ್ತಲೆ ವಿಡಿಯೋ ವಿಚಾರವನ್ನು ಪ್ರಸ್ತಾಪಿಸಿ 15.6 ಲಕ್ಷ ರು ಹಣ ಸುಲಿಗೆ ಮಾಡಿದ್ದಾನೆ. ನಂತರ ಮತ್ತಷ್ಟು ಹಣಕ್ಕೆ ಬೇಡಿಕೆ ಇಟ್ಟಿದ್ದಾನೆ. ಇದರಿಂದ ಭಯಗೊಂಡ ವ್ಯಕ್ತಿ ಸೈಬರ್ ಪೊಲೀಸ್ ಠಾಣೆಗೆ ದೂರು ನೀಡಿದ್ದ.

ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಆರೋಪಿಗಳ ಬ್ಯಾಂಕ್ ಖಾತೆ ಬಗ್ಗೆ ಮಾಹಿತಿ ಪಡೆದಿದ್ದಾರೆ. ವಿಡಿಯೋ ಕಾಲ್ ಮಾಡುವಾಗ ಚಾಂದಿನಿ ಸಂತ್ರಸ್ತ ವ್ಯಕ್ತಿಗೆ ಮುಖ ತೋರಿಸಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. 4 ದಿನಗಳ ಹಿಂದೆ ಸದ್ದುಗುಂಟೆ ಪಾಳ್ಯ ಪೊಲೀಸರು ಹನಿ ಟ್ರ್ಯಾಪಿಂಗ್ ಆರೋಪದ ಮೇಲೆ 23 ವರ್ಷದ ಯುವತಿಯನ್ನು ಬಂಧಿಸಿದ್ದರು. ನಾಲ್ವರು ಸೇರಿ ಹಾಲಿನ ಬೂತ್ ಮಾಲೀಕನ ಮೇಲೆ ಹಲ್ಲೆ ನಡೆಸಿ ಹಣ, ಕಾರು ಹಾಗೂ ಇತರೆ ಬೆಲೆಬಾಳುವ ವಸ್ತುಗಳನ್ನು ಸುಲಿಗೆ ಮಾಡಿದ್ದರು.

ಮಹಿಳೆ ಆರ್ಥಿಕ ಸ್ವಾವಲಂಬನೆ ಸಾಧಿಸಲು ಯತ್ನಿಸಬೇಕು

ಪೊಲೀಸ್ ಅಕಾಡೆಮಿ ಉಪನಿರ್ದೇಶಕಿ ಸುಜಾತ ಸಲಹೆ



ಮೈಸೂರು, ನ.12(ಎಸ್‌ಪಿಎನ್)– ಮಹಿಳೆಯರು ವಿವಿಧ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಲು ಪ್ರಯತ್ನಿಸಬೇಕು ಎಂದು ಕರ್ನಾಟಕ ಪೊಲೀಸ್ ಅಕಾಡೆಮಿ ಉಪ ನಿರ್ದೇಶಕಿ ಸುಜಾತ ಸಲಹೆ ನೀಡಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ–2021–22 ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರದ ಸಾಧಕರ ಸನ್ಮಾನಿಸಿ, ಮಾತನಾಡಿದರು.

ಸಮಾಜದಲ್ಲಿ ನಡೆಯುವ ಮಹಿಳಾ ದೌರ್ಜನ್ಯ ತಡೆಗಟ್ಟಲು ಕುಟುಂಬದಲ್ಲಿನ ಎಲ್ಲರ ಸಹಕಾರ ಅಗತ್ಯ ಎಂದರಲ್ಲದೆ, ಮಹಿಳೆಯರು ಶಿಕ್ಷಣದ ಮೂಲಕ ಉದ್ಯೋಗ ಪಡೆದು, ಸ್ವಾವಲಂಬಿ ಜೀವನ ಕಟ್ಟಿಕೊಳ್ಳಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಮಹಿಳೆಯರು ಕೆಲಸ ನಿರ್ವಹಿಸುವ ಸ್ಥಳದಲ್ಲಿ ದೊಡ್ಡವರು–ಚಿಕ್ಕವರು ಎಂಬ ಭೇದ–ಭಾವ ಮಾಡದೇ ಕರ್ತವ್ಯ ನಿರ್ವಹಿಸಬೇಕು. ಈ ಹಿಂದೆ ಹೆಣ್ಣು ಮಕ್ಕಳಿಗೆ ಹೊರಗಡೆ ಕೆಲಸಕ್ಕೆ ಸೇರಲು ಅವಕಾಶ ವಿರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ನಗರ ಪ್ರದೇಶದ ಹೆಣ್ಣು ಮಕ್ಕಳು ಶೇ.35ರಷ್ಟು ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ. ಈ ಸಂಖ್ಯೆ ಶೇ.50 ದಾಟಬೇಕು ಎಂದ ಅವರು, ಕೈಗಾರಿಕೆ, ವ್ಯಾಪಾರ ಕ್ಷೇತ್ರದಲ್ಲಿಯೂ ತೊಡಗಿಸಿಕೊಳ್ಳುವಂತೆ ಮನವಿ ಮಾಡಿದರು.

ಈ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ಭವಾನಿ ಅರಸ್(616/625), ಪಂಚಮಿ ಅರಸ್(616/625), ವೈಷ್ಣವಿ ಅರಸ್ (600/625), ಸಿಂಧೂ ಶ್ರೀ ಅರಸ್, ಚಂದ್ರಶೇಖರ್ ಅರಸ್ (571/625), ಪುಣ್ಯ (625/465), ವಿನುತಾ ಅರಸ್ (612/625), ವರುಣ್ ಅರಸ್ ಶೇ.91 ಅಂಕಗಳಿಸಿದ್ದವರಿಗೆ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ್ದ ಕೆ.ವಿ. ಸೂರಜ್ ಅರಸ್ (541/600), ಸುರಭಿ ಅರಸ್ (593/600), ವೃಷಿಕಾ ಅರಸ್ (568/600) ಅವರು ಪ್ರಶಸ್ತಿಗೆ ಭಾಜನರಾದರು.

ಈ ಸಂದರ್ಭದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗಣ್ಣ, ಲಷ್ಕರ್ ಠಾಣೆ ಎಎಸ್‌ಐ ಧನಲಕ್ಷ್ಮಿ, ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್‌ನ ಗೌರವಾಧ್ಯಕ್ಷೆ ವಿಜಯ ಅರಸ್, ಟ್ರಸ್ಟ್ ಅಧ್ಯಕ್ಷೆ ಪಿ.ಬಿ.ಇಂದುಕಲಾ ಅರಸ್, ಕಾರ್ಯದರ್ಶಿ ಕೆ.ವಾಸಂತಿ ಅರಸ್ ಇನ್ನಿತರರು ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು, ಮೇ. ಕ್ಯಾಲಿಬರ್ ಟೆಕ್ನಾಲಜೀಸ್, ಇದರ ಪರವಾಗಿ ಅದರ ಮಾಲೀಕರಾದ ಮೈಸೂರು, ವಿಶ್ವೇಶ್ವರ ನಗರ ಪೋಸ್ಟಲ್ ಕಾಲೋನಿ, 4ನೇ ಮೇನ್, 18 ಅಡ್ಡ ರಸ್ತೆ, ನಂಬರ್ 481 ರ ನಿವಾಸಿಯಾದ, ಕೆ.ಕುಮಾರ್ ಬಿನ್ ಲೇ. ಪಿ.ಕಾಳಪ್ಪ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಹದಿನೈದು (15) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು, ವಿಶ್ವೇಶ್ವರ ನಗರ, ಕೈಗಾರಿಕಾ ಬಡಾವಣೆ, 2ನೇ ಹಂತ ಕೈಗಾರಿಕಾ ನಿವೇಶನ ನಂಬರ್. (1) 29/ಬಿ ರಲ್ಲಿ ಪೂರ್ವದಿಂದ ಪಶ್ಚಿಮ 35 ಅಡಿ, ಉತ್ತರ ದಕ್ಷಿಣ 100 ಅಡಿ, ಒಟ್ಟು ವಿಸ್ತೀರ್ಣ 3500 ಚದರ ಅಡಿ ನಿವೇಶನ ಮತ್ತು ಇದರಲ್ಲಿ ಕಟ್ಟಿರುವ 665 ಚದರ ಅಡಿಯ ರೆಡ್ ಆಕ್ಸೈಡ್ ನೆಲಹಾಸು, ಆರ್.ಸಿ.ಸಿ. ಚಾವಣಿಯ ವಸತಿ ಉಪಯೋಗದ ನೆಲ ಅಂತಸ್ತಿನ ಕಟ್ಟಡ (2). 29/ಬಿ1 ರಲ್ಲಿನ ಪೂರ್ವದಿಂದ ಪಶ್ಚಿಮ 55 ಅಡಿ ಉತ್ತರ ದಕ್ಷಿಣ 80 ಅಡಿ, ಒಟ್ಟು ವಿಸ್ತೀರ್ಣ 4400 ಚದರ ಅಡಿ ನಿವೇಶನ ಮತ್ತು ಇದರಲ್ಲಿ ಕಟ್ಟಿರುವ 586 ಚದರ ಅಡಿ ರೆಡ್ ಆಕ್ಸೈಡ್ ನೆಲಹಾಸು ಆರ್.ಸಿ.ಸಿ. ಚಾವಣಿಯುಳ್ಳ ವಸತಿ ಉಪಯೋಗದ ನೆಲ ಅಂತಸ್ತಿನ ಕಟ್ಟಡ (3). 29/ಬಿ2 ರಲ್ಲಿನ ಪೂರ್ವದಿಂದ ಪಶ್ಚಿಮ 55 ಅಡಿ ಉತ್ತರ ದಕ್ಷಿಣ 80 ಅಡಿ, ಒಟ್ಟು ವಿಸ್ತೀರ್ಣ 4400 ಚದರ ಅಡಿ ಅಳತೆಯ ನಿವೇಶನ ಮತ್ತು (4)29/ಬಿ3 ರಲ್ಲಿನ ಪೂರ್ವದಿಂದ ಪಶ್ಚಿಮ 55 ಅಡಿ ಉತ್ತರ ದಕ್ಷಿಣ 80 ಅಡಿ, ಒಟ್ಟು ವಿಸ್ತೀರ್ಣ 4400 ಚದರ ಅಡಿ ನಿವೇಶನ ಮತ್ತು ಇದರಲ್ಲಿ ಕಟ್ಟಿರುವ 555 ಚದರ ಅಡಿ ನೆಲ ಅಂತಸ್ತು, 1239 ಚದರ ಅಡಿ ಒಂದನೇ ಅಂತಸ್ತು, 160 ಚದರ ಅಡಿ ಎರಡನೇ ಅಂತಸ್ತು, ಮೊಸಾಯಿಕ್ ನೆಲಹಾಸು, ಆರ್.ಸಿ.ಸಿ ಚಾವಣಿಯುಳ್ಳ ವಾಣಿಜ್ಯ ಉಪಯೋಗದ ನೆಲ ಅಂತಸ್ತಿನ ಕಟ್ಟಡ ಮತ್ತು ಒಟ್ಟು ನಿವೇಶನದ ಒಟ್ಟು ವಿಸ್ತೀರ್ಣ ಪೂರ್ವ ದಿಂದ ಪಶ್ಚಿಮ 200 ಅಡಿ, ಉತ್ತರ ದಕ್ಷಿಣ 100 ಅಡಿ, ಒಟ್ಟು ವಿಸ್ತೀರ್ಣ 20,000 ಚದರ ಅಡಿ ಮತ್ತು ಇದಕ್ಕೆ ಚಕ್ಕುಬಂದಿ;

ಪೂರ್ವಕ್ಕೆ : ನಿವೇಶನ ಸಂಖ್ಯೆ 29–ಜಿ
ಪಶ್ಚಿಮಕ್ಕೆ : 9 ಮೀಟರ್ ರಸ್ತೆ.
ಉತ್ತರಕ್ಕೆ : ನಿವೇಶನ ಸಂಖ್ಯೆ 29–ಸಿ
ದಕ್ಷಿಣಕ್ಕೆ : ನಿವೇಶನ ಸಂಖ್ಯೆ 29–ಎ

Sd/- **M.N.Prakash Kalappa**
Advocate & Legal Consultant,
#2-3, First Floor, PRI Complex, 67/7A,
New Sayyajirao Road, Fort Mohalla,
Mysuru. Ph.: 9343112535.
ಮೈಸೂರು : 12/11/2022

ಸಾರ್ವಜನಿಕ ತಿಳುವಳಿಕೆ ಪತ್ರ

ಈ ಮೂಲಕ ಸಮಸ್ತ ಸಾರ್ವಜನಿಕರ ಗಮನಕ್ಕೆ / ತಿಳುವಳಿಕೆ ಪ್ರಚರ ಪಡಿಸುತ್ತಿರುವುದೆನೆಂದರೆ ನನ್ನ ಕಕ್ಷಿದಾರಾರು, ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಅಂದರೆ ಮೈಸೂರು–570010, ನಜರ್‌ಬಾದ್ ಮೊಹಲ್ಲಾ, ಚಾಮುಂಡಿ ವಿಹಾರ್ ಲೇಔಟ್, 4ನೇ ಕ್ರಾಸ್, ಮನೆ ನಂ 47 ರಲ್ಲಿ ವಾಸವಾಗಿರುವ ಶ್ರೀ ಜಿ ಗಣೇಶ್ ರಾವ್‌ರವರ ಧರ್ಮಪತ್ನಿ **ಶ್ರೀಮತಿ ಎಲ್ ಅಮರಾವತಿಯವರಿಂದ** ಸೂಕ್ತ ಮೌಲ್ಯಯುತವಾದ ಪ್ರತಿಫಲಕ್ಕೆ ಖರೀದಿಸುವ ಈರಾದೆಯನ್ನು ಹೊಂದಿರುವುದು ಸರಿಯಷ್ಟೆ. ಮೇಲೆ ತಿಳಿಸಿರುವ ಮಾಲೀಕರಿಗೆ ಮಾತ್ರ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಅವರ ಸ್ವಾಧೀನದಲಿದ್ದು ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವಂತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇನೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೇ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವಾ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ (ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಆಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್, ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್‌ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ಧಿಷ್ಟ ಪರಿಹಾರ ಸಾಲ ಬಾಕಿ, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಣೆಯಾದ 15 (ಹದಿನೈದು) ದಿನಗಳ ಒಳಗೆ ಸೂಕ್ತ ದಾಖಲೆಗಳೊಂದಿಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸೌಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಇರುವುದಿಲ್ಲಾ ಎಂದು ಪರಿಗಣಿಸಿ, ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಷೆಡ್ಯೂಲ್

ಐಟಂ ನಂ. 1 : ಮೈಸೂರು ಸಿಟಿ, ಮಂಡಿ ಮೊಹಲ್ಲಾ, ನಕ್ಷಬಂದ್ ಮಸೀದಿ ಹತ್ತಿರ, ಅಕ್ಬರ್ ರಸ್ತೆ, ಸ್ವತ್ತಿನ ನಂ. 3057, ಹೊಸ ನಂ. ಎಂ 79 ಮತ್ತು ನಂ. 3057/1, ಹೊಸ ನಂ. 79/1ರ ವಿಸ್ತೀರ್ಣ ಪೂರ್ವ–ಪಶ್ಚಿಮ 14.00 ಅಡಿಗಳು, ಉತ್ತರ–ದಕ್ಷಿಣ 14.00 ಅಡಿಗಳುಳ್ಳ ಸ್ವತ್ತಿಗೆ ಚೆಕ್ಕುಬಂದಿ

ಪೂರ್ವಕ್ಕೆ : ಸ್ವತ್ತಿನ ನಂ. 3058
ಪಶ್ಚಿಮಕ್ಕೆ : ಸ್ವತ್ತಿನ ನಂ. 3056
ಉತ್ತರಕ್ಕೆ : ಸ್ವತ್ತಿನ ನಂ. 3062/1, ಹೊಸ ನಂ. ಎಂ. 1 ನಂತರ ಗಲ್ಲಿ
ದಕ್ಷಿಣಕ್ಕೆ : ಅಕ್ಬರ್ ರಸ್ತೆ

ಐಟಂ ನಂ. 2 : ಮೈಸೂರು ಸಿಟಿ, ಮಂಡಿ ಮೊಹಲ್ಲಾ, ನಕ್ಷಬಂದ್ ಮಸೀದಿ ಗಲ್ಲಿ, ಸಜದ್ ಆಲಿ ಗಲ್ಲಿ ಹತ್ತಿರ (ಅಕ್ಬರ್ ರಸ್ತೆ ಹಿಂಭಾಗ) ಸ್ವತ್ತಿನ ನಂ. 3062/1, ಹೊಸ ನಂ. ಎಂ. –1 ರ ವಿಸ್ತೀರ್ಣ ಪೂರ್ವ–ಪಶ್ಚಿಮ 14.00 ಅಡಿಗಳು, ಉತ್ತರ–ದಕ್ಷಿಣ 36.00 ಅಡಿಗಳುಳ್ಳ ಸ್ವತ್ತಿಗೆ ಚೆಕ್ಕುಬಂದಿ:

ಪೂರ್ವಕ್ಕೆ : ಸ್ವತ್ತಿನ ನಂ. 3058 & 3062
ಪಶ್ಚಿಮಕ್ಕೆ : ಸ್ವತ್ತಿನ ನಂ. 3056 & 3063
ಉತ್ತರಕ್ಕೆ : ನಕ್ಷಬಂದ್ ಮಸೀದಿ ಗಲ್ಲಿ
ದಕ್ಷಿಣಕ್ಕೆ : ಸ್ವತ್ತಿನ ನಂ. 3057, ಎಂ 79, 3057/1, ಎಂ 79/1 ನಂತರ ಅಕ್ಬರ್ ರಸ್ತೆ

ದಿನಾಂಕ : 09/11/2022, ಸ್ಥಳ : ಮೈಸೂರು

ವಿ ವಿ ಮನುಕುಮಾರ್ ಬಿ.ಎಸ್‌ಸಿ., ಎಲ್.ಎಲ್.ಬಿ ವಕೀಲರು & ಸಲಹೆಗಾರರು
ನಂ. 66/1–ಬಿ1, 1ನೇ ಮಹಡಿ, 5ನೇ ಕ್ರಾಸ್, 3ನೇ ಮೇನ್, ಆರ್ ಕೆ ಮೆಡಿಕಲ್ಸ್ ಎದುರು, ಸರಸ್ವತಿಪುರಂ, ಮೈಸೂರು –570009. ಮೊ – 94482 22306

ಮೈಸೂರು ಮಿತ್ರ
43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು


13ನೇ ವರ್ಷದ ಪುಣ್ಯಸ್ಮರಣೆ



A.M. ಮಹದೇವಯ್ಯ
Rtd. ASI, ನಂಜನಗೂಡು

ನೀವು ನಮ್ಮನ್ನಗಲಿ ಇಂದಿಗೆ 13 ವರ್ಷ ಕಳೆದರೂ ನಿಮ್ಮ ನೆನಪಿನಲ್ಲೇ ಇರುವ
ದು:ಖತಪ್ತರು: ಪತ್ನಿ: ಗೌರಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಬೀಗರು ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬದವರು

ಭಾವಪೂರ್ಣ ಶ್ರದ್ಧಾಂಜಲಿ



ಕೆ.ಎಸ್.ನಾರಾಯಣಸ್ವಾಮಿ
ಅಬಕಾರಿ ಗುತ್ತಿಗೆದಾರರು, ಗೋಕುಲಂ, ಮೈಸೂರು

ಇವರು ದಿನಾಂಕ 9/11/2022 ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಸಂತಾಪ ಸೂಚಿಸುವವರು, ಶ್ರೀಮತಿ ವಿನೋದಮ್ಮ ಮತ್ತು ಕುಟುಂಬ, ಶ್ರೀ ಎಂ. ವೆಂಕಟರಮಣ ಮತ್ತು ಕುಟುಂಬ (ಕಾವೇರಿ ವೈನ್ಸ್, ಶ್ರೀರಂಗಪಟ್ಟಣ)